## ಭಾರತವನ್ನು ಪರಿಚಯಿಸುವ ಕುರಿತು

ಭಾರತವು ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯ ಪಡೆದ ಐವತ್ತನೇ ವಾರ್ಷಿಕೋತ್ಸವವನ್ನು ಅಧಿಕೃತವಾಗಿ ಆಚರಿಸುವ ಸಂದರ್ಭದಲ್ಲಿ ಎರಡು ಘಟನೆಗಳು ಭಾರತದ ರಾಜಕೀಯದತ್ತ ಅಂತಾರಾಷ್ಟ್ರೀಯ ಗಮನವನ್ನು ಸೆಳೆದವು. ಅವುಗಳಲ್ಲಿ ಮೊದಲನೆಯದೆಂದರೆ, ಭಾರತೀಯ ಸಂಸತ್ತಿನ ಜನಪ್ರಿಯ ಸದನವಾದ ಲೋಕಸಭೆಗೆ 1998ರ ಮಾರ್ಚ್‌ನಲ್ಲಿ ನಡೆದ 12ನೇ ಸಾರ್ವತ್ರಿಕ ಚುನಾವಣೆಯ ಫಲಿತಾಂಶ. ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷವು ಬಹುಮತದ ಹತ್ತಿರಕ್ಕೂ ಬರದೇ ಸತತ ನಾಲ್ಕನೇ ಬಾರಿಗೆ 'ಅತಂತ್ರ' ಸಂಸತ್ತು ನಿರ್ಮಾಣವಾಯಿತು. ಬಲಪಂಥೀಯ ಹಿಂದೂ ಮೂಲಭೂತವಾದಿಗಳ ಪಕ್ಷವೆಂದು ವಿದೇಶಿ ಶ್ರೋತೃಗಳಿಗೆ ವಿವರಿಸಲ್ಪಡುವ ಭಾರತೀಯ ಜನತಾಪಕ್ಷ ಮತ್ತು ಅದು ಇತ್ತೀಚೆಗೆ ಮೈತ್ರಿಯನ್ನು ಸಾಧಿಸಿದ ಅನೇಕ ಪ್ರಾದೇಶಿಕ ಮಿತ್ರಪಕ್ಷಗಳು ಇತರರಿಗಿಂತ ಉತ್ತಮ ಫಲಿತಾಂಶವನ್ನು ಪಡೆದಿವೆಯೆಂಬುದು ಸ್ಪಷ್ಟವಾಗಿದೆ. ಅನೇಕ ವರ್ಷಗಳಿಂದ ಅಧಿಕಾರಕ್ಕೆ ಹತ್ತಿರವಾಗುತ್ತಿದ್ದ ಬಿಜೆಪಿಯು ಅಂತಿಮವಾಗಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಈ ಘಟನೆಯನ್ನು ಭಾರತದ ಹೊರಗೂ ಆತಂಕದಿಂದ ಗಮನಿಸಲಾಯಿತು. ಏಕೆಂದರೆ  ಇದು, ಭಾರತದಲ್ಲಿನ ಬಹುತ್ವ ಪ್ರಜಾಪ್ರಭುತ್ವದ ಕೆಲವು ಸಾಧನೆಗಳನ್ನು ಹಿಂಪಡೆಯಬಹುದೆಂಬ ಭಯವನ್ನು ಮೂಡಿಸಿತು. ಅನೇಕರಿಗೆ ಮೂರನೇ ವಿಶ್ವದ ಮತ್ತೊಂದು ದೇಶವು ಜನಾಂಗೀಯ ಬಹುಮತ ರಾಜಕೀಯದ ವಿನಾಶದ ಮಾರ್ಗದಲ್ಲಿದೆಯೆಂಬಂತೆ ಭಾಸವಾಯಿತು.

ಇದಾದ ನಂತರ ಎರಡನೇ ಘಟನೆ ಶೀಘ್ರವೇ ಸಂಭವಿಸಿತು. ಹೊಸ ಮತ್ತು ಅಸ್ಥಿರ ಬಿಜೆಪಿ ಸರ್ಕಾರವು 1998ರ ಮೇನಲ್ಲಿ ಐದು ಅಣ್ವಸ್ತ್ರ ಪರೀಕ್ಷೆಗಳನ್ನು ನಡೆಸುವ ಮೂಲಕ ಅಣ್ವಸ್ತ್ರಗಳ ಬಗೆಗಿನ ಭಾರತದ 24 ವರ್ಷಗಳ ಸಂದಿಗ್ಧತೆಯನ್ನು ಅಂತ್ಯಗೊಳಿಸಲು ನಿರ್ಧರಿಸಿತು. ಭಾರತವು ತನ್ನನ್ನು ಅಣ್ವಸ್ತ್ರ ರಾಷ್ಟ್ರವೆಂದು ಘೋಷಿಸಿಕೊಂಡಿತಲ್ಲದೆ,  ಅಣ್ವಸ್ತ್ರವನ್ನು ಹೊಂದಿರುವ ರಾಷ್ಟ್ರಗಳ ಮೀಸಲು ಗುಂಪಿಗೆ ತನ್ನ ಪ್ರವೇಶವನ್ನು ಆಗ್ರಹಿಸಿತು. ಅಣ್ವಸ್ತ್ರ ರಾಷ್ಟ್ರಗಳ ಗುಂಪಿಗೆ ಇದು, ಸಂತೋಷದಾಯಕವೆನಿಸಲಿಲ್ಲ. ಪ್ರತಿಯಾಗಿ ಆರ್ಥಿಕ ದಿಗ್ಬಂಧನೆಗಳು ಮತ್ತು ದೂಷಣೆಗಳ ಪ್ರವಾಹವೇ ಹರಿದು ಬಂತು. ಭಾರತವನ್ನು ದುಷ್ಟ ರಾಷ್ಟ್ರವೆಂದು ಬಿಂಬಿಸಿದ ಟೈಮ್ ಪತ್ರಿಕೆಯು, ತನ್ನ ಮುಖಪುಟ ಸುದ್ದಿಯಲ್ಲಿ, “ವಿಶ್ವವು ಸುರಕ್ಷಿತವಾಗಿದೆಯೆಂದು ನೀವು ಭಾವಿಸುತ್ತಿರುವಾಗ ... ಭಾರತವು ಅಣ್ವಸ್ತ್ರವನ್ನು ಪ್ರಯೋಗಿಸುತ್ತಿದೆ” ಎಂಬುದಾಗಿ ಪ್ರಕಟಿಸಿತು. ಭಾರತವು ಪ್ರಸ್ತುತ ಇತಿಹಾಸದ ವಿರುದ್ಧ ಹೋಗಲು ನಿರ್ಧರಿಸಿರುವ ಅಂಶವು ಭಾರತದ ಮಿತ್ರರಿಗೆ ಶೋಕವನ್ನುಂಟುಮಾಡಿತು. ಅಣ್ವಸ್ತ್ರ ಪರೀಕ್ಷೆಗಳು ಗಣನೀಯ ಪ್ರಮಾಣದ ಜನಬೆಂಬಲವನ್ನು ಗಳಿಸಿತೆಂಬ ವಿಷಯವು, ಸಂಯಮಿತ ಉದಾರ ಪ್ರಜಾಪ್ರಭುತ್ವವಾಗಿ ಭಾರತದ ಭವಿಷ್ಯದ ಬಗ್ಗೆ ಅನೇಕರು ವ್ಯಕ್ತಪಡಿಸಿದ ಸಂದೇಹವನ್ನು ಪುಷ್ಟೀಕರಿಸಿತು.

ಭಾರತದ ರಾಜಕೀಯ ಇತಿಹಾಸದಲ್ಲಿ ಈ ಎರಡು ಘಟನೆಗಳು ಬಹುಶಃ ಅತ್ಯಂತ ಮಹತ್ವದ ಮೈಲುಗಲ್ಲುಗಳೇನಲ್ಲ. ಖಂಡಿತವಾಗಿಯೂ ಇವು, 1990ರ ದಶಕದ ಪ್ರಜಾಸತ್ತಾತ್ಮಕ ಬದಲಾವಣೆಯ ವ್ಯಾಪಕ ಪ್ರವೃತ್ತಿಗಳನ್ನು ಪ್ರತಿಬಿಂಬಿಸುವ ಪ್ರಾತಿನಿಧಿಕ ಘಟನೆಗಳಾಗಿರಲಿಲ್ಲ. ಆದಾಗ್ಯೂ, ಭಾರತದಂತಹ ದೇಶಗಳಿಗೆ ಮೀಸಲಾದ ಅಲ್ಪ ಪ್ರಮಾಣದ ಗಮನಾವಧಿಯ (attention span) ಅವಧಿಯ ತರ್ಕವು, ಭಾರತದ ಪ್ರಜಾಪ್ರಭುತ್ವದ 'ಜಾಗತಿಕ' ಕಲ್ಪನೆಯು, ಮುಂದಿನ ಅನೇಕ ವರ್ಷಗಳವರೆಗೆ, ಈ ಎರಡು ಘಟನೆಗಳಿಗೆ ಸಂಬಂಧಿಸಿದ ದೂರದರ್ಶನದ ಪ್ರಸಾರಗಳಿಂದ ರೂಪಿತವಾಗಲಿದೆಯೆಂಬುದನ್ನು ಖಾತರಿಪಡಿಸುತ್ತದೆ. ಪ್ರಸ್ತುತ ಅಂತಾರಾಷ್ಟ್ರೀಯ ಮಾಹಿತಿ (ಅ)ವ್ಯವಸ್ಥೆಯಲ್ಲಿ, ಪ್ರಥಮ ವಿಶ್ವದ ಹೊರಗಿನ ಪ್ರಜಾಪ್ರಭುತ್ವಗಳನ್ನು ಈಗಿನ ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳ ಇತಿಹಾಸ ಮತ್ತು ಅನಿಶ್ಚಿತತೆಗಳಿಂದ ರೂಪಿಸಲ್ಪಟ್ಟ ಮಾನದಂಡಗಳಿಂದ ನಿರ್ಣಯಿಸುವುದು ವಾಡಿಕೆಯಾಗಿದೆ. ಭಾರತದ ಪ್ರಜಾಪ್ರಭುತ್ವವು, ಅದು ಆರಂಭವಾದಾಗಿನಿಂದಲೂ ತನ್ನ ಆಂತರಿಕ ಪಕ್ಷೇಪಪಥದೊಡನೆ ಕೇವಲ ಸ್ಪರ್ಶೀಯಯ (ಅಪ್ರಸ್ತುತ) ಸಂಬಂಧವನ್ನು ಹೊಂದಿರುವ ಕಾರ್ಯಸೂಚಿಗೆ ಪ್ರತಿಕ್ರಿಯಿಸಬೇಕಿತ್ತಲ್ಲದೆ, ಬೇರೊಬ್ಬರ ಇತಿಹಾಸವನ್ನು ಬರೆಯಲು ನಿಗದಿಸಲ್ಪಟ್ಟಿರುವ ದಾಖಲೆ ಪುಸ್ತಕದಲ್ಲಿ ತನ್ನ ಜೀವನವನ್ನು ದಾಖಲಿಸಬೇಕಿತ್ತು. ಭಾರತೀಯ ಮಾದರಿಯ ಪ್ರಜಾಪ್ರಭುತ್ವೀಕರಣವನ್ನು ಅದರ ನಿರ್ದಿಷ್ಟತೆಯಲ್ಲಿ

ಅರ್ಥಮಾಡಿಕೊಳ್ಳುವ ಮೂಲಕ ಭಾರತದ ಪ್ರಜಾಸತ್ತಾತ್ಮಕ ಅನುಭವದ ಸೂಕ್ತ ಮೌಲ್ಯಾಂಕನವನ್ನು ಕೈಗೊಳ್ಳಬೇಕಾಗುತ್ತದೆ. ಆ ಮಾದರಿಯನ್ನು ವಿವರಿಸುವ ಮೂಲಕ ನಾನು ಇದನ್ನು ಪ್ರಾರಂಭಿಸುತ್ತಿದ್ದೇನೆ. ನಂತರ, ಪ್ರಜಾಸತ್ತಾತ್ಮಕ ರಾಜಕೀಯವು ನಾನು ಕಂಡಂತೆ ಮೂರು ಹಂತಗಳಲ್ಲಿ ಹೇಗೆ ಕಾರ್ಯನಿರ್ವಹಿಸಿದೆ ಎಂಬುದನ್ನು ನಿರೂಪಿಸಲಿದ್ದೇನೆ. ಅಂತಿಮವಾಗಿ, ಅದರ ಯಶಸ್ಸು, ವಿರೂಪಗಳು, ಅಂತರ್ಗತ ದೌರ್ಬಲ್ಯಗಳು ಮತ್ತು ಅದು ಎದುರಿಸುತ್ತಿರುವ ಸವಾಲುಗಳನ್ನು ಕುರಿತ ಸಂಕ್ಷಿಪ್ತ ಮೌಲ್ಯಮಾಪನಕ್ಕೆ ಹಿಂದಿರುಗುತ್ತೇನೆ.

II

ಐವತ್ತು ವರ್ಷಗಳ ಹಿಂದೆ ಭಾರತವು ತನ್ನ ಪ್ರಯಾಣವನ್ನು ಆರಂಭಿಸಿದಾಗ, ಅದರ ಗುರಿ ಮತ್ತು ಮಾರ್ಗವನ್ನು ವಿವರಿಸುವುದು ಸುಲಭವಾಗಿತ್ತು. ಏಕೆಂದರೆ, ಇದನ್ನು ವಿವರಿಸುವ ವಿಶೇಷಾಧಿಕಾರವು ಯಾವುದೇ ವಿರೋಧವಿಲ್ಲದೆ, ಪಾಶ್ಚಾತ್ಯೀಕರಣಗೊಂಡ ಒಂದು ಚಿಕ್ಕ ಭಾರತೀಯ ಮೇಲ್ವರ್ಗದ ಸುಪರ್ದಿನಲ್ಲಿತ್ತು. ಅವರೆಲ್ಲರೂ ಒಂದೇ ರೀತಿ ಆಲೋಚಿಸಲಿಲ್ಲವಾದರೂ, ಅವರ ಭಿನ್ನತೆಗಳು ಅಪಾರವಾಗಿರಲಿಲ್ಲ. ತತ್ವಾದರ್ಶಗಳು ಮತ್ತು ಸಾಮಾಜಿಕ ಸಂದರ್ಭಗಳ ವಿವಿಧ ಭಿನ್ನತೆಗಳು ಸಾಕಷ್ಟು ಪ್ರಮಾಣದಲ್ಲಿ ಪರಸ್ಪರ ವ್ಯಾಪ್ತಗೊಂಡಿದ್ದವು (overlap). ಭಾರತದ ಪ್ರಜಾಪ್ರಭುತ್ವದ ಮಾದರಿಯನ್ನು ಆ ಸಾಮಂಜಸ್ಯದ ನಿಟ್ಟಿನಲ್ಲಿ ಸ್ಥಾಪಿಸಲಾಯಿತು. ಅಲ್ಲಿಂದೀಚೆಗೆ ಭಾರತದ ಮಾದರಿಯನ್ನು ವ್ಯಾಖ್ಯಾನಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುಸುವವರ ಸಂಖ್ಯೆಯಲ್ಲಿ ಅಸಾಧಾರಣ ಹೆಚ್ಚಳವು ಕಂಡುಬಂದಿದೆ. ನಿಸ್ಸಂದೇಹವಾಗಿ ಬ್ರಿಟಿಷ್ ಸಾಮ್ರಾಜ್ಯದ ಪರಂಪರೆಯ ಮೂಲ ವಾರಸುದಾರರು ಪ್ರಾರಂಭಿಸಿದ ಪ್ರಕ್ರಿಯೆಗಳ ಯಶಸ್ಸು ಇದಕ್ಕೆ ಕಾರಣವಾಗಿದೆ. ಅಲ್ಲದೆ, ಸಾಮೂಹಿಕ ತತ್ವಾದರ್ಶಗಳ ಸಂಕೀರ್ಣತೆಗಳು ಮತ್ತು ಸಾಮೂಹಿಕ ಕಾರ್ಯದ ಕುಟಿಲ ತರ್ಕಗಳ ನಮ್ಮ ತಿಳಿವಳಿಕೆಯು ಭಾರತದ ಮಾದರಿಯ ಅರ್ಥದ ಕುರಿತಾದ ಪ್ರಶ್ನೆಗೆ ವಿಶ್ವಾಸಾರ್ಹವಾದ ಉತ್ತರ ನೀಡಲಾಗದಂತೆ ಮಾಡಿವೆ.

ಮೊದಲ ನೋಟದಲ್ಲಿ, ಭಾರತದ ಪ್ರಜಾಸತ್ತಾತ್ಮಕ ಉಪಕ್ರಮದ ಪ್ರಾರಂಭಿಕ ವಿನ್ಯಾಸವು ಮೂಲಸ್ವರೂಪದ್ದೆಂಬಂತೆ ಕಾಣದೇ ಇರಬಹುದು. ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವದ ದೃಷ್ಟಿಕೋನವನ್ನು ಸ್ಪಷ್ಟಪಡಿಸುವ ಅನೇಕ ಪ್ರಯತ್ನಗಳು ಪಾಶ್ಚಿಮಾತ್ಯ ದೇಶಗಳ ಉದಾರ ಪ್ರಜಾಪ್ರಭುತ್ವದ ಅನುಭವವನ್ನು ಅನುಕರಿಸುವ ಬಯಕೆಯಂತೆ ಕಂಡುಬರುತ್ತವೆ. ರಾಷ್ಟ್ರೀಯತಾವಾದಿ ನಾಯಕತ್ವದ ಭಾಷಣಗಳು ಮತ್ತು ಬರಹಗಳು ಹಾಗೂ ಸಂವಿಧಾನ ಸಭೆಯ ಚರ್ಚೆಗಳು ಪಾಶ್ಚಿಮಾತ್ಯ ದೇಶಗಳ ಪ್ರಜಾಪ್ರಭುತ್ವಗಳ ಕುರಿತಾದ ಅಚ್ಚುಮೆಚ್ಚಿನ ಉಲ್ಲೇಖಗಳಿಂದ ತುಂಬಿಹೋಗಿವೆ. ವಾಸ್ತವವಾಗಿ, ಭಾರತದ ಸಂವಿಧಾನದ ಮೂಲ ವಿನ್ಯಾಸವನ್ನು ಪ್ರಜ್ಞಾಪೂರ್ವಕವಾಗಿ ಐರೋಪ್ಯ ಮತ್ತು ಅಮೆರಿಕಾದ ಪರಂಪರೆಯಿಂದ ಪಡೆದುಕೊಳ್ಳಲಾಗಿದೆ. ಕಾರ್ಯಾಂಗ ಮತ್ತು ಶಾಸಕಾಂಗಗಳ ನಡುವಿನ ಸಂಬಂಧದ ನಿಟ್ಟಿನ ಸಂಸದೀಯ ವ್ಯವಸ್ಥೆ, ಕೇಂದ್ರ ಮತ್ತು ರಾಜ್ಯಗಳ ನಡುವಿನ ಪಾರಸ್ಪರಿಕ ಕ್ರಿಯೆಗಳನ್ನು ನಿರ್ವಹಿಸುವ ಒಕ್ಕೂಟ ಸಂರಚನೆ, ಮೂಲಭೂತ ಹಕ್ಕುಗಳನ್ನು ಕುರಿತ ವಿಚಾರ, ಈ ಹಕ್ಕುಗಳನ್ನು ಮತ್ತು ಸ್ವತಃ ಸಂವಿಧಾನವನ್ನು ರಕ್ಷಿಸುವ ಒಂದು ಸ್ವತಂತ್ರವಾದ ನ್ಯಾಯಾಂಗ ವ್ಯವಸ್ಥೆ... ಇವೆಲ್ಲವೂ ಪಶ್ಚಿಮದ ಸಾಂವಿಧಾನಿಕ ಚರಿತ್ರೆಯ ವಿದ್ಯಾರ್ಥಿಗಳಿಗೆ ಅತ್ಯಂತ ಪರಿಚಿತವೆನಿಸುತ್ತವೆ. ಸಂವಿಧಾನದ ಅನೇಕ ನಿಬಂಧನೆಗಳು, ವಸಾಹತುಶಾಹಿ ಪ್ರಭುಗಳು ರೂಪಿಸಿದ 1935ರ ಭಾರತ ಸರ್ಕಾರ ಕಾಯ್ದೆಯಲ್ಲಿನ ತದನುರೂಪದ (corresponding) ನಿಬಂಧನೆಗಳನ್ನು ಅಕ್ಷರಶಃ ಉಳಿಸಿಕೊಂಡಿವೆ.

ಆದರೂ ಭಾರತದ ಸಂವಿಧಾನವು ಬ್ರಿಟಿಷ್ ಮಾದರಿ ಅಥವಾ ಇನ್ಯಾವುದೇ ಅಸ್ತಿತ್ವದಲ್ಲಿರುವ ಸಂವಿಧಾನದ ಸರಳ ಅನುಕರಣೆಯಾಗಿರಲಿಲ್ಲ. ಏಕೆಂದರೆ ಅನುಕರಣೆಯ ಯಾವುದೇ ಪ್ರಯತ್ನವು ಮೌಲ್ಯವರ್ಧನೆಯಿಂದ ಹೊರತಾಗಿರುವುದಿಲ್ಲ. ವಿವಿಧ ಪಾಶ್ಚಾತ್ಯ ಮಾದರಿಗಳಿಂದ ಆಯ್ದ ಅಂಶಗಳನ್ನು (ಬ್ರಿಟನ್ನಿನಿಂದ ಸಂಸದೀಯ ವ್ಯವಸ್ಥೆ, ಅಮೆರಿಕಾದಿಂದ ನ್ಯಾಯಾಂಗ ವ್ಯವಸ್ಥೆ ಮತ್ತು ಹಕ್ಕುಗಳ ಅಧಿನಿಯಮ, ಐರ್ಲೆಂಡ್‌ನಿಂದ ನಿರ್ದೇಶಕ ತತ್ತ್ವಗಳು ಇವೇ ಮುಂತಾದವು) ಒಂದು ವಿಶಿಷ್ಟ ಮಿಶ್ರಣದಲ್ಲಿ ಒಟ್ಟಾಗಿ ಸಂಯೋಜಿಸಲಾಯಿತಲ್ಲದೆ, ಕೆಲವು ಪರಿಚಿತ ಪಾಶ್ಚಾತ್ಯ ವಿಚಾರಗಳು ಮತ್ತು ಸಂಸ್ಥೆಗಳನ್ನು ಮರುವ್ಯಾಖ್ಯಾನಿಸುವ ಮೂಲಕ ಹಲವಾರು ನಿರ್ದಿಷ್ಟ ಭಾರತೀಯ ಅಂಶಗಳನ್ನು ಪರಿಚಯಿಸಲಾಯಿತು. ರಾಜ್ಯದ

ಸಕಾರಾತ್ಮಕ ಕಾರ್ಯನೀತಿಗಳಲ್ಲಿ ವ್ಯಕ್ತಿಗೆ ಬದಲಾಗಿ ಸಮುದಾಯವನ್ನು ಪೌರತ್ವದ ಸಂಭಾವ್ಯ ಆಧಾರವೆಂದು ಒಪ್ಪಿಕೊಳ್ಳಲಾಗಿದ್ದು, ಜಾತ್ಯತೀತತೆಯನ್ನು ನಿರ್ದಿಷ್ಟವಾಗಿ ಭಾರತೀಯ ರೀತಿಯಲ್ಲಿ ಮರುವ್ಯಾಖ್ಯಾನಿಸಲಾಗಿದೆ. ಇವುಗಳು ಮತ್ತು ಇತರೆ ಅನೇಕ ಉದಾಹರಣೆಗಳು ಆಧುನಿಕ ಭಾರತದಲ್ಲಿ ಅನುಕರಣೆಯ ರೂಪದ ಸೃಜನಶೀಲತೆಯು ರಾಜಕೀಯ ಆವಿಷ್ಕಾರದ ಆದ್ಯತಾ ಮಾದರಿಯೆಂಬುದನ್ನು ನಿದರ್ಶಿಸುತ್ತವೆ. ಪ್ರಾರಂಭದಿಂದಲೂ, ಭಾರತೀಯ ಪ್ರಜಾಪ್ರಭುತ್ವ ಮಾದರಿಯು ಆಧುನಿಕ ಉದಾರ ಪ್ರಜಾಪ್ರಭುತ್ವ ಭಾಷೆಯ ಆಯ್ದ ಬಳಕೆ ಮತ್ತು ಸೂಕ್ಷ್ಮ ಅಳವಡಿಕೆಯನ್ನು ಒಳಗೊಂಡಿದೆ.

ಆದಾಗ್ಯೂ, ಭಾರತದ ಪ್ರಜಾಪ್ರಭುತ್ವೀಕರಣದ ಮಾರ್ಗದಲ್ಲಿ ಸಂವಿಧಾನವು ನವೀನ ದೃಷ್ಟಿಕೋನದ ಕೇಂದ್ರ ಭಾಗವಾಗಿರಲಿಲ್ಲ. ಅದರ ಸಾರವು ಕಳೆದ ಐದು ದಶಕಗಳಲ್ಲಿ ಪ್ರಜಾಪ್ರಭುತ್ವದ ಆಚರಣೆಯನ್ನು ತಿಳಿಸಿದ ಅಲಿಖಿತ ರಾಜಕೀಯ ಮಾದರಿಯಲ್ಲಿತ್ತು. ಭಾರತದ ಮಾದರಿಯು, ಅದರ ಚತುರ ವ್ಯಾಖ್ಯಾನಕಾರರಾದ ರಜನಿಕೊಠಾರಿ ಅವರ 'ಭಾರತದಲ್ಲಿ ರಾಜಕೀಯ' (Politics in India) ಎಂಬ ಮೇರುಕೃತಿಯಲ್ಲಿ ವಾದಿಸಿರುವಂತೆ, ರಾಜ್ಯಾಡಳಿತದ ಪ್ರಾಮುಖ್ಯತೆ ಮತ್ತು ರಾಜ್ಯಾಡಳಿತದ ಎಲ್ಲೆಗಳ ಮರುವ್ಯಾಖ್ಯಾನವನ್ನು ಒಳಗೊಂಡಿದೆ. ಹೀಗಾಗಿ, ರಾಜಕೀಯ ಕ್ಷೇತ್ರವೊಂದೇ ಭಾರತದ ಗಣ್ಯರು ರೂಪಾಂತರಿಸಲು ಯತ್ನಿಸಿದ ಕ್ಷೇತ್ರವಾಗಿರಲಿಲ್ಲ. ಇದು ಆಧುನಿಕತೆಯೊಡನೆ ಭಾರತದ ಸಮಾಗಮದ ಕೇಂದ್ರ ಭಾಗದಲ್ಲಿತ್ತು. ಭಾರತದ ಪ್ರಮುಖರು ಆ ಕಾಲದಲ್ಲಿ ಲಭ್ಯವಿದ್ದ ರಾಜಕೀಯ ಮಾದರಿಗಳಿಗಿಂತ ವಿಭಿನ್ನವಾದ ದಿಟ್ಟ ನಡೆಯ ಮೂಲಕ ಏಕಕಾಲದಲ್ಲಿ ಅನೇಕ ಗುರಿಗಳನ್ನು ಅನುಸರಿಸುವ ಮಾರ್ಗವನ್ನು ಆಯ್ಕೆಮಾಡಿಕೊಂಡರು: ಪ್ರಜಾಪ್ರಭುತ್ವವನ್ನು ಕಾರ್ಯನಿರ್ವಹಿಸುವಂತೆ ಮಾಡುವುದು; ವಿಶಾಲವಾದ ವೈವಿಧ್ಯಮಯ ಸಮಾಜದಲ್ಲಿ ಏಕೈಕ ರಾಜಕೀಯ ಸಮುದಾಯವನ್ನು ಸೃಷ್ಟಿಸುವುದು, ಪಾಶ್ಚಾತ್ಯ ಶೈಲಿಯ ಆರ್ಥಿಕ ಅಭಿವೃದ್ಧಿಯನ್ನು ಅನುಸರಿಸುವುದು; ಮತ್ತು ಸಮಾಜದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವುದು.

ತಾವು ಎದುರಿಸಿದಂತಹ ಪ್ರಮಾಣದಲ್ಲಿ ಆಡಳಿತದ ಯಾವುದೇ ಐತಿಹಾಸಿಕ ಪೂರ್ವನಿದರ್ಶನಗಳು ಇಲ್ಲದಂತಹ ಸಮಾಜದಲ್ಲಿ ರಾಜಕೀಯ ಪ್ರಜಾಪ್ರಭುತ್ವವನ್ನು, ಅದರಲ್ಲೂ ಹೆಚ್ಚು ನಿರ್ದಿಷ್ಟವಾಗಿ ಸಾಂವಿಧಾನಿಕ-ಪ್ರಾತಿನಿಧಿಕ-ಪ್ರಜಾಸತ್ತಾತ್ಮಕ-ಗಣತಂತ್ರವಾದಿ ರೂಪದ ಸರ್ಕಾರವನ್ನು ಅವರು ಆಯ್ಕೆಮಾಡಿಕೊಂಡರು. ಪ್ರಜಾಪ್ರಭುತ್ವವನ್ನು ಆಯ್ಕೆಮಾಡಿಕೊಳ್ಳುವ ಮೂಲಕ ಸಮಾನರ ರಾಜಕೀಯ ಸಮುದಾಯವೊಂದರ ಮೂಲಭೂತ ಸಮಾನತಾವಾದಿ ನಿರೀಕ್ಷೆಗಳಿಗೆ ಸಹ ಅವರು ತಮ್ಮನ್ನು ತಾವು ಅನಾವೃತಗೊಳಿಸಿಕೊಂಡರು. ಇಂತಹ ಸಮುದಾಯದಲ್ಲಿ ಜನರನ್ನು ಬೇರೆ ಯಾರೂ ಆಳುವುದಿಲ್ಲ, ಅವರು ತಮ್ಮನ್ನು ತಾವೇ ಆಳಿಕೊಳ್ಳುತ್ತಾರೆ. ತಾವು ಸ್ಥಾಪಿಸಿದ್ದ ಸರ್ಕಾರದ ಮಾದರಿಯಿಂದ ಇದು ದೂರದ ಆದರ್ಶವೆಂಬುದನ್ನು ಕೆಲವರು ಅರ್ಥಮಾಡಿಕೊಂಡರು. ಎರಡನೆ ಗುರಿಯು ಮೊದಲನೇ ಗುರಿಯಲ್ಲಿ ಅಡಕವಾಗಿದೆ: ಭಾರತವನ್ನು ನಿರೂಪಿಸಿದ ವಿಸ್ಮಯಕಾರಿ ವೈವಿಧ್ಯತೆಗಳ ನಿಟ್ಟಿನಲ್ಲಿ, ಭಾರತದ ಪ್ರಜಾಪ್ರಭುತ್ವದ ಉಳಿವಿಗೆ, ಭಾರತವು ಇತ್ತೀಚೆಗೆ ಅರ್ಜಿಸಿದ ರಾಜಕೀಯ ಎಲ್ಲೆಗಳ ನಡುವೆ ದೇಶಾದ್ಯಂತ ಏಕೈಕ ರಾಜಕೀಯ ಸಮುದಾಯವನ್ನು ಸೃಷ್ಟಿಸುವ ಅವಶ್ಯಕತೆಯಿದೆ. ಭಾರತ ಮತ್ತು ಪಾಕಿಸ್ತಾನದ ಭೂಪ್ರದೇಶಗಳ ವಿಭಜನೆಯ ಪಾಠಗಳು ಆಗ ರಾಷ್ಟ್ರೀಯ ಐಕ್ಯತೆ, ನಂತರದಲ್ಲಿ ರಾಷ್ಟ್ರ ನಿರ್ಮಾಣ ಎಂದು ಕರೆಯಲ್ಪಡುತ್ತಿದ್ದ ಅಗತ್ಯತೆಯ ಅತ್ಯಂತ ನೋವಿನ ನೆನಪುಗಳಾಗಿವೆ. ಇದು ಹೊಸದಾಗಿ ಅರ್ಜಿಸಿದ ಅವಶ್ಯಕತೆಯಾಗಿತ್ತು. ಆಧುನಿಕ ಸಾರ್ವಜನಿಕ ವಲಯದ ಸೃಷ್ಟಿಯು ಪರಸ್ಪರ ಯಾವ ಸಂಬಂಧವೂ ಇಲ್ಲದ ಅತ್ಯಧಿಕ ಸಂಖ್ಯೆಯ ಸಮುದಾಯಗಳನ್ನು ಒಟ್ಟಿಗೆ ತರುವ ಅಸಾಧ್ಯವೆನಿಸುವಂತಹ ಅವಶ್ಯಕತೆಯನ್ನು ಸೃಷ್ಟಿಸಿತು. ಆಧುನಿಕ ಸಾರ್ವಜನಿಕ ವಲಯವು ಈ ಅವಶ್ಯಕತೆಯನ್ನು ಪೂರೈಸುವ ಸಂಪನ್ಮೂಲಗಳನ್ನು ಸಹ ಒದಗಿಸಿತು.

ಆರ್ಥಿಕತೆಯ ಸಾಮ್ರಾಜ್ಯದಲ್ಲಿ, ಭಾರತದ ಪ್ರಮುಖರು ಪಾಶ್ಚಾತ್ಯ ಶೈಲಿಯ ಅಭಿವೃದ್ಧಿಯನ್ನು ಆಯ್ಕೆಮಾಡಿಕೊಂಡರು. ಅಭಿವೃದ್ಧಿಯ ಪಥವು ಆ ಪಥದಲ್ಲಿ ಸಾಗಲು ಇಚ್ಛಿಸುವ ಯಾರಿಗೇ ಆಗಲಿ, ಮುಕ್ತವಾಗಿರುತ್ತದೆಂಬ ನಂಬಿಕೆ ಅವರದಾಗಿತ್ತು. ಅವರಿಗೆ ಬಹುಶಃ, ಬಳಕೆಯ ವಸ್ತುಗಳ (consumer goods) ಜಗತ್ತಿಗೆ ಪ್ರತಿಯೊಬ್ಬರಿಗೂ ಪವಾಡಸದೃಶ ಪ್ರವೇಶವು ದೊರೆಯುತ್ತದೆಂಬ ನಿರೀಕ್ಷೆಯಿರಲಿಲ್ಲ. ಆದರೆ ಸಮಗ್ರ ಅಂಶಗಳಿಗೆ ಸಂಬಂಧಿಸಿದಂತೆ

ಗಣನೀಯವಾದ ಮತ್ತು ತ್ವರಿತ ಆರ್ಥಿಕ ಬೆಳವಣಿಗೆಯನ್ನು ಅವರು ನಿರೀಕ್ಷಿಸಿದರು. ಆರ್ಥಿಕ ಗುರಿಗಳು, ಭಾರತವನ್ನು ಅಭಿವೃದ್ಧಿ ಹೊಂದಿದ ಜಗತ್ತಿನಿಂದ ವಿಭಿನ್ನವಾಗಿಸಿರುವ ಐತಿಹಾಸಿಕ ಅಂತರವನ್ನು ಕಡಿಮೆಗೊಳಿಸುವುದನ್ನು ಮತ್ತು ಅರ್ಥಿಕ ಬೆಳವಣಿಗೆಯ ಲಾಭಗಳು ಗಣನೀಯ ಪ್ರಮಾಣದಲ್ಲಿ ಬಡವರಿಗೆ ದೊರೆಯುವುದನ್ನು ಒಳಗೊಂಡಿತ್ತು. ಅಂತಿಮವಾಗಿ, ತಮಗೆ ಪರಂಪರಾಗತವಾಗಿ ದೊರೆತ ಸಮಾಜದ ಸ್ವರೂಪದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವುದು ಅವರ ಗುರಿಯಾಗಿತ್ತು. ಸಾಂಪ್ರದಾಯಿಕ ಸಾಮಾಜಿಕ ಶ್ರೇಣಿ ವ್ಯವಸ್ಥೆ ಮತ್ತದರ ಅಸಮಾನತೆಗಳನ್ನು ನಿರ್ಮೂಲನೆಮಾಡುವ ಆಮೂಲಾಗ್ರ ಸುಧಾರಣೆಯ ಇಚ್ಛೆಯಲ್ಲಿ ಸಹಭಾಗಿಯಾಗದವರು ಸಹ ಜಾತಿ ವ್ಯವಸ್ಥೆಯ ಅತ್ಯಂತ ಕೆಟ್ಟ ಪರಿಣಾಮಗಳ ನಿರ್ಮೂಲನೆಯನ್ನು ಎದುರುನೋಡುತ್ತಿದ್ದಾರೆ. ಜನರ ಸಾಂಪ್ರದಾಯಿಕ ಮತ್ತು ಸಂಕುಚಿತ ನಂಬಿಕೆಗಳನ್ನು ಆಧುನಿಕ 'ವಿಶ್ವಬಂಧು' (cosmopolitan) ಮೌಲ್ಯಗಳಾಗಿ ರೂಪಾಂತರಿಸುವ ಸಾಮಾಜಿಕ ಆಧುನೀಕರಣದ ಗುರಿಯನ್ನು ವ್ಯಾಪಕವಾಗಿ ಸಹಭಾಜಿಸಲಾಯಿತು (share).

ಪ್ರಜಾಪ್ರಭುತ್ವವು ಅನೇಕ ಗುರಿಗಳಲ್ಲಿನ ಒಂದು ಗುರಿಯಲ್ಲ. ಅದು ಈ ಎಲ್ಲ ಗುರಿಗಳನ್ನು ಏಕಕಾಲದಲ್ಲಿ ಸಾಕಾರಗೊಳಿಸುವ ಪ್ರಮುಖ ಸಾಧನವೂ ಹೌದು. ಆಧುನಿಕ ರಾಜ್ಯದ ಅಧಿಕಾರ, ಸಾರ್ವತ್ರಿಕ ವಯಸ್ಕ ಮತದಾನದ ಸಂಘಟಿಸುವ ಸಾಮರ್ಥ್ಯ, ಸ್ಪರ್ಧಾತ್ಮಕ ರಾಜಕೀಯದ ಚಲನಶೀಲತೆ, ರಾಜಕೀಯ ಸಂಸ್ಥೆಗಳ ವ್ಯವಸ್ಥೆಯ ಬಿಗಿ ಹಿಡಿತ, ತಿಳಿವಳಿಕಸ್ಥ ಗಣ್ಯರ ದೂರದೃಷ್ಟಿ, ಇವುಗಳು ಅಧುನೀಕರಣಕ್ಕಾಗಿ ಭಾರತವು ಅಳವಡಿಸಿಕೊಂಡ ರಾಜಕೀಯ ಕೇಂದ್ರಿತ ವಿಧಾನದ ಪ್ರಮುಖ ಅಂಶಗಳಾಗಿವೆ. ವಸಾಹತುಶಾಹಿ ಸರ್ಕಾರವು ರಾಜ್ಯಾಡಳಿತದ ಎಲ್ಲೆಗಳನ್ನು ಗಣನೀಯ ಪ್ರಮಾಣದಲ್ಲಿ ವಿಸ್ತರಿಸಿಕೊಂಡಿತ್ತು. ಅಲ್ಲದೆ ರಾಜ್ಯಾಡಳಿತದ ಎಲ್ಲೆಗಳು ಯಾವುದಾಗಿರಬೇಕು ಎಂದು ನಿರ್ಧರಿಸುವ ಮಹತ್ವಪೂರ್ಣ ಸ್ವಯಂ ಪ್ರತಿಫಲಿತ ವಿಶೇಷಾಧಿಕಾರವನ್ನು ರಾಜಕಾರಣಕ್ಕೆ ಅನುಬಂಧಿಸಿತು (annexed). ರಾಷ್ಟ್ರವಾದಿ ಚಳುವಳಿಯು. ವಸಾಹತುಶಾಹಿ ಅಧಿಕಾರವು ಅಂತರವನ್ನು ಕಾಯ್ದುಕೊಂಡಿದ್ದ ವಿವಿಧ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳನ್ನು ರಾಜಕೀಯ ಕಾರ್ಯಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವ ಮೂಲಕ ಇದನ್ನು ಮತ್ತಷ್ಟು ವಿಸ್ತರಿಸಿತು. ಆಧುನಿಕ ಭಾರತ ದೇಶವು ಈ ವಿಸ್ತಾರವಾದ ಪ್ರದೇಶದ ಮೇಲೆ ಅಧಿಕಾರವನ್ನು ಪ್ರಯೋಗಿಸುವ ಮೂಲಕ ಮೇಲೆ ತಿಳಿಸಿದ ನಾಲ್ಕು ವಿಧದ ಗುರಿಗಳನ್ನು ಸಾಕಾರಗೊಳಿಸಲು ಅಗತ್ಯವಿರುವ ಸಾಮಾಜಿಕ ಪರಿವರ್ತನೆಯನ್ನು ತರಬೇಕಿದೆ. ಸಾಂವಿಧಾನಿಕ ಸಂಸ್ಥೆಗಳು ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುವುದನ್ನು ಖಾತರಿಪಡಿಸಿಕೊಂಡು, ವಿಸ್ತೃತ ವ್ಯಾಪ್ತಿಯ ಅಧಿಕಾರಶಾಹಿಯ ಮೂಲಕ ಅದನ್ನು ಪರಿಣಾಮಕಾರಿಯಾಗಿಸಬೇಕಿದೆ. ಸಾರ್ವತ್ರಿಕ ವಯಸ್ಕ ಮತದಾನದ ಉಪಕ್ರಮವು ಇಲ್ಲಿಯವರೆಗೆ ಕಂಡಿರದಷ್ಟು ಸಂಖ್ಯೆಯ ಸಹಭಾಗಿಗಳನ್ನು ಆಡಳಿತಕ್ಕೆ ಸೆಳೆಯುವ ಮತ್ತು ಅದರ ಫಲಿತಾಂಶಕ್ಕೆ ಅವರ ಒಪ್ಪಿಗೆಯನ್ನು ಪಡೆಯುವ ಉದ್ದೇಶವನ್ನು ಹೊಂದಿತ್ತು. ಮುಕ್ತ ಚುನಾವಣಾ ಸ್ಪರ್ಧೆಯು ರಾಜಕೀಯ ಕಾರ್ಯಭಾಗಿಗಳ ಸಾಮರ್ಥ್ಯವನ್ನು ಸಜ್ಜುಗೊಳಿಸುವ ಚೈತನ್ಯವಾಗಿತ್ತು. ರಾಜಕೀಯ ಪಕ್ಷಗಳು ಸೃಜನಾತ್ಮಕ ಪರಿವರ್ತನೆಯ ಉದ್ದೇಶಗಳಿಗಾಗಿ ಈ ಶಕ್ತಿಯನ್ನು ಸುವ್ಯವಸ್ಥಿತಗೊಳಿಸಬೇಕಿದೆ. ತಿಳಿವಳಿಕಸ್ಥರಾದ ರಾಜಕೀಯ ಗಣ್ಯರು ದೊಡ್ಡದಾದ ಆದರೆ ದೂರದಲ್ಲಿರುವ ಗುರಿಯ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುವ ಮೂಲಕ ಮಾರ್ಗದರ್ಶನವನ್ನು ನೀಡಬೇಕಿದೆ.

ಇದೆಲ್ಲವನ್ನೂ ಕನಿಷ್ಠಪಕ್ಷ ಸಂವಿಧಾನದ ವಿಧ್ಯುಕ್ತ ಪಠ್ಯವೂ ಸೇರಿದಂತೆ ಎಲ್ಲಿಯೂ ತಿಳಿಯಪಡಿಸಿಲ್ಲ. ಐವತ್ತು ವರ್ಷಗಳ ಅಂತರದಿಂದ ನೋಡಿದಾಗ ವಿವೇಕಯುತ ನಿರ್ಣಯಗಳು, ಅರೆ-ಪರೀಕ್ಷಿತ ನಿಶ್ಚಿತಾಭಿಪ್ರಾಯಗಳು ಮತ್ತು ಅಪ್ಪಟ ಭರವಸೆಗಳ ಮಿಶ್ರಣವು ಯಾವ ರೀತಿಯಲ್ಲಿರಬೇಕಿತ್ತು ಎಂಬುದರ ಸ್ಪಷ್ಟ ವಿನ್ಯಾಸವನ್ನು ಸುಲಭವಾಗಿ ಕಾಣಬಹುದು. ಮೇಲಿನ ಭಾರತೀಯ ಮಾದರಿಯ ನಿರೂಪಣೆಯನ್ನು ಪ್ರಮುಖವಾಗಿ ಸ್ವಾತಂತ್ರ್ಯಾನಂತರದ ಮೊದಲ ಎರಡು ದಶಕಗಳಲ್ಲಿ ಪ್ರಜಾಸತ್ತಾತ್ಮಕ ರಾಜಕೀಯದ ಕಾರ್ಯನಿರ್ವಹಣೆಯನ್ನು ಕುರಿತ ರಜನಿ ಕೊಠಾರಿಯವರ ಸೂಕ್ಷ್ಮ ವ್ಯಾಖ್ಯಾನದಿಂದ ಪಡೆದುಕೊಳ್ಳಲಾಗಿದೆ. ಭಾರತದ ರಾಜಕೀಯದ ಐತಿಹಾಸಿಕ ಪಥವನ್ನು ಈ ಮಾದರಿಯ ವಿರುದ್ಧವಾಗಿ ಮೌಲ್ಯಮಾಪನಮಾಡಬೇಕೆಂದು ಕೊಠಾರಿಯವರು ಆಗ್ರಹಿಸುತ್ತಾರೆ. ಭಾರತೀಯ ಮಾದರಿಯು ಚರ್ಚೆಯ ಪ್ರಾರಂಭದ ಬಿಂದುವಾಗಬೇಕೆಂದು ವಾದಿಸುವ

ಮೂಲಕ ಪಾಶ್ಚಾತ್ಯವಲ್ಲದ ಸಮಾಜಗಳಲ್ಲಿದ್ದ ಪ್ರಜಾಪ್ರಭುತ್ವದ ಬಗೆಗಿನ ಆಗಿನ ಪ್ರಬಲ ಚಿಂತನೆಯ ವಿಧಾನದಿಂದ ಅವರು ಆಗಲೇ ದೂರಸರಿದಿದ್ದರು. ಆಧುನೀಕರಣದ ಸರಳ ಸಾರ್ವತ್ರಿಕ ಚೌಕಟ್ಟಿನಲ್ಲಿ ರೂಪಿಸಲ್ಪಟ್ಟಿರುವ ಪ್ರಬಲ ವಿಧಾನವು ರಾಜನೈತಿಕ ವಿಕಾಸವನ್ನು; ಸಾಂಪ್ರದಾಯಿಕ ಸಮಾಜವು ಪಾಶ್ಚಾತ್ಯ ದೇಶಗಳ ಮುಂದುವರಿದ ಸಮಾಜಗಳ ರಾಜಕೀಯ ವ್ಯವಸ್ಥೆಯೊಡನೆ ಹೋಲಿಕೆಯಾಗುತ್ತಿರುವ ಪ್ರಮಾಣದಿಂದ ಅಳೆಯುತ್ತದೆ. ಪಾಶ್ಚಾತ್ಯ ಪ್ರಜಾಸತ್ತಾತ್ಮಕ ಸಿದ್ಧಾಂತವು ಆಗಿನಿಂದ ಗಣನೀಯವಾಗಿ ಬದಲಾಗಿದೆ. ಆದರೆ ಯುರೋಪೇತರ ಸಮಾಜಗಳು ಪಾಶ್ಚಾತ್ಯರ ಮಾರ್ಗವನ್ನೇ ಅನುಸರಿಸಬೇಕೆಂದು ನಿರೀಕ್ಷಿಸುವ ಪ್ರಜಾಪ್ರಭುತ್ವದ ಪರೀಕ್ಷಣ-ಸೂಚಿ (check-list) ಮಾದರಿಗಳು ಈಗಲೂ ಅಸ್ತಿತ್ವದಲ್ಲಿವೆ. ಆ ಮಟ್ಟಿಗೆ, ಕೊಠಾರಿಯವರ ಕೃತಿಯಲ್ಲಿ ಅಂತರ್ನಿಹಿತವಾಗಿರುವ ವಿಧಾನವು ಕಳೆದ ಐವತ್ತು ವರ್ಷಗಳ ಅನುಭವವನ್ನು ಮೌಲ್ಯಮಾಪನಮಾಡುವ ಯಾವುದೇ ಪ್ರಯತ್ನಕ್ಕೆ ಉಪಯುಕ್ತವಾದ ಪ್ರಾರಂಭಿಕ ಬಿಂದುವನ್ನು ಈಗಲೂ ಒದಗಿಸುತ್ತದೆ.

ಕನಿಷ್ಠಪಕ್ಷ, ಈ ಭಾರತೀಯ ಮಾದರಿಯ ಕೆಲವು ರೂವಾರಿಗಳು, ತಾವು ಪರಿಚಿತವಲ್ಲದ ರಾಜ್ಯಕ್ಷೇತ್ರಕ್ಕೆ ಕಾಲಿಡುತ್ತಿದ್ದೇವೆಂಬ ವಾಸ್ತವತೆಯ ಬಗ್ಗೆ ತೀವ್ರವಾಗಿ ಜಾಗೃತರಾಗಿದ್ದರು. ಏಕೆಂದರೆ, ಯಾವುದೇ ಪೂರ್ವ ನಿದರ್ಶನಗಳಿಲ್ಲದ ವಿಷಯವನ್ನು ಕುರಿತು ಅವರು ಪ್ರಯತ್ನಿಸುತ್ತಿದ್ದರು. ಭಾರತದ ಜನಸಾಮಾನ್ಯರು ತಮ್ಮ ಸ್ವಂತ ಪ್ರತಿರೂಪಕ್ಕೆ ಮೊದಲಿಗೆ ಏನು ಮಾಡುತ್ತಿದ್ದರೋ ಅದನ್ನೇ ಭಾರತದ ಪ್ರಮುಖರು ಅವರು ಸ್ವೀಕರಿಸಿದ ಪಾಶ್ಚಾತ್ಯ ಮಾದರಿಯ ಪ್ರಜಾಪ್ರಭುತ್ವಕ್ಕೆ ಈಗಾಗಲೇ ಮಾಡಿದ್ದರು. ಅಯ್ದ ಸ್ವೀಕರಣ ಮತ್ತು ರೂಪಾಂತರಣಗಳ ಮೂಲಕ ಪ್ರಜಾಪ್ರಭುತ್ವದ ಕಲ್ಪನೆಯನ್ನು ಸ್ಥಳೀಯಗೊಳಿಸುವಿಕೆಯನ್ನು ಈಗಾಗಲೇ ಅವರು ಪ್ರಾರಂಭಿಸಿದ್ದರೂ, ಈ ಪ್ರಕ್ರಿಯೆಯು ಭಾರತದಲ್ಲಿ ಸದರಿ ಕಲ್ಪನೆಯ ನಿಜ ಜೀವನದ ವೃತ್ತಿಯ ಮೇಲೆ ಆಳವಾದ ಐತಿಹಾಸಿಕ ಪರಿಣಾಮಗಳನ್ನು ಉಂಟುಮಾಡುವುದಿತ್ತು.

III

ಪ್ರಜಾಪ್ರಭುತ್ವದ ಸ್ಥಾಪನೆಯು, ಹೊಸ ಆಟವೊಂದನ್ನು ಆಡಲು ಭಾರತದ ಪ್ರಮುಖರು ಸಾಮಾನ್ಯ ಭಾರತೀಯರಿಗೆ ನೀಡಿದ ಒಂದು ಆಹ್ವಾನವಾಗಿತ್ತು. ಸ್ವಾತಂತ್ರ್ಯಕ್ಕಿಂತ ಹಿಂದಿನ ದಶಕಗಳಲ್ಲಿನ ರಾಷ್ಟ್ರವಾದಿ ರಾಜಕೀಯವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದವರಿಗೆ ಈ ಆಹ್ವಾನದ ಆಗಮನವು ಆಶ್ಚರ್ಯಕರವಾಗಿ ಘಟಿಸಬಾರದಿತ್ತೆಂಬುದು ಸತ್ಯ. ಬ್ರಿಟಿಷ್ ಆಡಳಿತವನ್ನು ವಿರೋಧಿಸುವಾಗ ರಾಷ್ಟ್ರವಾದಿ ನಾಯಕರುಗಳು ಆಧುನಿಕ ಯೂರೋಪಿಯನ್ ಚಿಂತನೆಯ ಅತ್ಯಂತ ಪ್ರಗತಿಪರ ಅಂಶಗಳಿಂದ ಸೆಳೆಯಲ್ಪಟ್ಟರು. ಅವರಿಗೆ ಪ್ರಜಾಪ್ರಭುತ್ವವು ವಿಶ್ವಾಸದ ವಸ್ತುವಾಗಿವಾಗಿತ್ತೆಂಬುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಇದಲ್ಲದೆ, ಸ್ವಾತಂತ್ರಪೂರ್ವದ ಕೊನೆಯ ಎರಡು ದಶಕಗಳಲ್ಲಿ ತೀವ್ರಗೊಂಡ ಜನಪ್ರಿಯ ಚಳುವಳಿಗಳು ಸಮಾಜದ ಕೆಳವರ್ಗದವರಲ್ಲಿ ಸ್ವರಾಜ್ಯದ ನಿರೀಕ್ಷೆಗಳನ್ನು ಸೃಜಿಸಿದವು. ಈ ಎಲ್ಲಾ ಕಾರಣಗಳಿಂದಾಗಿ, ಸರ್ಕಾರದ ಸ್ವರೂಪವನ್ನು ಆಯ್ಕೆಮಾಡಬೇಕಾಗಿ ಬಂದಾಗ, ಭಾರತದ ಗಣ್ಯರ ಮುಂದೆ ಸೀಮಿತ ವ್ಯಾಪ್ತಿಯ ಆಯ್ಕೆಗಳಿದ್ದವು. ಆದರೂ ಈ ಆಯ್ಕೆಗಳು ಈಗ ಸಾಕಾರಗೊಳಿಸಿರುವುದಕ್ಕಿಂತ ಹೆಚ್ಚಾಗಿದ್ದವು. ಪಾಕಿಸ್ತಾನದ ಆಯ್ಕೆಯಾದ ವೈಸ್‌ರಾಯ್‌ನ ಪದ್ಧತಿಯು ಆಗ ಮುಕ್ತವಾಗಿದ್ದ ಆಯ್ಕೆಗಳನ್ನು ಸ್ಪಷ್ಟಪಡಿಸುತ್ತದೆ. ಭಾರತದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯು ನಿಸ್ಸಂದೇಹವಾಗಿ ಒಂದು ಧೈರ್ಯಶಾಲಿ ಆಮಂತ್ರಣವಾಗಿತ್ತು. ಏಕೆಂದರೆ, ಇದನ್ನು ಕುರಿತ ನಿಯಮಗಳು ಮತ್ತು ಸಂಭಾವ್ಯ ಪರಿಣಾಮಗಳು ಪ್ರಮುಖರಿಗೆ ಸಂಪೂರ್ಣವಾಗಿ ಸ್ಪಷ್ಟವಾಗಿರಲಿಲ್ಲ. ಅದಕ್ಕಿಂತ ಮುಖ್ಯವಾಗಿ, ಇದರಲ್ಲಿ ಭಾಗಿಯಾಗಲು ತಾವು ಆಹ್ವಾನಿಸಿದವರ ಬಗ್ಗೆ ಅವರಿಗೆ ಉತ್ತಮ ಗ್ರಹಿಕೆಯಿರಲಿಲ್ಲ.

ಸ್ವಾತಂತ್ರ್ಯಾನಂತರದ ಭಾರತದ ರಾಜಕೀಯ ಇತಿಹಾಸವು, ಭಾರತೀಯರು ಆಮಂತ್ರಣವನ್ನು ಪ್ರಾರಂಭದಲ್ಲಿ ಹಿಂಜರಿಕೆಯಿಂದ ಮತ್ತು ಖುಷಿಯಿಂದ, ಆನಂತರ ಒಂದು ರೀತಿಯ ಗೀಳಿನ ಭೀಷಣತೆಯಿಂದ ಹೇಗೆ ಒಪ್ಪಿಕೊಂಡರು ಮತ್ತು ಹೊಸ ಆಟವನ್ನು ಹೇಗೆ ಕಂಡುಕೊಂಡರು ಎಂಬುದರ ಕಥೆಯಾಗಿದೆ. ಈ ಸೆಣಸಾಟವು ಅವರ ಮತ್ತು ಈ ಆಟದ ಮೇಲೆ ಬೀರಿದ ಪರಿಣಾಮವು ಅದರ ಇತಿಹಾಸವಾಗಿದೆ. ನಂತರದಲ್ಲಿ ಏನಾಯಿತೆಂಬುದನ್ನು ಮುನ್ನೆಣಿಸುವುದು ಕಷ್ಟವೇನಲ್ಲ. ಪ್ರಾರಂಭದ ಆತಂಕದ ನಂತರ ಅತಿಥಿಗಳು ಈ ಹೊಸ ಸನ್ನಿವೇಶಕ್ಕೆ ಹೊಂದಿಕೊಂಡರಲ್ಲದೆ, ತಮ್ಮ ಅಭಿರುಚಿಗೆ

ಸರಿಹೊಂದುವಂತೆ ನಿಯಮಗಳನ್ನು ಬದಲಿಸಿಕೊಂಡರು. ಭಾಷೆಯು ಭಾರತದ ಒಕ್ಕೂಟದ ನಕ್ಷೆಯ ರಾಜಕೀಯ ಮರುವಿನ್ಯಾಸಕ್ಕೆ ಆಧಾರವಾಗಿರಬೇಕೆಂದು ಒತ್ತಾಯಿಸಿದ್ದಕ್ಕಾಗಿ ಪ್ರಾರಂಭದ ಕೆಲವು ವರ್ಷಗಳಲ್ಲಿ ಪ್ರತಿಯೊಬ್ಬರೂ ಅಪರಾಧಿ ಪ್ರಜ್ಞೆಯನ್ನು ಹೊಂದಿದ್ದರು. ಆದರೆ ಅತಿ ಶೀಘ್ರದಲ್ಲೆ ಇದೊಂದು ನಿರ್ವಿವಾದ ತತ್ತ್ವವಾಯಿತು. ಆಮಂತ್ರಿತ ಆಟಗಾರರು ಈಗ ಆತಿಥೇಯರಿಗೆ ತಮ್ಮ ಬೆನ್ನು ತೋರಿಸುತ್ತಾ, ತಾವೇ ಆನಂದಿಸತೊಡಗಿದರು. ಈಗ ಇದೊಂದು ವಿಭಿನ್ನ ಆಟವಾಯಿತಲ್ಲದೆ, ಅದು, ತನ್ನದೇ ಆದ ಚೈತನ್ಯವನ್ನು (life) ಪಡೆದುಕೊಂಡಿತು. ಪಠ್ಯಪುಸ್ತಕದ ಮಾದರಿಗಳು ಅಥವಾ ಮೂಲ ಆತಿಥೇಯರ ಆಶಯಗಳಿಗಿಂತ ಗಣನೀಯವಾಗಿ ಬೇರೆಯದೇ ಆದ ಉದ್ದೇಶಗಳಿಗಾಗಿ ಈ ಆಟವನ್ನು ಆಡಲಾಯಿತು. ಹರಿಯಾಣದ ರೈತ ಮುಖಂಡ ಮತ್ತು 1989-90ರಲ್ಲಿ ಉಪ ಪ್ರಧಾನಮಂತ್ರಿಯಾಗಿದ್ದ ದೇವಿ ಲಾಲ್‌ರವರು ಅವರ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಓದಿಲ್ಲವೆಂಬುದನ್ನು ಸುದ್ಧಿಗೋಷ್ಠಿಯೊಂದರಲ್ಲಿ ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಪ್ರತಿಯೊಬ್ಬರೂ ಪ್ರಣಾಳಿಕೆಗಳನ್ನು ಓದುತ್ತಿದ್ದರು ಅಥವಾ ಓದಿದವರು ಅವುಗಳ ಬಗ್ಗೆ ಲಕ್ಷ್ಯವಹಿಸುತ್ತಿದ್ದರೆಂದೇನೂ ಇದರರ್ಥವಲ್ಲ. ಆದರೆ ಎರಡು ದಶಕಗಳ ಹಿಂದೆ ಇದೊಂದು ಪ್ರಮುಖ ರಾಜಕೀಯ ಹಗರಣವಾಗಬಹುದಿತ್ತು. ಈ ಸುದ್ಧಿಯು ದಿನಚರಿ ಪುಸ್ತಕದ ಒಂದು ಸಣ್ಣ ಸುದ್ದಿಯಂತೆ ಪ್ರಕಟವಾದುದು ಭಾರತದ ರಾಜಕೀಯ ಸಂಸ್ಕೃತಿಯಲ್ಲಿನ ಬೃಹತ್ ಬದಲಾಣೆಯನ್ನು ಸೂಚಿಸುತ್ತದೆ. ಪ್ರಜಾಪ್ರಭುತ್ವದ ಆಟದ ಪರಿಣಾಮಗಳು ಯಾರದೇ ಉದ್ದೇಶಿತ ಅಥವಾ ನಿರೀಕ್ಷಿತ ಪರಿಣಾಮಗಳಿಗಿಂತ ಸಂಪೂರ್ಣ ವಿಭಿನ್ನವಾಗಿ ಹೊರಬರುತ್ತಿವೆ ಎಂಬುದನ್ನು ಇದು ಬಿಂಬಿಸುತ್ತದೆ. ಪಾಶ್ಚಾತ್ಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ವಿಖ್ಯಾತ ಪೂರ್ವನಿದರ್ಶನಗಳಿಲ್ಲದ ಅವಕಾಶಗಳ ಹೊಸ ಸಮುಚ್ಚಯ ಮತ್ತು ನಿರ್ಬಂಧಗಳನ್ನು ಇದು ಹೊರಹಾಕುತ್ತದೆ.

ಭಾರತದ ರಾಜಕೀಯವನ್ನು ಅದರ ಮೂಲ ಮಾದರಿಯ ವಿಚಲನೆಗಳ ಸರಣಿಯಾಗಿ ಈಗಲೂ ಅರ್ಥಮಾಡಿಕೊಳ್ಳಲಾಗುತ್ತಿದೆಯೆಂಬುದು, ಮೂಲಮಾದರಿಯ ಕಲ್ಪನಾತ್ಮಕ ಆಕರ್ಷಣೆಯ ಕುರಿತ ವ್ಯಾಖ್ಯೆಯಾಗಿದೆ. ಪ್ರತಿಯೊಂದು ವಿಚಲನೆಯನ್ನು ಕುಸಿತ ಮತ್ತು ಅವ್ಯವಸ್ಥೆಯ ಸೂಚನೆಯೆಂಬಂತೆ ನೋಡಲಾಗುತ್ತದೆ. ಭಾರತದ ರಾಜಕೀಯದ ಕಥನವನ್ನು ಹೇಳುವ ಪ್ರಧಾನ ಮಾರ್ಗಕ್ಕೆ ಈ ಪ್ರವೃತ್ತಿಯು ನೆರವಾಗುತ್ತದೆ. ಇದು ಈ ರೀತಿ ಇದೆ: ಜವಾಹರ್ಲಾಲ್ ನೆಹರೂ ಹೆಸರಿನ ಒಬ್ಬ ಮೋಹಕ ರಾಜಕುಮಾರ ಆಳಿದ ಮೊದಲ ಒಂದೂವರೆ ದಶಕವು ಸುವರ್ಣಕಾಲವಾಗಿತ್ತು. ಅವರ ಆಳ್ವಿಕೆಯು ಆರ್ಥಿಕ ಬೆಳವಣಿಗೆ, ಕಾನೂನುಬದ್ಧ ಆಡಳಿತ, ರಾಜಕೀಯ ಸಾಂಸ್ಥೀಕರಣ, ಜಾತ್ಯತೀತ ನೀತಿ ಮತ್ತು ದೂರದೃಷ್ಟಿಯುಳ್ಳ ವಿದೇಶಾಂಗ ನೀತಿಗಳನ್ನು ಒಳಗೊಂಡಿತ್ತು. 1964ರಲ್ಲಿನ ಅವರ ಮರಣಾನಂತರ ಅವರ ನೈಜ ಮತ್ತು ಇತರೆ ಸಂತತಿಯವರ ಆಳ್ವಿಕೆಯ ಕಾಲದಲ್ಲಿ ಮೊದಲಿಗೆ ಏಕಪ್ರಕಾರದ, ಅನಂತರ ತೀವ್ರಗತಿಯ ಅವನತಿ ಕಂಡುಬಂದಿತು. ಅವರ ಮಗಳಾದ ಇಂದಿರಾಗಾಂಧಿಯವರ ಆಳ್ವಿಕೆಯ ಲಕ್ಷಣಗಳೆಂದರೆ, ಸಾಂಸ್ಥಿಕ ಅವನತಿ, ಸರ್ವಾಧಿಕಾರಿ ಪರಂಪರೆಯ ಬೆಳವಣಿಗೆ, ಜನಾಂಗೀಯ ಅಲ್ಪಸಂಖ್ಯಾತರ ಬಗೆಗಿನ ಅಸಹಿಷ್ಣತೆ ಮತ್ತು ಸಂಕುಚಿತ ಮತ್ತು ಆಕ್ರಮಣಕಾರಿ ವಿದೇಶಾಂಗ ನೀತಿಯ ಪ್ರಾರಂಭ. ಅಂತಿಮವಾಗಿ, ಮೂರನೇ ಹಂತದಲ್ಲಿ, ಸ್ಥಳೀಯ ನಾಯಕರು ಮತ್ತು ಘಾತುಕರು ಆಡಳಿತವನ್ನು ವಹಿಸಿಕೊಳ್ಳುವವ ಮೂಲಕ ಸಂಪೂರ್ಣ ಅವ್ಯವಸ್ಥೆ ಮತ್ತು ನಿರಂತರವಾದ ಬಿಕ್ಕಟ್ಟುಗಳು ತಲೆದೋರಿದವು. ಪ್ರಜಾಸತ್ತಾತ್ಮಕ ಸಂಸ್ಥೆಗಳು ಅಸ್ತವ್ಯಸ್ಥಗೊಂಡವು. ರಾಷ್ಟ್ರೀಯ ಪಕ್ಷಗಳಿಗಾದ ನಷ್ಟದಿಂದ ಪ್ರಾದೇಶಿಕ ಪಕ್ಷಗಳಿಗೆ ಲಾಭವಾಗಿದೆ. ವರ್ಗಾಧಾರಿತ ಬೇಡಿಕೆಗಳು ಮತ್ತು ಪ್ರತ್ಯೇಕತಾವಾದಿ ರಾಜಕೀಯವು ರಾಜಕೀಯ ಕಾರ್ಯಸೂಚಿಯ ಮೇಲೆ ಪ್ರಭುತ್ವವನ್ನು ಸ್ಥಾಪಿಸಿವೆ. ಬಿಜೆಪಿಯ ಪದಾರೋಹಣ ಮತ್ತು ಸರಣಿ ಪರಮಾಣು ಸ್ಫೋಟಗಳು ಒಂದು ರೀತಿಯಲ್ಲಿ, ಸನ್ನಿಹಿತವಾಗಿರುವ ರಾಜಕೀಯ ಬಿಕ್ಕಟ್ಟಿನ ಮತ್ತು ಒಂದು ಕಳೆದುಹೋದ ಕನಸಿನ ಕಥನವನ್ನು ಸಂಪೂರ್ಣಗೊಳಿಸಿವೆ.

ಈ ಕಥಾನಕವು ಸರಳ, ಆದರೆ ಸಶಕ್ತವಾಗಿದೆ. ಈ ರೀತಿಯ ಎಲ್ಲಾ ಕಥೆಗಳಂತೆ ಯಾವುದೇ ಘಟನೆಗೆ, ಅದು ಚಿಕ್ಕದಿರಲಿ, ದೊಡ್ಡದಿರಲಿ, ಅರ್ಥವನ್ನು ನೀಡುವ ಸಾಮರ್ಥ್ಯವನ್ನು ಇದು ಹೊಂದಿದೆಯಲ್ಲದೆ ಸಾಮಾನ್ಯವಾದುದನ್ನು ಭಿನ್ನವಾದುದರಿಂದ ಗುರುತಿಸಲು ಮಾನದಂಡವನ್ನು ಪೂರೈಸುತ್ತದೆ. ಎಲ್ಲಾ ಕಥೆಗಳಂತೆ ವಿಷಯಗಳನ್ನು ಆಯಕಟ್ಟಿನ ಬಿಂದುವಿನಿಂದ ಗ್ರಹಿಸಿ, ನಮ್ಮ ಕಿವಿಗಳಲ್ಲಿ ನೀತಿಯೊಂದನ್ನು ಪಿಸುಗುಡುತ್ತದೆ. ಇದು ತನ್ನದೇ ಆದ ಆಕರ್ಷಕಣೆಯನ್ನು ಹೊಂದಿದೆಯಲ್ಲದೆ, ಇಂಗ್ಲಿಷ್

ಮಾತನಾಡುವ ಉನ್ನತ ಜಾತಿಯ ಮೂಲಗಳನ್ನು ಹೊಂದಿರುವವರು ಭಾರತದ ಪ್ರಜಾಪ್ರಭುತ್ವದ ಕುರಿತಾದ ವಿಚಾರಗಳನ್ನು ಸಾರ್ವಜನಿಕವಾಗಿ ಸ್ಪಷ್ಟಪಡಿಸುತ್ತಾರೆ. ಅವರ ಈ ನಿರೂಪಣೆಯು ಶೈಕ್ಷಣಿಕ ಅಥವಾ ಇತರೆ ರಾಜಕೀಯ ವಿಶ್ಲೇಷಕರ ಕಲ್ಪನೆಯನ್ನು ಪ್ರಭಾವಿಸುತ್ತಿದೆ. ಭಾರತದ ಪ್ರಜಾಪ್ರಭುತ್ವದ ಈ ಪ್ರಭಾವಶಾಲಿ ಕಥೆಯಲ್ಲಿ ಅಥವಾ ಸಮಕಾಲೀನ ಪ್ರಜಾಸತ್ತಾತ್ಮಕ ಸಿದ್ಧಾಂತದಲ್ಲಿ ಪ್ರಜಾಪ್ರಭುತ್ವದೆಡೆಗಿನ ಹಾರ್ಡ್‌ವೇರ್ ದೃಷ್ಟಿಕೋನವೆಂದು ಕರೆಯಬಹುದಾದ ಅಂಶವು ಅಂತರ್ನಿಹಿತವಾಗಿದೆ: ಪ್ರಜಾಪ್ರಭುತ್ವವೆಂಬುದು ಎಲ್ಲಕ್ಕಿಂತ ಹೆಚ್ಚಾಗಿ ಒಂದು ಸಾಂಸ್ಥಿಕ ವ್ಯವಸ್ಥೆಯಾಗಿದೆ. ಇದನ್ನು ಯಾವುದೇ ಸನ್ನಿವೇಶದಲ್ಲಿ ಸೂಕ್ತ ಸಂಸ್ಥಾಪನೆಯ ಪರಿಸ್ಥಿತಿಗಳಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮಾಡಬಹುದು.

ಭಾರತದ ಪ್ರಜಾಪ್ರಭುತ್ವದ ಕಥೆಯನ್ನು ವಿಭಿನ್ನವಾಗಿ ಹೇಳಬಹುದೆಂದು ನನಗನಿಸುತ್ತದೆ. ಭಾರತವನ್ನು ಅದರ ಐವತ್ತನೇ ವರ್ಷದಲ್ಲಿ ಅರ್ಥಮಾಡಿಕೊಳ್ಳಬೇಕಾದ ಸವಾಲಿನಿಂದಾಗಿ, ನಾವು ಈ ಕಥೆಯನ್ನು ಭಿನ್ನವಾಗಿ ಹೇಳಬೇಕಾದ ಅವಶ್ಯಕತೆಯಿದೆ. ಒಂದು ಭಾಷೆ ಅಥವಾ ತಂತ್ರಾಂಶವು (software), ಅದರ ಬಳಕೆದಾರರೊಡನೆ ಹಂಚಿಕೆಯಾಗಿರುವ ಚಿಹ್ನೆಗಳ ಒಂದು ನಿಶ್ಚಿತ ಕ್ರಮಾಚಾರವನ್ನು (protocol) ಸ್ಥಾಪಿಸದೆ, ಕೆಲಸದ ಪ್ರಾರಂಭವನ್ನೂ ಕೈಗೊಳ್ಳುವುದಿಲ್ಲ. ಅವುಗಳಂತೆಯೇ ನಾವು ಪ್ರಜಾಪ್ರಭುತ್ವವನ್ನು ಪರಿಗಣಿಸಬೇಕಾದ ಅವಶ್ಯಕತೆಯಿದೆ. ಪ್ರಜಾಪ್ರಭುತ್ವವು ಜೀವಂತವಾಗಿರಲು, ಅದು ಸಾಮಾನ್ಯ ಜನರ ಮನಸ್ಸಿನಲ್ಲಿ ಮತ್ತು ಮನಸ್ಸಿನ ಮೂಲಕ ಅಸ್ತಿತ್ವದಲ್ಲಿರಬೇಕು. ಅವರುಗಳು ಹೊಂದಿರುವ ನಂಬಿಕೆಗಳು ಮತ್ತು ಮೌಲ್ಯಗಳ ನಡುವೆ ಕಾರ್ಯನಿರ್ವಹಿಸುವುದನ್ನು ಅದು ಕಲಿಯಬೇಕು. ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕಾದ ಅಗತ್ಯವಿದೆ. ರಾಜಕೀಯದ ಅರಮನೆಯ ವಿಹಂಗಮ ನೋಟವು, ಮೇಲಿನಿಂದ ಹೇರಿದಂತಹ ಮಾದರಿಗಳನ್ನು ಕುರಿತ ಜನಸಾಮಾನ್ಯರ ಸಂಘರ್ಷಗಳ ಕಥೆಯನ್ನು, ಸಮಾಜದ ಕೆಳವರ್ಗದವರ ಭಾಗವಹಿಸುವಿಕೆಯ ಹೆಚ್ಚಳವನ್ನು, ಆಧುನಿಕ ಪ್ರಜಾಪ್ರಭುತ್ವದ ಭಾಷೆಯಲ್ಲಿ ಸಾಮಾಜಿಕ ವಿಮೋಚನೆಯ ಕನಸುಗಳನ್ನು ಹೆಣೆಯುವ ಹೆಚ್ಚು ಪ್ರಸಿದ್ಧವಲ್ಲದ ಪ್ರಯತ್ನಗಳನ್ನು ಅತ್ಯಂತ ಧೀರ್ಘಕಾಲದಿಂದಲೂ ನಮ್ಮಿಂದ ಮರೆಮಾಚಿದೆ. ಈ ಪ್ರಭಾವಶಾಲಿ ಕಥೆಯನ್ನು ವಿರೋಧಿಸಬೇಕು. ಏಕೆಂದರೆ, ಇದರ ನೀತಿಯು ಆಳವಾಗಿ, ಆದರೆ ಸೂಕ್ಷ್ಮವಾಗಿ ರಾಜಕೀಯ ವಿರೋಧಿಯಾಗಿದೆ.

## IV

1950 ಮತ್ತು 1960ರ ಪ್ರಸಿದ್ಧ 'ಕಾಂಗ್ರೆಸ್ ವ್ಯವಸ್ಥೆ'ಯ ಮೊದಲನೆ ಹಂತವನ್ನು, ಅತ್ಯಂತ ಪ್ರಬಲರಾದ ಪಾಶ್ಚಾತ್ಯ ಅನುಕರಣೆಯ ಗಣ್ಯರನ್ನು ಜನಸಾಮಾನ್ಯರ ನಂಬಿಕೆಗಳಿಂದ ಪ್ರತ್ಯೇಕಿಸಿದ ವಿಸ್ತೃತ ಕಂದಕದ ನಿಟ್ಟಿನಲ್ಲಿ ಚಿತ್ರಿಸಲಾಗುತ್ತದೆ. ರಾಷ್ಟ್ರೀಯ ಚಳುವಳಿಯನ್ನು ಮುನ್ನಡೆಸಿದ ಪಕ್ಷವಾದ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಈ ಅವಧಿಯಲ್ಲಿ ರಾಜಕೀಯ ಕಾರ್ಯಕ್ಷೇತ್ರದಲ್ಲಿ ಪ್ರಾಬಲ್ಯವನ್ನು ಹೊಂದಿತ್ತು. ಈ ಅವಧಿಯಲ್ಲಿ ಅದು ಎಲ್ಲಾ ರಾಷ್ಟ್ರೀಯ ಮತ್ತು ಪ್ರಾಯೋಗಿಕವಾಗಿ, ಎಲ್ಲಾ ರಾಜ್ಯಮಟ್ಟದ ಚುನಾವಣೆಗಳಲ್ಲಿ ಜಯವನ್ನು ಸಾಧಿಸಿತು. ಭಾರತವು ನಿಸ್ಸಂದೇಶವಾಗಿ ಒಂದು ಪ್ರಜಾಪ್ರಭುತ್ವವಾಗಿತ್ತು. ಏಕೆಂದರೆ ವಿವಿಧ ರಾಜಕೀಯ ಪಕ್ಷಗಳ ನಡುವಿನ ಮುಕ್ತ ಮತ್ತು ನ್ಯಾಯಯುತ ಸ್ಪರ್ಧೆಯಿಂದ ಕೂಡಿದ ವ್ಯವಸ್ಥೆಯೊಂದರಲ್ಲಿ ಆಳುವವರು ಜನರಿಂದ ಆಯ್ಕೆಯಾಗುತ್ತಿದ್ದರು. ಆದರೆ, ವಿಚಾರಗಳ ಕ್ಷೇತ್ರದಲ್ಲಿ, ಪ್ರಜಾಪ್ರಭುತ್ವದ ತತ್ತ್ವವಾದ ಸಮಾನ ಗೌರವಕ್ಕೆ ಯಾವುದೇ ಮನ್ನಣೆ ಇಲ್ಲವಾಗಿತ್ತು. ಪಾಕಿಸ್ತಾನದ ಮೊಹಮ್ಮದ್ ಆಯ್ಯೂಬ್ ಮತ್ತು ಇಂಡೋನೇಷ್ಯಾದ ಸುಕರ್ಣೋರಂತಹ ನಾಯಕರುಗಳು ವಸಾಹತೋತ್ತರ ವ್ಯವಸ್ಥೆಯಲ್ಲಿ ಅವರು ಅನುಸರಿಸುತ್ತಿದ್ದ ಅರೆ ಸರ್ವಾಧಿಕಾರಿ ಆಡಳಿತ ಪದ್ಧತಿಯನ್ನು ವಿವರಿಸಲು 'ಮಾರ್ಗದರ್ಶಿತ ಪ್ರಜಾಪ್ರಭುತ್ವ' (Guided Democracy) ಎಂಬ ಸೌಮ್ಯೋಕ್ತಿಯನ್ನು ಬಳಸಿದರು. ಆದರೆ ಅದು ಭಾರತದ ಪ್ರಜಾಪ್ರಭುತ್ವದ ನಿರ್ಧಾರವನ್ನು ಕೈಗೊಳ್ಳುವ ಸ್ವರೂಪಕ್ಕೆ ಅನ್ವಯಿಸುತ್ತಿರಲಿಲ್ಲ. ಆದರೆ ವಿಷಯಗಳಿಗೆ ಸಂಬಂಧಿಸಿದಂತೆ ಭಾರತದ ಪ್ರಜಾಪ್ರಭುತ್ವವು ಮೊದಲನೆ ಹಂತದಲ್ಲಿ ನಿಶ್ಚಿತವಾಗಿಯೆ ನಿರ್ದೇಶಿಸಲ್ಪಟ್ಟಿತ್ತು.

ಪ್ರಜಾಸತ್ತಾತ್ಮಕ ಆಮಂತ್ರಣವನ್ನು ಅರ್ಥಾತ್, ಚುನಾವಣೆಯ ಹೊಸ ಪ್ರದರ್ಶನಗಳಲ್ಲಿ ಭಾಗವಹಿಸಲು ನೀಡಲಾದ ಆಮಂತ್ರಣವನ್ನು ಒಪ್ಪಿಗೊಳ್ಳುತ್ತಿರುವವರ ಸಂಖ್ಯೆ ನಿರಂತರವಾಗಿ ಹೆಚ್ಚಾಗುತ್ತಿದೆ. 1952ರ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಶೇಕಡ 46ರಷ್ಟಿದ್ದ ಹಾಜರಾತಿಯ ಪ್ರಮಾಣವು 1962ರ ಮೂರನೇ ಚುನಾವಣೆಯಲ್ಲಿ ಶೇಕಡಾ 55 ಹಾಗೂ 1967ರ ನಾಲ್ಕನೆಯದರಲ್ಲಿ ಶೇ. 61ರಷ್ಟು ಹೆಚ್ಚಾಯಿತು. ಹೊಸದಾಗಿ ಪ್ರವೇಶಿಸಿದವರು ಇಂಗ್ಲಿಷ್ ಮಾತನಾಡುವ ಭಾರತದ ನಿವಾಸಿಗಳನ್ನು ಸೋಲಿಸಲು ಪ್ರಾರಂಭಿಸಿದರು. 50ರ ದಶಕದ ಮಧ್ಯಭಾಗದಲ್ಲಿ ಭಾಷಾಧಾರಿತ ರಾಜ್ಯಗಳನ್ನು ನೆಹರೂರವರ ಗಂಟಲಿನೊಳಕ್ಕೆ ಬಲವಂತವಾಗಿ ಇಳಿಸಲಾಯಿತು. ಉತ್ತರ ಪ್ರದೇಶದ ರೈತ ಮುಖಂಡರಾದ ಚರಣ್‌ಸಿಂಗ್‌ರವರು ನೆಹರೂರವರು ಪ್ರತಿಪಾದಿಸಿದ ಸೋವಿಯಟ್ ಶೈಲಿಯ ಸಹಕಾರಿ ಕೃಷಿಯನ್ನು ಯಶಸ್ವಿಯಾಗಿ ಧಿಕ್ಕರಿಸಿದರು.

ಏನೇ ಆದರೂ, ಆಟದ ಸ್ವರೂಪವು, ಆತಿಥೇಯರು ನಿಗದಿಪಡಿಸಿದ ನಿಯಮಗಳನ್ನು ಮೂಲಭೂತವಾಗಿ ಅನುಸರಿಸಿತು. ಇದರಲ್ಲಿ ವಿಚಲನೆಗಳು ಮತ್ತು ವಿರೂಪಗಳಿದ್ದವು. ನೆಹರೂರವರ ಪ್ರೀತಿಪಾತ್ರ ಮುಖಂಡರಾದ ಪಂಜಾಬಿನ ಪ್ರತಾಪ್‌ಸಿಂಗ್ ಕೈರೋನ್‌ರವರ ವಿರುದ್ಧದ ವಿಚಾರಣೆಯು ಭ್ರಷ್ಟಾಚಾರವು ಅಷ್ಟರಲ್ಲಾಗಲೇ ಎಷ್ಟರಮಟ್ಟಿಗೆ ಸಾಂಸ್ಥೀಕರಣಗೊಂಡಿತ್ತೆಂಬುದನ್ನು ಬಹಿರಂಗಪಡಿಸಿತು. ಆದರೂ ಸಮತೋಲನದ ನಿಟ್ಟಿನಲ್ಲಿ, ಆಟವು ನಿರ್ವಹಣೀಯವೆನಿಸಿತ್ತು ಅಥವಾ ಕನಿಷ್ಠಪಕ್ಷ ಗುರುತಿಸುವಂತಿತ್ತು. ಪ್ರಥಮ ಹಿಂದುಳಿದ ವರ್ಗಗಳ ಆಯೋಗವು ಜಾತಿ ಆಧಾರದ ಮೇಲೆ ಮೀಸಲಾತಿಗಳನ್ನು ಶಿಫಾರಸ್ಸು ಮಾಡಿತು. ಆದರೆ ಅದರ ಅಧ್ಯಕ್ಷರಾದ ಕಾಕಾ ಕಾಲೇಲ್‌ಕರ್ ಅವರು, ಅತ್ಯಂತ ಶ್ರಮವಹಿಸಿ, ಈ ಶಿಫಾರಸ್ಸುಗಳು ಅನುಷ್ಠಾನವಾಗದಂತೆ ನೋಡಿಕೊಂಡರು. ಈ ವಿಷಯವು ಸಂಸತ್ತಿನ ದಾಖಲೆಗಳಲ್ಲಿ ನಿಶ್ಯಬ್ಧವಾಗಿ ಸಮಾಧಿಗೊಳ್ಳಬಹುದೇನೋ. ಕಾಂಗ್ರೆಸ್ ಆಳ್ವಿಕೆಗೆ ರಾಜಕೀಯ ವಿರೋಧದ ಕೊರತೆ ಇರಲಿಲ್ಲ. ವಿರೋಧಿಸುವವರಲ್ಲಿ ಸಮಾಜವಾದಿಗಳು, ಕಮ್ಯುನಿಸ್ಟರು ಮತ್ತು ಬಲಪಂಥೀಯ ವಿರೋಧ ಪಕ್ಷಗಳಿದ್ದವು. ವಾಸ್ತವವಾಗಿ ಕೇರಳ ರಾಜ್ಯದಲ್ಲಿ ಕಮ್ಯುನಿಸ್ಟರು ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾದರು. ಪ್ರಪಂಚದಲ್ಲಿಯೇ ಮೊಟ್ಟಮೊದಲಬಾರಿಗೆ ಕಮ್ಯೂನಿಸ್ಟ್ ಪಕ್ಷವೊಂದು ಪ್ರಜಾಸತ್ತಾತ್ಮಕ ಜನಾದೇಶವನ್ನು ಜಯಿಸಿತ್ತು ಮತ್ತು ಮೊಟ್ಟಮೊದಲಬಾರಿಗೆ ಕೇಂದ್ರ ಸರ್ಕಾರವು ರಾಜ್ಯವೊಂದರಲ್ಲಿ ನ್ಯಾಯಸಮ್ಮತವಾಗಿ ಆಯ್ಕೆಯಾದ ಸರ್ಕಾರವನ್ನು ನಿರ್ಲಜ್ಜತನದಿಂದ ವಜಾಮಾಡಿತು. ಸಂಜ್ಞಾನಾತ್ಮಕವಾಗಿ ಹೇಳುವುದಾದರೆ, ಗಾಂಧಿಯವರ ಕೆಲವು ಹಿಂಬಾಲಕರು ಮತ್ತು ರಾಮ್ ಮನೋಹರ್ ಲೋಹಿಯಾರವರು ಪ್ರತಿಪಾದಿಸಿದ ದೇಶೀಯ ಸಮಾಜವಾದವನ್ನು ಹೊರತುಪಡಿಸಿ, ಭಾರತದ ಇಂಗ್ಲಿಷ್ ಮಾತನಾಡುವ ಗಣ್ಯರು ಹಂಚಿಕೊಂಡ ಪ್ರಜಾಪ್ರಭುತ್ವದ ದೃಷ್ಟಿಕೋನಕ್ಕೆ ಹೆಚ್ಚಿನ ವಿರೋಧವೇನೂ ಇರಲಿಲ್ಲ.

ಈ ಮೊದಲ ಹಂತದಲ್ಲಿ ನೆಹರೂರವರ ಶಾಲಾ ಶಿಕ್ಷಕನ ರೀತಿಯ ನಡವಳಿಕೆಗಳು ರಾಜಕೀಯ ಗಣ್ಯರ ಮತ್ತು ಸಾಮಾನ್ಯ ಜನರ ನಡುವಿನ ಉಪದೇಶಾತ್ಮಕ ಸಂಬಂಧದ ಪ್ರತೀಕವೆನಿಸಿವೆ. ನಾವು ವಿಚಾರಗಳ ಹರಿವಿನ ಕಡೆಗೆ ಗಮನವನ್ನು ಕೇಂದ್ರೀಕರಿಸಿದ್ದೇ ಆದರೆ, ಇದು ಸ್ಪಷ್ಟವಾಗಿ ಏಕಮುಖ ಸಂಚಾರವಾಗಿತ್ತು. ಸಾಮಾನ್ಯ ನಾಗರಿಕರು, ಅವರಿಗೆ ಮೇಲಿನ ಅಧಿಕಾರಿಯಿಂದ ಬಂದಂತಹ ವಿಚಾರಗಳನ್ನು ಉದ್ದೇಶಪೂರ್ವಕನಾಗಿ ಅಥವಾ ಬೇರೆ ರೀತಿಯಲ್ಲಿ ತಪ್ಪಾಗಿ ತಿಳಿದುಕೊಳ್ಳುವಷ್ಟರಮಟ್ಟಿಗೆ ಮಾತ್ರವೇ ಈ ಸಾಮ್ರಾಜ್ಯದಲ್ಲಿ ಸ್ವತಂತ್ರರಾಗಿದ್ದರು. ಇದು ಸಮಾಜದ ಕೆಳವರ್ಗದವರು ಇತಿಹಾಸದುದ್ದಕ್ಕೂ ಅನುಭವಿಸಿದ ಒಂದು ಸವಲತ್ತಾಗಿತ್ತು. ಒಂದು ನಿರ್ದಿಷ್ಟ ದೃಷ್ಟಿಕೋನದಿಂದ ನೋಡಿದಾಗ, ಇದೊಂದು ಸಾಕಷ್ಟು ತೃಪ್ತಿದಾಯಕವಾದ ಪರಿಸ್ಥಿತಿಯೆನಿಸಿದೆ. ನೀವು ಸೂಕ್ತವಾದ ಕುಟುಂಬದಲ್ಲಿ ಜನಿಸಿದ್ದು, ಈ ದೇಶದ ಶಾಖ ಮತ್ತು ಧೂಳಿನಿಂದ ದೂರವುಳಿಯುವ ಎಚ್ಚರಿಕೆವಹಿಸಿದರೆ ಮತ್ತು ವಿಷಯಗಳನ್ನು ಸೂಕ್ಷ್ಮದರ್ಶಿ ನೋಟದ ನಿಟ್ಟಿನಲ್ಲಿ ಗಮನಿಸಿದರೆ, ಭಾರತದ ಪ್ರಜಾಪ್ರಭುತ್ವವು ಒಂದು ವಿಶ್ವಾಸಾರ್ಹ ಅಥವಾ ಕನಿಷ್ಠ ಪಕ್ಷ 'ಅಭಿವೃದ್ಧಿಶೀಲ' ಉದಾರ ಪ್ರಜಾಪ್ರಭುತ್ವವಾಗಿ ಕಾಣಬಹುದು.

ಜನಸಾಮಾನ್ಯರ ನಂಬಿಕೆಗಳಿಂದ ಪ್ರಜಾಪ್ರಭುತ್ವದ ಪ್ರತ್ಯೇಕತೆಯು, ಅದಕ್ಕೆ ಒಂದು ರೀತಿಯ ಅವಕಾಶವನ್ನು ಮತ್ತು ಹೊಸ ವ್ಯವಸ್ಥೆಗಳ ಗುಂಪಿಗೆ ಪ್ರಾರಂಭದ ವ್ಯವಸ್ಥಾಪನಕ್ಕೆ ಸಮಯವನ್ನು ನೀಡಿದೆ. ಜನರಿಗೆ ತಾವೇನನ್ನು ಬೆಂಬಲಿಸುತ್ತಿದ್ದೇವೆಂದು

ಸರ್ವಥಾ ತಿಳಿದಿಲ್ಲದಿದ್ದರೂ ಹೊಸ ಪ್ರಭುತ್ವವು ಉನ್ನತ ಮಟ್ಟದ ಜನಪ್ರಿಯ ಕಾನೂನು ಸಮ್ಮತಿಯನ್ನು ಹೊಂದಿತ್ತು ಎಂಬುದು ರಾಷ್ಟ್ರೀಯತಾವಾದದ ಪರಂಪರೆಯ ತಾತ್ಪರ್ಯವಾಗಿದೆ. ಅನುಕೂಲಕರ ಪರಿಸ್ಥಿತಿಗಳಿಂದಾಗಿ ಆಧುನಿಕ ಭಾರತ ದೇಶವು ವಸಾಹತು ರಾಜ್ಯದ ಅಧಿಕಾರಗಳನ್ನು ಪಡೆದುಕೊಂಡಿತಷ್ಟೇ ಅಲ್ಲದೆ ಈ ಹಿಂದೆ ಖಾಸಗಿ ಅಥವಾ ಸಾಮಾಜಿಕ ಕಾರ್ಯಕ್ಷೇತ್ರವೆಂದು ಪರಿಗಣಿಸಲ್ಪಡುತ್ತಿದ್ದುದನ್ನು ಒಳಗೊಳ್ಳುವ ನಿಟ್ಟಿನಲ್ಲಿ, ತನ್ನ ಚಟುವಟಿಕೆಗಳ ವ್ಯಾಪ್ತಿಯನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿತು. ರಾಜಕೀಯವು, ಉತ್ಪಾದನೆಯ ಸಂಬಂಧಗಳಿಂದ ಆದೇಶಿಸಲ್ಪಡುವ ಬದಲು, ಆಸ್ತಿ ಸಂಬಂಧಗಳನ್ನು ಮೂಲಭೂತವಾಗಿ ಮಾರ್ಪಡಿಸುವ ಸ್ಥಾನದಲ್ಲಿತ್ತು. ಸ್ವಾತಂತ್ರ್ಯಾನಂತರದ ಮೊದಲ ದಶಕದಲ್ಲಿ, ಭೂ ಒಡೆತನದ ಮಾದರಿಯನ್ನು ಬದಲಾಯಿಸುವ ಗುರಿಯನ್ನು ಹೊಂದಿದ ಭೂಸುಧಾರಣಾ ಕಾನೂನುಗಳ ಸರಣಿಯನ್ನು ಭಾರತ ಸರ್ಕಾರವು ಜಾರಿಗೊಳಿಸಿತು. ಈಗಾಗಲೇ ನಿಸ್ಸಂದೇಹವಾಗಿ, ರಾಜಕೀಯವಾಗಿ ಪ್ರಬಲರಾದವರು ಮತ್ತು ಪ್ರಬಲ ಆರ್ಥಿಕ ಹಿತಾಸಕ್ತಿಗಳ ನಡುವೆ ಸೂಕ್ಷ್ಮ ಸ್ತರದ ಒಳಸಂಚಿತ್ತು. ಆದರೆ ರಾಜಕೀಯಕ್ಕೆ ಕೆಲವೇ ಕೆಲವು ವ್ಯಕ್ತ, ಸಮಗ್ರ ಅಥವಾ ರಚನಾತ್ಮಕ ಆರ್ಥಿಕ ಮಿತಿಗಳಿದ್ದವು. ಹೀಗಾಗಿ, ಸಿಂಹಾವಲೋಕನ ಮಾಡಿದಾಗ, ಆಶ್ಚರ್ಯಕರ ಸಾಧನೆಯಂತೆ ಕಂಡುಬರುವಂತಹುದನ್ನು 1947ರಲ್ಲಿನ ಅಧಿಕಾರದ ಸುಗಮ ವರ್ಗಾವಣೆಯು ಸಾಧ್ಯವಾಗಿಸಿತು. ಯಾವುದೇ ಗೊಂದಲಗಳಿಲ್ಲದೆ, ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ರಾಜಕೀಯದ ಕೇಂದ್ರೀಯತೆಯ ಯುಗದ ಪ್ರಾರಂಭವನ್ನು ಇದು ಸೂಚಿಸಿತು. ರಾಜಕೀಯ ಕೇಂದ್ರವೇ ಇಲ್ಲದಂತಹ ಲಕ್ಷಣವನ್ನು ಹೊಂದಿದ್ದು, ರಾಜಕೀಯವು, ಮಿತವಾದ ಮತ್ತು ಸ್ವಯಂ ಮಿತಿಗೊಳಪಡುವ ಚಟುವಟಿಕೆಯಾಗಿರುವ ಸಮಾಜದಲ್ಲಿ, ಆಧುನಿಕ ರಾಜಕೀಯ ಸಂಸ್ಥೆಗಳು ಸ್ವಾಧೀನಪಡಿಸಿಕೊಂಡ ಅಸಾಧಾರಣ ಅಧಿಕಾರವು, ಆಶ್ಚರ್ಯವನ್ನುಂಟುಮಾಡುತ್ತದೆ. ಭವಿಷ್ಯದ ಇತಿಹಾಸಕಾರನು ಬಹುಶಃ, ಈ ಐವತ್ತು ವರ್ಷಗಳನ್ನು, ಅತ್ಯಂತ ಗಮನಾರ್ಹ ರಾಜಕೀಯ ಘಟನೆಗಳಿಗೆ ಬದಲಾಗಿ, ಈ ಘಟನೆಗಳಿಗೆ ಕಾರಣವಾದ ಸಂದರ್ಭಗಳ ಸೃಜನೆಯ ನಿಟ್ಟಿನಲ್ಲಿ ನೆನಪಿಟ್ಟುಕೊಳ್ಳುತ್ತಾನೆ.

ಏನೇ ಆದರೂ, ಈ ವೇಷಗಳ ಹಿಂದೆ ಅಂತರ್ವಸ್ತು ವಿಷಯವು (content) ಈಗಾಗಲೇ ಬದಲಾಗಲು ಪ್ರಾರಂಭವಾಗಿತ್ತು. ಈ ವೇಷಧಾರಿಗಳ ನಡತೆಯ ಬಾಹ್ಯ ಸ್ವರೂಪದ ವಿವರಣೆಗಳನ್ನು ಗಮನಿಸುವ ಬದಲಾಗಿ, ತಾವೇನು ಮಾಡುತ್ತಿದ್ದೇವೆಂಬುದನ್ನು ಕುರಿತ ಈ ವೇಷಧಾರಿಗಳ ವಿಚಾರಧಾರೆಯನ್ನು ಗಮನಿಸಿದಾಗ, ಉದಾರ ಪ್ರಜಾಪ್ರಭುತ್ವದ ವಿಧ್ಯುಕ್ತ ಸಂರಚನೆಗೆ ಒಂದು ಹೊಸ ಮತ್ತು ಅಪರಿಚಿತವಾದ ಚೈತನ್ಯವನ್ನು ತುಂಬಿಸಲಾಗುತ್ತಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಭಾರತೀಯ ಭಾಷೆಯಲ್ಲಿನ ಸಮಕಾಲೀನ ಸಾಹಿತ್ಯದ ಮೂಲಕ ಲಭ್ಯವಿರುವ ಕಲ್ಪಿತ ವೃತ್ತಾಂತಗಳು ಮತ್ತು ಸ್ಥಳೀಯ ರಾಜಕೀಯದ ಕೆಲವು ಕ್ಷೇತ್ರ ಅಧ್ಯಯನಗಳು; ಪೋಷಕ-ಆಶ್ರಿತರ ಜಾಲ ಮತ್ತು ಪುರಸ್ಕಾರ ವಿತರಣೆಯ ಪದ್ಧತಿಗಳು ಸ್ವಾತಂತ್ರ್ಯಾನಂತರದ ಮೊದಲ ದಶಕದಲ್ಲಾಗಲೇ ರೂಢಿಯಲ್ಲಿದ್ದವೆಂಬುದಕ್ಕೆ ಸಾಕಷ್ಟು ಪುರಾವೆಗಳನ್ನು ನೀಡುತ್ತವೆ. ಇದರಲ್ಲಿನ ಬಹುತೇಕವು, ಉದಾರ ಪ್ರಜಾಪ್ರಭುತ್ವವು ಒಪ್ಪಿಕೊಳ್ಳಲಾಗದ ಮಾನದಂಡಗಳ ಮೇಲೆ ಆಧಾರಿತವಾಗಿದ್ದವೆಂಬುದು ಇಲ್ಲಿನ ಕೆಟ್ಟ ಸಂಗತಿಯೆನಿಸಿದೆ. ಸ್ಪರ್ಧಾತ್ಮಕ ರಾಜಕೀಯವು ಮೊದಲೇ ಅಸ್ತಿತ್ವದಲ್ಲಿದ್ದ ಸಾಮಾಜಿಕ ವಿಭಜನೆಗಳೊಂದಿಗೆ ಈಗಾಗಲೇ ಸಂಪರ್ಕಗಳನ್ನು ರೂಪಿಸಿತ್ತು. ರಾಜಕಾರಣದ ಚಲಾವಣೆಯಲ್ಲಿ, ಜಾತಿಯು ಒಂದು ಹೊಸ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಈ ಬೆಳವಣಿಗೆಯನ್ನು ಪ್ರಾರಂಭದಲ್ಲಿ ರಾಜಕಾರಣದಲ್ಲಿನ ಜಾತಿವಾದ ಎಂದು ಖಂಡಿಸಲಾಯಿತು. ಆದರೆ ನಂತರದಲ್ಲಿ, ಜಾತಿಯ ರಾಜಕೀಯಕರಣ ಎಂಬುದಾಗಿ ಇದನ್ನು ಸಿದ್ಧಾಂತೀಕರಿಸಲಾಯಿತು. ಇದು ಪ್ರಜಾಪ್ರಭುತ್ವ ಮತ್ತು ಜಾತಿ ವ್ಯವಸ್ಥೆಯ ಮೇಲೆ ಚಿರಸ್ಥಾಯಿಯಾದ ಪರಿಣಾಮಗಳನ್ನು ಬೀರಿದೆ.

ಭಾರತದಲ್ಲಿ ಸ್ಪರ್ಧಾತ್ಮಕ ರಾಜಕೀಯದ ಮೂಲಭೂತ ರಚಕ ಖಂಡಗಳು (building blocks) ವ್ಯಕ್ತಿಗಳು ಅಥವಾ ವಿಚಾರಗಳು ಮತ್ತು ಹಿತಾಸಕ್ತಿಗಳನ್ನು ಆಧಾರಿಸಿದ ಗುಂಪುಗಳಾಗಿರದೆ, ಜನನದ ಆಧಾರದ ಮೇಲೆ ಸೃಷ್ಟಿಸಲ್ಪಟ್ಟಿರುವ ಸಮುದಾಯಗಳು ಎಂಬ ವಿಷಯವು, ವಿಮರ್ಶಕರು, ವಿಶ್ಲೇಷಕರು ಮತ್ತು ಭಾರತದ ರಾಜಕೀಯದ ವೃತ್ತಿಪರರಿಗೆ ಅವರ ಸೈದ್ಧಾಂತಿಕ ಒಲವುಗಳು ಏನೇ ಇರಲಿ, ಒಂದು ರೀತಿಯ ಹಗರಣದಂತೆ ಕಾಣುತ್ತದೆ. ಆದರ್ಶನೀಯ ಉದಾರ

ಪ್ರಜಾಪ್ರಭುತ್ವದ ಭಾರತೀಯ ಭ್ರಷ್ಟಾಚಾರವೆಂಬುದಾಗಿ ಇದನ್ನು ವ್ಯಾಖ್ಯಾನಿಸಲಾಗಿದೆ. ಈ ನಿರ್ಲಜ್ಜತನದ ಅರಿವು, ಭಾರತದ ರಾಜಕೀಯದ ಪ್ರಭಾವಶಾಲಿಯಾದ ಕಥೆಯನ್ನು ತಿಳಿಯಪಡಿಸುತ್ತದೆ. ಉದಾರ ಪ್ರಜಾಪ್ರಭುತ್ವದ ವಾಸ್ತವಿಕತೆ ಮತ್ತು ಸ್ವಯಂ -ಪ್ರತೀಕಗಳ (self-image) ನಡುವಿನ ಅಂತರ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲವೆಂಬುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಅಸಾಂದರ್ಭಿಕವೆಂದೇನೂ ಅನಿಸುವುದಿಲ್ಲ. ಉದಾಹರಣೆಗೆ, 19ನೇ ಶತಮಾನದಲ್ಲಿನ ಅಮೆರಿಕಾದಲ್ಲಿನ ಪ್ರಜಾಪ್ರಭುತ್ವದ ಇತಿಹಾಸವನ್ನು ಹೋಲಿಸಿದಲ್ಲಿ,, ಈ ಅಂತರವು ಉದಾರ ಪ್ರಜಾಪ್ರಭುತ್ವದ ಆಚರಣೆಗಳ ಅಂತರಂಗದಲ್ಲಿರುವುದು ವ್ಯಕ್ತವಾಗುತ್ತದೆ. ಆದರೆ ಸಿದ್ಧಾಂತವು ನಿಜ ಜೀವನದ ಸೂಕ್ಷ್ಮ ಭೇದಗಳನ್ನು ಪರಿಗಣಿಸುವಲ್ಲಿ ವಿಫಲವಾಗಿದೆಯೇ ಹೊರತು, ನಿಜ ಜೀವನವು ಸೈದ್ಧಾಂತಿಕ ಆದರ್ಶಗಳಿಗೆ ಅನುಗುಣವಾಗಿ ತನ್ನ ಪ್ರಕ್ರಿಯೆಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆಯೆಂಬುದು ಇಲ್ಲಿನ ಸಮಸ್ಯೆಯಲ್ಲ. ಹೆಚ್ಚು ಸೂಕ್ಷ್ಮತೆಯುಳ್ಳ ಸಿದ್ಧಾಂತವು ಈ ಅಂತರವು ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಹಾಯಮಾಡಬಹುದೆಂಬುದನ್ನು ಗುರುತಿಸಬಹುದಿತ್ತು. ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ ವಿಭಜನೆಗಳ ಮೂಲಕ ಇದರ ಸ್ಪಷ್ಟ ಅಭಿವ್ಯಕ್ತಿಗಳು ಸಮಾಜದಲ್ಲಿ ಸ್ಪರ್ಧಾತ್ಮಕ ರಾಜಕಾರಣವು ದೃಢವಾಗಿ ಬೇರೂರಲು ಮತ್ತು ಒಂದು ರೀತಿಯ ಸಂಘಟಿತ ಬೆಳವಣಿಗೆಯನ್ನು ಹೊಂದಲು ನೆರವಾಗಿವೆ. ಜಾತಿ ಮತ್ತು ರಾಜಕಾರಣಗಳ ನಡುವಿನ ಪರಸ್ಪರ ಕ್ರಿಯೆಯನ್ನು ನಿಕಟವಾಗಿ ಗಮನಿಸಿದಾಗ ಮೂಲಭೂತ ರಚಕ ಖಂಡಗಳು ವಸ್ತುತಃ ಎಂದಿಗೂ 'ಆದಿಕಾಲೀನ ನಿಷ್ಠೆಗಳ' ಉತ್ಪನ್ನವಾಗಿರಲಿಲ್ಲವೆಂಬುದನ್ನು ತಿಳಿಸಬಹುದು. ರಾಜಕೀಯದ ಆಧಾರವಾಗುವುದಕ್ಕಿಂತ ಮುಂಚೆ ಜಾತಿ ಮತ್ತು ಸಮುದಾಯದಂತಹ ಘಟಕಗಳು ಪ್ಯಾಕೇಜಿಂಗ್‌ನ ಜಾತ್ಯತೀತ ಪ್ರಕ್ರಿಯೆಗೆ ಒಳಗಾಗಿದ್ದವು. ಇಲ್ಲಿ ಬೇರೆ ಯಾವುದೇ ಕಡೆಯಂತೆ ಹಿತಾಸಕ್ತಿ ಮತ್ತು ಸ್ವಲ್ಪಮಟ್ಟಿಗೆ ಸಿದ್ಧಾಂತವು ಪ್ರಮುಖವೆನಿದ್ದವು.

ಮೊದಲ ಹಂತದಲ್ಲಿನ ಪ್ರಸಿದ್ಧ 'ಕಾಂಗ್ರೆಸ್ ವ್ಯವಸ್ಥೆ'ಯ ಕಾರ್ಯನಿರ್ವಹಣೆಯನ್ನು ಈ ಸನ್ನಿವೇಶದ ನಿಟ್ಟಿನಲ್ಲಿ ನೋಡಬೇಕು. ಏಕಪಕ್ಷ ಪ್ರಾಬಲ್ಯದ ವ್ಯವಸ್ಥೆಯಲ್ಲಿ ಸರ್ಕಾರದ ಮತ್ತು ಪರಿಣಾಮಕಾರಿ ವಿರೋಧಿಯ ಪಾತ್ರಗಳನ್ನು ಕಾಂಗ್ರೆಸ್‌ನ ವಿವಿಧ ಗುಂಪುಗಳು ವಹಿಸಿದ್ದವು. ಇದು ಬಹು-ಪಕ್ಷ ವ್ಯವಸ್ಥೆಯ ಪೋಷಕ-ಸ್ಥಾನದ (nursery) ರೀತಿಯಲ್ಲಿ ಕಾರ್ಯನಿರ್ವಹಿಸಿತು. ರಾಜಕೀಯದ ವಿಸ್ತೃತ ವಲಯದ ವೈಪರೀತ್ಯಗಳನ್ನು ಹೊರತುಪಡಿಸಿದರೆ, ಸೈದ್ಧಾಂತಿಕ ಧ್ರುವೀಕರಣವು ಅತ್ಯಂತ ಕಡಿಮೆಯಿದ್ದು, ಕಾಂಗ್ರೆಸ್, ಮಧ್ಯದ ಸ್ಥಾನಗಳ ವಿಸ್ತೃತ ಶ್ರೇಣಿಯನ್ನು ಆಕ್ರಮಿಸಿಕೊಂಡಿತ್ತಲ್ಲದೆ, ಇವುಗಳ ಮೂಲಕ ವಿವಿಧ ಹಿತಾಸಕ್ತಿಗಳನ್ನು ವ್ಯಕ್ತಪಡಿಸಬಹುದಿತ್ತು. ಬೃಹತ್ ಮಟ್ಟದಲ್ಲಿ ಎಲ್ಲರನ್ನೂ ಹಿಡಿದಿಟ್ಟುಕೊಳ್ಳಬೇಕೆಂಬ ಕಾಂಗ್ರೆಸ್‌ನ ಸ್ವಭಾವವು, ಅದರ ಬೆಂಬಲವು ಸಮಾಜದ ವಿವಿಧ ವರ್ಗಗಳಾದ್ಯಂತ ಸಮಾನವಾಗಿ ಪ್ರಸರಿಸಿರುವುದನ್ನು ಖಾತರಿಪಡಿಸಿತು. ಈ ಲಕ್ಷಣವನ್ನು ಅದರ ಪ್ರಮುಖ ವಿರೋಧಿಗಳೂ ಅನುಸರಿಸಿದರು. ರಾಜಕೀಯ ಗಣ್ಯರ ಸಂಯೋಜನೆಯು ಮೇಲ್ಜಾತಿಯ, ಮೇಲ್ವರ್ಗದ ಮತ್ತು ಇಂಗ್ಲಿಷ್ ಶಿಕ್ಷಣ ಪಡೆದವರ ಪಕ್ಷಪಾತಿಯಾಗಿತ್ತು.

ಜನಸಾಮಾನ್ಯರ ನಂಬಿಕೆಗಳು ಕನಿಷ್ಠಪಕ್ಷ ಕೆಲವು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ವಿಧೇಯವಾಗಿರಲು ನಿರಾಕರಿಸಿದ ಕಾರಣದಿಂದಾಗಿ ಕೆಲವೊಮ್ಮೆ ಆಟವು ವಿಫಲವಾಗುವ ಆತಂಕವಿತ್ತಲ್ಲದೆ, ಭಾಷಾವಾರು ರಾಜ್ಯಗಳ ಬಗೆಗಿನ ಪ್ರಶ್ನೆಗಳು ಅವುಗಳಲ್ಲಿನ ಒಂದು ಪ್ರಶ್ನೆಯೆಂಬುದು ಸಾಬೀತಾಗಿತ್ತು. ಬ್ರಿಟಿಷರು ದೇಶವನ್ನು ಆಡಳಿತಾತ್ಮಕ ಉಪಘಟಕಗಳಾಗಿಸಿ ಕೈಗೊಂಡ ವಿಭಜನೆಯು ನೈಸರ್ಗಿಕವಾದ ಸಾಂಸ್ಕೃತಿಕ ವಿಭಜನೆಗಳಿಗೆ ಮನ್ನಣೆ ನೀಡಲಿಲ್ಲ. ಸ್ವಾತಂತ್ರ್ಯಕ್ಕಿಂತ ಎರಡು ದಶಕಗಳ ಹಿಂದೆಯೆ ಗಾಂಧಿಯವರು ಕಾಂಗ್ರೆಸ್ ಪಕ್ಷವನ್ನು ಭಾಷಾವಾರು ರಾಜ್ಯದ ತತ್ತ್ವದ ನಿಟ್ಟಿನಲ್ಲಿ ಪುನರ್ಸಂಘಟಿಸಿದ್ದರಾದರೂ ಸ್ವಾತಂತ್ರ್ಯದ ಸಂದರ್ಭದಲ್ಲಿ ಭಾರತದ ಆಡಳಿತಗಾರರು ಆ ವಿಭಜನೆಗಳನ್ನು ಹೆಚ್ಚು ಕಡಿಮೆ ಅದೇ ರೀತಿ ಉಳಿಸಿಕೊಂಡಿದ್ದರು. ಇದರ ಫಲಸ್ವರೂಪವಾಗಿ ತಲೆದೋರಿದ ಅಸಮಾಧಾನವು, ಅನೇಕ ರಾಜ್ಯಗಳಲ್ಲಿ ಮೊಟ್ಟಮೊದಲ ಸಂಘಟಿತ ರಾಜಕೀಯ ಚಳುವಳಿಗೆ ಆಧಾರವಾಯಿತು. ಸಂಯುಕ್ತ ಘಟಕಗಳನ್ನು ಭಾಷೆಯ ಆಧಾರದ ಮೇಲೆ ಪುನರ್ರಚಿಸಬೇಕೆನ್ನುವುದು ಈ ಚಳುವಳಿಯ ಉದ್ದೇಶವಾಗಿತ್ತು. ಇಂತಹ 'ಆದಿಕಾಲೀನ' ಭಾವುಕತೆಗಳ ಪ್ರಾತಿನಿಧಿಕ ಜಾತ್ಯತೀತ ಅನುಮಾನ ಆಧಾರಿತ ಆರಂಭಿಕ ಅನಿಚ್ಛೆಯ ನಂತರ ರಾಜ್ಯಗಳ ಪುನರ್ಸಂಘಟನಾ ಆಯೋಗವನ್ನು ನೇಮಿಸುವ

ಮೂಲಕ ಮತ್ತು ಬಹುತೇಕ ವಿಷಯಗಳಿಗೆ ಸಂಬಂಧಿಸಿದಂತೆ ಅದರ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುವ ಮೂಲಕ ನೆಹರೂರವರು ಬೇಡಿಕೆಯನ್ನು ಮನ್ನಿಸಿದರು. ಹೀಗೆ, ಕೌಶಲಪೂರ್ಣ ರಾಜಕೀಯ ನಿರ್ವಹಣೆಯು ಪ್ರಾದೇಶಿಕ ವೈವಿಧ್ಯತೆಯ ಕಾನೂನುಬದ್ಧ ರಾಜಕೀಯ ಅಭಿವ್ಯಕ್ತಿಯನ್ನು ದಿನನಿತ್ಯದ ಕಾರ್ಯಕಲಾಪವಾಗಿಸುವುದರ (routine) ಜೊತೆಗೆ, ಅದನ್ನು ಹಾನಿರಹಿತಗೊಳಿಸಿತು. ಈಗಾಗಲೇ ಗಮನಿಸಿದಂತೆ, ಸ್ಥಳೀಯ ಸಮುದಾಯಗಳ ನಿಟ್ಟಿನ ಜನಸಾಮಾನ್ಯರ ಸ್ವ-ಗುರುತುಗಳಿಗೆ ಎಲ್ಲಾ ರಾಜಕೀಯ ಪಕ್ಷಗಳು, ಜಾತಿಗಳನ್ನು ರಾಜಕೀಯಗೊಳಿಸುವ ಪ್ರಕ್ರಿಯೆಯ ಮೂಲಕ ಹಿಂಬಾಗಿಲ ಪ್ರವೇಶ ನೀಡಿದವು.

ಹೀಗೆ, ಉತ್ತಮ ವಿನ್ಯಾಸ, ಕೌಶಲಪೂರ್ಣ ಅನುಷ್ಠಾನ ಮತ್ತು ಅದೃಷ್ಟದ ಸಂಯೋಜನೆಯು, ನೂತನ ಪ್ರಜಾಪ್ರಭುತ್ವವು, ವ್ಯವಸ್ಥೆಯಲ್ಲಿ ಯಾರ ನಂಬಿಕೆಗಳು ಹೆಚ್ಚಾಗಿ ಪರಿಗಣಿಸಲ್ಪಟ್ಟಿಲ್ಲವೋ ಅಂತಹ ಜನರಲ್ಲಿ, ತಾವು ಪರಕೀಯರೆಂಬ ಭಾವನೆಯನ್ನು ಸೃಜಿಸದಿರುವುದನ್ನು ಮತ್ತು ಅವರಲ್ಲಿ ಆಳವಾಗಿ ಬೇರೂರಿದ ಹಗೆತನಕ್ಕೆ ಮುಖಾಮುಖಿಯಾಗದಿರುವುದನ್ನು ಖಾತರಿಪಡಿಸಿಕೊಂಡಿತು. ಚುನಾವಣಾ ರಾಜಕೀಯದ ಮೊದಲ ಹಂತದಲ್ಲಿ ಈ ವರ್ಗಗಳು ಹೆಚ್ಚು ಸಕ್ರಿಯವಾಗಿರಲಿಲ್ಲವೆಂಬುದು ಸತ್ಯ. ಇದರ ಪರಿಣಾಮವಾಗಿ, ಮೊದಲ ಎರಡು ಅಥವಾ ಕೆಲವು ಸಂದರ್ಭಗಳಲ್ಲಿ ಮೊದಲ ಮೂರು ಚುನಾವಣೆಗಳು ಸಾಪೇಕ್ಷವಾಗಿ ನಿಮ್ನ ಸ್ತರದ ಜನಸಾಮಾನ್ಯರ ಭಾಗವಹಿಸುವಿಕೆ ಮತ್ತು ಸ್ಪರ್ಧಾತ್ಮಕತೆಗೆ ಸಾಕ್ಷಿಯಾದವು. ಆದರೆ ಇದು ವಾಸ್ತವವಾಗಿ ಸ್ಪರ್ಧಾತ್ಮಕ ರಾಜಕೀಯದ ಸ್ವರೂಪವು ಬೇರೂರಲು ನೆರವಾಯಿತಲ್ಲದೆ, ತನ್ಮೂಲಕ ಅದು ಶೀಘ್ರವಾಗಿ ಸಾಂಸ್ಥೀಕರಣಗೊಳ್ಳಲು ಸಹಯೋಗವನ್ನು ನೀಡಿತು. ಚುನಾವಣಾ ವ್ಯವಸ್ಥೆ, ಪಕ್ಷ ಸಂಘಟನೆಗಳು, ಶಾಸನಸಭೆಗಳು, ನ್ಯಾಯಾಂಗ ಮತ್ತು ಅಧಿಕಾರಶಾಹಿಗಳಿಗೆ ಹೆಚ್ಚಿನ ರಿಯಾಯಿತಿ ಅವಧಿಯು (grace period) ದೊರೆಯಿತು. ಇಲ್ಲಿ ಅವುಗಳ ಸಾಮರ್ಥ್ಯಗಳು ಜನಸಾಮಾನ್ಯರ ಪ್ರಜಾಪ್ರಭುತ್ವದ ಪ್ರಯಾಸಕರ ಪರೀಕ್ಷೆಗೆ ಒಳಗಾಗಲಿಲ್ಲ.

ನೆಹರೂರವರ ಹಂತದ ಭಾರತದ ಪ್ರಜಾಪ್ರಭುತ್ವವನ್ನು ಸಂಚಯನದ (consolidation) ಅವಧಿಯೆಂದು ವ್ಯಾಪಕವಾಗಿ ಹಾಗೂ ಯುಕ್ತವಾಗಿ ಗ್ರಹಿಸಲಾಗಿದೆ. ಈ ಹಂತದ ಮತ್ತು ನೆಹರೂರವರ ಸಾಧನೆಗಳು, ಈ ಒಂದು ಸೂಕ್ಷ್ಮ ಕ್ಷಣದಲ್ಲಿ ಪ್ರಜಾಪ್ರಭುತ್ವಕ್ಕೆ ದೀರ್ಘಾವಧಿ ಸಾಂಸ್ಥಿಕ ಆಧಾರವನ್ನು ನೀಡಿದುದನ್ನು ಅಪಮೌಲ್ಯನಗೊಳಿಸತಕ್ಕದ್ದಲ್ಲ. ಗಣ್ಯರು ಮತ್ತು ಜನಸಾಮಾನ್ಯರ ನಡುವಿನ ದೊಡ್ಡ ತಾರ್ಕಿಕ ಬಿರುಕಿನಿಂದಾಗಿ (chasm) ಇವುಗಳನ್ನು ಸಾಧ್ಯವಾಗಿಸಲಾಯಿತೆಂಬುದನ್ನು ನೆನಪಿಸಿಕೊಳ್ಳಬೇಕು. ಇಂತಹ ನೆನಪಿಸುವಿಕೆ ಅಗತ್ಯವಾದುದು. ಏಕೆಂದರೆ ನೆಹರೂರವರ ಪ್ರಜಾಪ್ರಭುತ್ವದ ಕುರಿತಾದ ಗೀಳಿನ ಅಬ್ಬರದ ಪ್ರಶಂಸೆಯು ಭಾರತದ ರಾಜಕೀಯದಲ್ಲಿನ ಒಂದು ಸಾಮಾನ್ಯ ಪಲ್ಲವಿಯಾಗಿದೆ. ಅನೇಕ ಸಂದರ್ಭಗಳಲ್ಲಿ ನೆಹರೂರವರ ಭಾರತವನ್ನು ಪುನರ್ಸೃಷ್ಟಿಸುವ ಈ ಬಯಕೆಯು, ರಾಜಕೀಯವು ಜನಸಾಮಾನ್ಯರ ಪ್ರವೇಶದಿಂದ ಹಾಳಾಗದೆ ಇದ್ದಂತಹ ಸಂದರ್ಭಗಳ ಅನಂತ ವಿಸ್ತರಣೆಯ ಹಂಬಲವನ್ನು ಪ್ರತಿಬಿಂಬಿಸುತ್ತದೆ. ಪ್ರಜಾಪ್ರಭುತ್ವವನ್ನು ಜನರಿಂದ ರಕ್ಷಿಸಬೇಕೆಂಬ ಅಪೇಕ್ಷೆಯನ್ನು ಇದು ಸ್ವಲ್ಪವಷ್ಟೆ ಮರೆಮಾಚುತ್ತದೆ.

## V

ಭಾರತದ ಪ್ರಜಾಪ್ರಭುತ್ವದ ಎರಡನೆ ಹಂತವು 1967ರಲ್ಲಿ ನಡೆದ ನಾಲ್ಕನೇ ಸಾರ್ವತ್ರಿಕ ಚುನಾವಣೆಯೊಂದಿಗೆ ಪ್ರಾರಂಭವಾಯಿತೆಂದು ಹೇಳಬಹುದು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಆಧಿಪತ್ಯದ ಏಕಸ್ವಾಮ್ಯತೆಯನ್ನು ಮೊದಲ ಬಾರಿಗೆ ಮುರಿಯಲಾಯಿತು. ಹೆಚ್ಚಿನ ಮತದಾನ ಮತ್ತು ಹಿಂದುಳಿದ ವರ್ಗದವರ ಅತ್ಯಾಸಕ್ತಿಯ ಭಾಗವಹಿಸುವಿಕೆಯಿಂದ ಗುರುತಿಸಲ್ಪಡುವ ಈ ಚುನಾವಣೆಯಲ್ಲಿ ಕಾಂಗ್ರೆಸ್ ಕೇಂದ್ರದಲ್ಲಿ ಅಲ್ಪ ಬಹುಮತವನ್ನು ಉಳಿಸಿಕೊಳ್ಳಲು ಯಶಸ್ವಿಯಾಯಿತಾದರೂ, ಅನೇಕ ರಾಜ್ಯಗಳಲ್ಲಿ ಅದು ಅಧಿಕಾರವನ್ನು ಕಳೆದುಕೊಂಡಿತು. ಕಾಂಗ್ರೆಸ್‌ನ ಪ್ರಬಲ ನಾಯಕರುಗಳಾದ ಕಾಮರಾಜ್ ಮತ್ತು ಎಸ್.ಕೆ. ಪಾಟೀಲ್‌ರಂತಹವರು ಚುನಾವಣೆಯಲ್ಲಿ ಸೋತರು. ಕಾಂಗ್ರೆಸ್ ಪಕ್ಷ ಅಳಿದುಹೋಗಲಿಲ್ಲ. ಮುಂದಿನ ಚುನಾವಣೆಯಲ್ಲಿ ಅಭೂತಪೂರ್ವ ಬಹುಮತದ ಗೆಲುವಿನಿಂದಾಗಿ ಅದು ಪುನರ್ಜನ್ಮವನ್ನು

ಪಡೆಯಿತು. ಆದರೆ ಕಾಂಗ್ರೆಸ್‌ನ ವ್ಯವಸ್ಥೆ ಕೊನೆಗೊಂಡಿತು. ಇದು ರಾಜಕೀಯ ಬೆಳವಣಿಗೆಗಳ ಸರಣಿಯೊಂದರ ಪರಾಕಾಷ್ಠೆಯೂ ಹೌದು. ಕಾಂಗ್ರೆಸ್‌ನ ಕೆಲವು ಪ್ರಬಲ ನಾಯಕರನ್ನು ಸಂಘಟನಾತ್ಮಕ ಕಾರ್ಯಕ್ಕೆ ಸ್ಥಳಾಂತರಿಸುವ ಕಾಮರಾಜ್ ಯೋಜನೆ, ಪ್ರಾದೇಶಿಕ ಮುಖಂಡರ 'ಸಂಘ'ದ (syndicate) ಉಗಮ ಮತ್ತು ದಕ್ಷಿಣದಲ್ಲಿ ಹಿಂದುಳಿದ ವರ್ಗದ ರಾಜಕೀಯದ ಪ್ರಾರಂಭ - ಇವುಗಳು ಅಧಿಕಾರದ ಸಂಯೋಜನೆಯಲ್ಲಿ ಗುಣಾತ್ಮಕ ಬದಲಾವಣೆಯನ್ನು ತಂದವು.

1969, ಎರಡನೇ ಹಂತದ ಪ್ರಾರಂಭಕ್ಕೆ ಹೆಚ್ಚು ದುರ್ಬಲವಾದ ಅಭ್ಯರ್ಥಿಯೆನಿಸಿದೆ. ಈ ವರ್ಷದಲ್ಲಿ ಕಾಂಗ್ರೆಸ್ ವಿಭಜನೆಗೊಂಡ ಮಹತ್ತರ ವಿದ್ಯಮಾನವು ಘಟಿಸಿತು. ಅಂದಿನ ಪ್ರಧಾನ ಮಂತ್ರಿಯಾಗಿದ್ದ ಇಂದಿರಾಗಾಂಧಿಯವರ ನಾಯಕತ್ವದ ಶಾಸಕಾಂಗ ಗುಂಪು, ಅನೇಕ ಪ್ರಾದೇಶಿಕ ಪ್ರಬಲ ನಾಯಕರಿಂದ ಸಂಚಾಲಿತಗೊಂಡ ವ್ಯವಸ್ಥಾಪನ ಸಂಬಂಧಿತ ಗುಂಪಿನಿಂದ ಬೇರೆಯಾಯಿತು. ಇದು ನಕ್ಸಲೈಟ್ ಚಳುವಳಿಯ ಪ್ರಾರಂಭದ ವರ್ಷವೂ ಆಗಿತ್ತು. ಈ ನಕ್ಸಲೈಟ್ ಚಳುವಳಿಯು ತೀವ್ರ ಎಡಪಂಥೀಯ ಪ್ರತಿಭಟನೆಯಾಗಿದ್ದು,ತೀವ್ರವಾದಿ ಯುವಜನತೆಯ ಹೊಸ ಪೀಳಿಗೆಯನ್ನು ಆಕರ್ಷಿಸುತ್ತಿತ್ತು. ಭೂ ಅಸಮಾನತೆಯನ್ನು ಕುರಿತಾದ ಪ್ರಶ್ನೆಯನ್ನು ಇದು ತನ್ನ ಹೋರಾಟದ ವಿಷಯವಾಗಿಸಿಕೊಂಡಿತು. ಪರ್ಯಾಯವಾಗಿ, ಇಂದಿರಾಗಾಂಧಿಯವರು ಬಡತನ ನಿರ್ಮೂಲನೆಯ ಫಲಕದ ಮೂಲಕ ನಿರ್ಣಾಯಕ ಚುನಾವಣಾ ಗೆಲುವನ್ನು ಸಾಧಿಸಿದ 1971ರಲ್ಲಿ ಒಡಕನ್ನು ಗುರುತಿಸಬಹುದು. ಇದು ನಾಲ್ಕು 'ಅಲೆಗಳ' ಚುನಾವಣೆಯ ಆರಂಭವಾಗಿತ್ತು. ಇಲ್ಲಿ ವಿವಿಧ ರಾಜ್ಯಗಳಲ್ಲಿ ಬೃಹತ್ ಪ್ರಮಾಣದ ಮತ ಪರಿವರ್ತನೆಯ ಸಹಾಯದಿಂದ ಒಂದು ಪಕ್ಷವು ಚುನಾವಣೆಯಲ್ಲಿ ವ್ಯಾಪಕ ಬಹುಮತವನ್ನು ಪಡೆಯಿತು. ಇದು ಭಾರತದ ಚುನಾವಣೆಯ ಭೌತಿಕ ಲಕ್ಷಣವನ್ನು ಬದಲಾಯಿಸಿತು. ಆದರೆ ಇದ್ಯಾವುದೂ 1967ರ ಚುನಾವಣೆಯ ಫಲಿತಾಂಶಗಳು ಉಂಟುಮಾಡಿದ ಪ್ರಪಂಚವೇ ತಲೆಕೆಳಗಾದಂತಹ ಭಾವನೆಯನ್ನು ಸೃಷ್ಟಿಸಲಿಲ್ಲ.

ವಿಚ್ಛೇದಕ ಬಿಂದು (cut-off point) ಏನೇ ಇರಲಿ, ಪ್ರಾರಂಭಿಕ ಹಂತದ ಸುಮಾರು ಎರಡು ದಶಕಗಳಲ್ಲಿನ ಸ್ಥಾಪನೆ ಮತ್ತು ಚಿಂತನೆಯ ನಂತರ ಭಾರತದ ಪ್ರಜಾಪ್ರಭುತ್ವದ ಸ್ವರೂಪ ಮತ್ತು ಲಕ್ಷಣವು ಗಣನೀಯವಾಗಿ ಬದಲಾಯಿತೆಂಬುದು ಸ್ಪಷ್ಟ. ಭಾರತದ ಪ್ರಜಾಪ್ರಭುತ್ವದ ಈ ಎರಡನೇ ಹಂತವನ್ನು ಎಲ್ಲಾ ಕಥೆಗಳಲ್ಲಿಯೂ ವ್ಯವಸ್ಥೆಯ ವೈಫಲ್ಯದ ಸೂಚನೆ ಹಾಗೂ ಅದರ ವಿಷಾದನೀಯ ಕುಸಿತದ ಪ್ರಾರಂಭವೆಂದು ನೆನಪಿಸಿಕೊಳ್ಳಲಾಗುತ್ತದೆ. ಈ ಹಂತವನ್ನು ಕನಿಷ್ಠಪಕ್ಷ ಮೊದಲ ಹಂತದ ಯಶಸ್ವಿ ಸ್ಥಾಪನೆ ಮತ್ತು ಘನೀಕರಣದ ಸ್ವಾಭಾವಿಕ ಪ್ರತಿಫಲವೆಂದು ಬಾವಿಸುವುದು ಅಷ್ಟೇ ಸಮಂಜಸವೆನಿಸುತ್ತದೆ. ಭಾರತದ ಪ್ರಜಾಪ್ರಭುತ್ವ ಯುಗದ ಆಗಮನವನ್ನು ಇದು ಸೂಚಿಸುತ್ತದೆ. ಶಿಶುವನ್ನು ಈಗ ಕಾವು ಪೆಟ್ಟಿಗೆಯಿಂದ (incubator) ಹೊರತೆಗೆದು ಅತ್ಯಂತ ಅಪಾಯಕಾರಿಯಾದರೂ, ಹೆಚ್ಚು ನೈಸರ್ಗಿಕವಾದ ಪರಿಸರದಲ್ಲಿ ಇರಿಸಲಾಗಿದೆ. ವ್ಯವಸ್ಥೆಯ ವೈಫಲ್ಯದ ಪ್ರತಿಫಲವೆನ್ನುವುದಕ್ಕಿಂತ ಹೆಚ್ಚಾಗಿ ರಾಜಕೀಯ ಕಾರ್ಯಕ್ಷೇತ್ರಕ್ಕೆ ಕೆಲವು ಹೊಸ ವರ್ಗದ ಜನರನ್ನು ಸೆಳೆಯುವಲ್ಲಿ ಇದು ಪ್ರಜಾಸತ್ತಾತ್ಮಕ ರಾಜಕೀಯದ ಒಂದು ಅಸಾಧಾರಣ ಯಶಸ್ಸಾಗಿತ್ತು.

ತಮ್ಮದೇ ಆಟವೆಂಬಂತೆ ಅದನ್ನು ವೀಕ್ಷಿಸಲು ಬಂದ ಹೆಚ್ಚಿನ ಸಂಖ್ಯೆಯ ಭಾಗವಂದಿಗರು (participants), ಇದರ ಮೇಲೆ ಹೊರಿಸಲು, ತಮ್ಮ ನಿರೀಕ್ಷೆಗಳು, ಬೇಡಿಕೆಗಳು ಮತ್ತು ನಂಬಿಕೆಗಳನ್ನು ತಮ್ಮೊಂದಿಗೆ ತಂದರು. ಕನಿಷ್ಠಪಕ್ಷ ಇದುವರೆಗೆ ಅಧಿಕಾರ ಕೇಂದ್ರದಿಂದ ದೂರವಿರಿಸಿದ್ದ ಕೆಲವು ವರ್ಗದವರು ಆಟದ ನಿಯಮಗಳನ್ನು ರೂಪಿಸುವಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಇದು ಸರಿಯಾದ ಸಮಯವೆಂದು ಭಾವಿಸಿದರು. ಇವರಲ್ಲಿ ಅತ್ಯಂತ ಗಮನಾರ್ಹ ಗುಂಪೆಂದರೆ ಮಧ್ಯಮ ಜಾತಿಗೆ ಸೇರಿದ ರೈತ-ಧಣಿಗಳು. ಇವರು 'ದ್ವಿಜ'ರಿಗಿಂತ (ಬ್ರಾಹ್ಮಣ) ಸಾಕಷ್ಟು ಕೆಳಗಿನ ವರ್ಗಕ್ಕೆ ಸೇರಿದ್ದಾಗ್ಯೂ, ಸ್ಪಷ್ಟತಃ, ಮಾಜಿ-ಅಸ್ಪೃಶ್ಯರಿಗಿಂತ ಮೇಲಿನ ವರ್ಗಕ್ಕೆ ಸೇರಿದವರು. ಸಾಂಪ್ರದಾಯಿಕವಾಗಿ, ಕೃಷಿ, ಕರಕುಶಲತೆ ಮುಂತಾದವುಗಳಲ್ಲಿ ತೊಡಗಿಕೊಂಡಿರುವ ಜಾತಿಗಳ ಈ ಗುಂಪು, ಶಿಕ್ಷಣ ಮತ್ತು ಆಧುನಿಕ ಸಾರ್ವಜನಿಕ ಕಾರ್ಯಕ್ಷೇತ್ರಗಳಲ್ಲಿ ಮೇಲ್ಜಾತಿಯವರಿಗಿಂತ ಹಿಂದುಳಿದಿದ್ದರೂ, ಪ್ರಜಾಸತ್ತಾತ್ಮಕ ರಾಜಕೀಯವು ಒದಗಿಸಿದ ಅವಕಾಶಗಳ ಪ್ರಯೋಜನವನ್ನು ಪಡೆದುಕೊಂಡವರಲ್ಲಿ ಅವರೇ ಮೊದಲಿಗರಾಗಿದ್ದರು. ಸಾಪೇಕ್ಷವಾಗಿ ಸುರಕ್ಷಿತವಾದ ಆರ್ಥಿಕ ಹಿನ್ನೆಲೆಯ ಪ್ರಯೋಜನವನ್ನು

ಪಡೆದುಕೊಂಡ ಈ ಜಾತಿಗಳವರು ರಾಜಕೀಯ ಅಧಿಕಾರಕ್ಕೆ ತಮ್ಮ ಹಕ್ಕನ್ನು ಮಂಡಿಸಿದರು. ಈ ವಿದ್ಯಮಾನವು ಹೊಸ ರಾಜಕೀಯ ಪಕ್ಷಗಳ ರೂಪವನ್ನು ಪಡೆಯಿತು. ಉದಾಹರಣೆಗೆ, ಉತ್ತರ ಪ್ರದೇಶದಲ್ಲಿನ ಭಾರತೀಯ ಕ್ರಾಂತಿದಳ (BKD), ತಮಿಳುನಾಡಿನಲ ದ್ರಾವಿಡ ಮುನ್ನೇತ್ರ ಕಳಗಂ (DMK) ಮತ್ತು ಹರಿಯಾಣದಲ್ಲಿನ ವಿಶಾಲ್ ಹರಿಯಾಣ ಪಕ್ಷ. ಆದರೆ ಬಹುತೇಕ ಪ್ರಕರಣಗಳಲ್ಲಿ ಪ್ರಮುಖ ಪಕ್ಷಗಳು ಇವುಗಳ ಉದಯವನ್ನು ಸುಗಮಗೊಳಿಸಿವೆ. ಕರ್ನಾಟಕ ಮತ್ತು ಕೇರಳದಂತಹ ದಕ್ಷಿಣದ ರಾಜ್ಯಗಳಲ್ಲಿ ಸ್ವತಃ ಕಾಂಗ್ರೆಸ್, ಹಿಂದುಳಿದ ವರ್ಗಗಳನ್ನು ಸಂಘಟಿಸುವ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಿತು. ಉತ್ತರದಲ್ಲಿ ಯಾವುದೇ ಪಾತ್ರವಹಿಸಲು ಕಾಂಗ್ರೆಸ್ ಆಸಕ್ತಿ ತೋರದ ಕಾರಣದಿಂದಾಗಿ, ಸಮಾಜವಾದಿ ಪಕ್ಷಗಳು ಅದರಲ್ಲೂ ಪ್ರಮುಖವಾಗಿ ಸಂಯುಕ್ತ ಸೋಷಿಯಲಿಸ್ಟ್ ಪಕ್ಷವು (SSP) ಹಿಂದುಳಿದ ವರ್ಗದವರನ್ನು ರಾಜಕೀಯ ಮುಖ್ಯವಾಹಿನಿಗೆ ಕರೆತರುವ ನೇತೃತ್ವ ವಹಿಸಿತು.

ಈ ಹಂತವನ್ನು ಗಣ್ಯ ಸಿದ್ಧಾಂತಗಳು ಮತ್ತು ಜನಸಾಮಾನ್ಯರ ನಂಬಿಕೆಯ ವ್ಯವಸ್ಥೆಗಳ ನಡುವಿನ ಪಾರಸ್ಪರಿಕ ಕ್ರಿಯೆಯ ಪ್ರಾರಂಭವೆಂಬುದಾಗಿ ಗುರುತಿಸಲಾಗಿದೆ. ರಾಜಕೀಯ ಸ್ಪರ್ಧೆ ಹೆಚ್ಚು ತೀವ್ರಗೊಂಡಂತೆ ರಾಜಕೀಯ ಕಾರ್ಯಭಾಗಿಗಳು (actor), ಸಾಮಾನ್ಯ ಮತದಾರರ ಅಭಿರುಚಿಗಳು ಮತ್ತು ಆದ್ಯತೆಗಳತ್ತ ಗಮನಹರಿಸುವ ಅನಿವಾರ್ಯತೆಯುಂಟಾಯಿತು ಚರಣ್‌ಸಿಂಗ್‌ರವರು ಗ್ರಾಮೀಣ ಭಾರತ ಮತ್ತು ಮುಖ್ಯವಾಗಿ ಕೃಷಿ ವಲಯದ ಕಡೆಗಣಿಸುವಿಕೆಯನ್ನು ಬಯಲಿಗೆಳೆಯುವ ಮೂಲಕ ಕೈಗಾರೀಕೃತ ಅಭಿವೃದ್ಧಿಯ ಸಿದ್ಧಾಂತದಲ್ಲಿನ ದೋಷಗಳನ್ನು ಎತ್ತಿತೋರಿಸಿದರು. ಉತ್ತರದಲ್ಲಿನ ಸಮಾಜವಾದಿಗಳು ಮತ್ತು ದಕ್ಷಿಣದಲ್ಲಿ ಡಿಎಂಕೆಯಂತಹ ಪಕ್ಷಗಳು ಕಾಂಗ್ರೆಸ್‌ನ್ನು ವಿಮರ್ಶಿಸುವ ನಿಟ್ಟಿನಲ್ಲಿ, ಹಿಂದುಳಿದ ಜಾತಿಗಳ ಸಬಲೀಕರಣವನ್ನು ತಮ್ಮ ಪ್ರಮುಖ ಧ್ಯೇಯವಾಗಿಸಿದವು. ನಕ್ಸಲೈಟ್‌ಗಳು ಮತ್ತು ನಂತರದಲ್ಲಿ ಗುಜರಾತ್ ಮತ್ತು ಬಿಹಾರ್‌ಗಳಲ್ಲಿನ ಯುವ ಚಳುವಳಿಗಳು ಹೊಸ ಪೀಳಿಗೆಯವರ ಹತಾಶೆಯನ್ನು ಅಭಿವ್ಯಕ್ತಿಸಿದವು. ರಿಯಾಯತಿ ಅವಧಿಯು ಮುಗಿದಿತ್ತಲ್ಲದೆ, ಅರ್ಥವಾಗದ ಸೈದ್ಧಾಂತಿಕ ಭಾಷೆಯಲ್ಲಿ ಭರವಸೆ ನೀಡಲು ಮಂಡಿಸಲಾದ ಸಾಮಾನ್ಯೀಕೃತ ಮನವಿಗಳು ಅಪರ್ಯಾಪ್ತವಾಗಿದ್ದವು.

ರಾಜಕೀಯ ಮಾರುಕಟ್ಟೆಯ ಹೊಸ ನಿರ್ಬಂಧಗಳ ಮೊದಲ ಅನಾಹುತವು ಸರ್ಕಾರ ಮತ್ತು ವಿರೋಧ ಪಕ್ಷಗಳೆರಡರ ಎರವಲು ಪಡೆದ ಉನ್ನತ ಸಿದ್ಧಾಂತಗಳ ಭವ್ಯ ಕಟ್ಟಡವಾಗಿತ್ತು. ಇವುಗಳನ್ನು ಶಾಂತಿಪೂರ್ವಕವಾಗಿ ಮತ್ತು ಶೀಘ್ರವಾಗಿ ಸ್ವದೇಶಿ ನೂಲು ಅಥವಾ ತೇಪೆಯ ಕೆಲಸ (patchwork) ಹಾಗೂ ಸಿದ್ಧಾಂತಗಳಿಂದ ಬದಲಿಸಬೇಕಿತ್ತು. ಶ್ರೀಮತಿ. ಗಾಂಧಿ, ನೆಹರೂರವರ ಸಮಾಜವಾದವನ್ನು ವಿಚಾರಶೂನ್ಯ ಆದರೆ ಹೆಚ್ಚು ಆಕರ್ಷಕವಾದ 'ಗರೀಬಿ ಹಟಾವೋ' ಘೋಷಣೆಯಿಂದ ಬದಲಿಸಿದರು. ಹೆಚ್ಚಾಗಿ ಕಣ್ಣಿಗೆ ಕಾಣುವಂತಿದ್ದ, ನೀತಿಯ ಉಪಕ್ರಮಗಳಾದ ಎಲ್ಲಾ ಪ್ರಮುಖ ಖಾಸಗಿ ಬ್ಯಾಂಕುಗಳು ಮತ್ತು ಕಲ್ಲಿದ್ದಲು ಕೈಗಾರಿಕೆಯ ರಾಷ್ಟ್ರೀಕರಣ ಮತ್ತು ಮಾಜಿ ರಾಜಮನೆತನದ ಕುಟುಂಬಗಳಿಗೆ ನೀಡುತ್ತಿದ್ದ 'ರಾಜಧನ'ದ ರದ್ಧತಿಯು ಹೊಸ ವಾಕ್ಚಾತುರ್ಯಗಳೊಡನೆ ಸೇರಿಕೊಂಡವು. ಸಮಾಜವಾದಿ ಪಕ್ಷಗಳು ತಮ್ಮ ಸಿದ್ಧಾಂತವನ್ನು ಕೆಳಜಾತಿಗಳ ಸಾಮಾಜಿಕ ನ್ಯಾಯದ ನಿಟ್ಟಿನಲ್ಲಿ ಬದಲಿಸಿದವು. ಪ್ರಸ್ತುತ ಬಿಜೆಪಿಯ ಮಾತೃಪಕ್ಷವಾದ ಜನಸಂಘವು ಮಧ್ಯದ ಸ್ಥಾನದ ಕಡೆಗೆ ಚಲಿಸಿತು ಮತ್ತು 1980ರ ಅದರ ಪುನರ್ಜನ್ಮದ ಹೊತ್ತಿಗೆ 'ಗಾಂಧಿಯವರ ಸಮಾಜವಾದ'ವನ್ನು ವಿಧ್ಯುಕ್ತವಾಗಿ ತನ್ನ ಸೈದ್ಧಾಂತಿಕ ಸ್ವ-ವಿವರಣೆಯಾಗಿ ಅಳವಡಿಸಿಕೊಂಡಿತು. ಕಮ್ಯೂನಿಸ್ಟರು ಶುದ್ಧ ಸಿದ್ಧಾಂತಕ್ಕೆ ಅಂಟಿಕೊಂಡರು. ಆದರೆ ಅದಕ್ಕಾಗಿ ರಾಜಕೀಯ ನಿಯಂತ್ರಣದ ರೂಪದಲ್ಲಿ ಬೆಲೆ ತೆರಬೇಕಾಯಿತು. ಸ್ವತಂತ್ರ ಪಕ್ಷವೂ ಸಹ, ಶುದ್ಧ ಅರ್ಥದಲ್ಲಿ ಹೇಳುವುದಾದರೆ, ರಾಜಕೀಯ ಹಕ್ಕಿನ ಪಕ್ಷವೂ ಸಹ, ಯಾವುದೇ ನಾವೀನ್ಯತೆಯನ್ನು ತರಲಾಗದೆ ಸಲೀಸಾಗಿ ಮಾಯವಾಯಿತು.

ವಾಸ್ತವವಾಗಿ, ಸೈದ್ಧಾಂತಿಕ ನಕ್ಷೆಯ ನಿಟ್ಟಿನ ಒಟ್ಟಾರೆ ಪರಿಣಾಮವು ದುರವಸ್ಥೆಯಿಂದ ಕೂಡಿತ್ತು. ವಿವಿಧ ಕೌಶಲಗಳನ್ನು ಹೊಂದಿದ್ದ ದರ್ಜಿಗಳು ಆತುರಾತುರವಾಗಿ ಹೊಲಿದಿದ್ದ ಹೊಸ ಉಡುಪುಗಳು ಗ್ರಾಹಕನಿಗೆ ಸೂಕ್ತವಾಗಿ ಹೊಂದಿಕೆಯಾಗುವಂತಿರಲಿಲ್ಲ. ಇಂಗ್ಲಿಷ್ ಮಾತನಾಡುವ ವಿಶ್ಲೇಷಕರು ಮತ್ತು ಶುದ್ಧ ಸಿದ್ಧಾಂತವಾದಿಗಳು ಈ

ಬೆಳವಣಿಗೆಯನ್ನು ಸೈದ್ಧಾಂತಿಕ ರಾಜಕಾರಣದ ಕುಸಿತ ಅಥವಾ ಮರಣವೆಂಬುದಾಗಿ ವ್ಯಾಖ್ಯಾನಿಸಿದರು. ಏನೇ ಆದರೂ, ಒಂದು ನಿದರ್ಶನಾತ್ಮಕ ಬದಲಾವಣೆಯು ಉಂಟಾಗಿತ್ತು. ಕಟ್ಟಾ ಸೈದ್ಧಾಂತಿಕ ಪರಿಶುದ್ಧತಾವಾದಿಗಳನ್ನು ಹೊರತುಪಡಿಸಿ, ಪ್ರತಿಯೊಬ್ಬರೂ, ಉಡುಪುಗಳು ಗ್ರಾಹಕರಿಗೆ ಹೊಂದಿಕೆಯಾಗಬೇಕೇ ಹೊರತು, ಗ್ರಾಹಕರು ಉಡುಪುಗಳಿಗೆ ಹೊಂದಿಕೆಯಾಗಬೇಕಿಲ್ಲವೆಂಬುದನ್ನು ಕಂಡುಕೊಂಡರು. 'ವಾಸ್ತವಿಕ ರಾಜಕೀಯದ ವಿಷಾದನೀಯ ನಿರ್ಬಂಧಗಳಿಗೆ ಪ್ರತಿಕ್ರಿಯೆಯಾಗಿ ಬಹುತೇಕ ರಾಜಕೀಯ ಆವಿಷ್ಕಾರಗಳು ಹಿಂಬಾಗಿಲಿನ ಮೂಲಕ ಘಟಿಸುತ್ತಿದ್ದವು. ಈ ಯಾವುದೇ ಅನ್ವೇಷಕರಿಗೆ ಅದನ್ನು ಆವಿಷ್ಕಾರವೆಂದು ಕರೆಯುವ ಎದೆಗಾರಿಕೆ ಇರಲಿಲ್ಲ; ಈ ಬದಲಾವಣೆಗಳು ಅಂತಹ ಮಹತ್ವದ್ದಲ್ಲವೆಂಬಂತೆ ನಟಿಸುವ, ನಿರಾಕರಿಸುವ ಪ್ರವೃತ್ತಿಯು ಸಾಮಾನ್ಯವಾಗಿತ್ತು.

ಪ್ರಬಲ ರಾಜಕೀಯ ಸಿದ್ಧಾಂತವಾಗಿ ಲೋಕಪ್ರಿಯತೆಯ, (populism) ಉಗಮವು ಈ ನಿದರ್ಶನಾತ್ಮಕ ಸ್ಥಾನಾಂತರಣದ ತಕ್ಷಣದ ಫಲಿತಾಂಶವಾಗಿದೆ. ಈ ಗುರುತಿನ ಪಟ್ಟಿಯನ್ನು ಎಚ್ಚರಿಕೆಯಿಂದ ಅರ್ಥಮಾಡಿಕೊಳ್ಳುವ ಅವಶ್ಯಕತೆಯಿದೆ. ಏಕೆಂದರೆ ಭಾರತದ ರಾಜಕೀಯದ ಟಿಪ್ಪಣಿಗಳಲ್ಲಿ ಇದು ದುರುಪಯೋಗದ ಪದವಾಗಿಬಿಟ್ಟಿದೆ. ಲೋಕಪ್ರಿಯತೆಯನ್ನು, ರಾಜಕೀಯ ಬೇಜಾವಾಬ್ದಾರಿತನ ಮತ್ತು ಜನರಿಗೆ ವಾಸ್ತವಾಗಿ ಯಾವ ಸಹಾಯವನ್ನೂಮಾಡದೆ ಅವರನ್ನು ಓಲೈಸುವಂತಹ ದೂರದೃಷ್ಟಿಯಿಲ್ಲದ ಕ್ರಮಗಳಿಗೆ ಸಮಾನವಾಗಿ ಪರಿಗಣಿಸಲಾಗಿದೆ. ಹೀಗಾಗಿ, ಇದನ್ನು ಕೆಟ್ಟದ್ದು ಮತ್ತು ಸೈದ್ಧಾಂತಿಕ ಭ್ರಷ್ಟಾಚಾರದ ಸಂಕೇತವೆಂಬಂತೆ ನೋಡಲಾಗುತ್ತಿದೆ. ಇಂತಹ ಪಾಠ್ಯವು (reading), ಪ್ರಜಾಪ್ರಭುತ್ವೀಕರಣದ ಪ್ರಕ್ರಿಯೆಯಲ್ಲಿ ಈ ಪ್ರಮಾಣಿತವಲ್ಲದ ಸೈದ್ಧಾಂತಿಕ ಪ್ಯಾಕೇಜ್‌ಗಳ ಪಾತ್ರವನ್ನು ಅರ್ಥಮಾಡಿಕೊಳ್ಳಲು ವಿಫಲವಾಗುತ್ತದೆ. ಜನಪ್ರಿಯ ಸಿದ್ಧಾಂತಗಳು, ಜನಸಾಮಾನ್ಯರ ಆಶೋತ್ತರಗಳು ಮತ್ತು ಉನ್ನತ ಸಿದ್ಧಾಂತದ ಭಾಷೆಯ ನಡುವಿನ ಅಂತರವನ್ನು ಉನ್ನತ ಸಿದ್ಧಾಂತದ ಭಾಷೆಯನ್ನು ಅದರ ಆಧಿಪತ್ಯ ಸ್ಥಾನದಿಂದ ಕದಲಿಸದೆಯೇ ಇಲ್ಲವಾಗಿಸಿವೆ. ಶ್ರೀಮತಿ. ಗಾಂಧಿಯವರ 'ಗರೀಬಿಹಟಾವೋ', ಜನತಾ ಪಕ್ಷದವರ ಮರುಹಂಚಿಕೆಯ ನೀತಿಗಳು, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡಬೇಕೆಂಬ ಚರಣ್‌ಸಿಂಗ್‌ರವರ ಬೇಡಿಕೆ, ಎನ್.ಟಿ.ರಾಮರಾವ್‌ರವರ ಬಡವರಿಗೆ ಅಗ್ಗದ ಬೆಲೆಯಲ್ಲಿ ಅಕ್ಕಿ ಮತ್ತು ಸೀರೆಗಳನ್ನು ನೀಡುವ ನೀತಿ, ಮತ್ತು ದೇವಿಲಾಲ್‌ರವರ ರೈತರ ಬಾಕಿ ಸಾಲವನ್ನು ಮನ್ನಾಮಾಡುವ ನಿರ್ಧಾರ - ಇವೆಲ್ಲವೂ ಲೋಕಪ್ರಿಯತೆಯ (populism) ವಿವಿಧ ರೂಪಗಳನ್ನು ವ್ಯಾಖ್ಯಾನಿಸುತ್ತವೆ. ಇವುಗಳಲ್ಲಿ ಅನೇಕ ಯೋಜನೆಗಳು ಯಶಸ್ವಿಯಾಗಲಿಲ್ಲ. ಅಲ್ಲದೆ ಇವುಗಳ ಹಿಂದಿನ ಉದ್ದೇಶವು ಉತ್ತಮವಾದುದಲ್ಲ. ಆದಾಗ್ಯೂ ಈ 'ಭ್ರಷ್ಟ' ರೂಪಗಳು ಹೊಸದಾಗಿ ಮತದಾನದ ಹಕ್ಕನ್ನು ಪಡೆದವರಿಗೆ ಪ್ರಜಾಪ್ರಭುತ್ವದ ಭಾಷೆಯು ಎಟುಕುವಂತೆ ಮಾಡುವುದರ ಜೊತೆಗೆ ರಾಜಕೀಯದ ಸಿದ್ಧಾಂತ ಮತ್ತು ಆಚರಣೆಯ ನಡುವಿನ ಬೃಹತ್ ಅಂತರವನ್ನು ಕಡಿಮೆಮಾಡಿವೆ. ಇದೇ ಸಮಯದಲ್ಲಿ, ಲೋಕಪ್ರಿಯ ಸಿದ್ಧಾಂತವು ಜನಸಾಮಾನ್ಯರ ಆಶೋತ್ತರಗಳು ಮತ್ತು ಅವಶ್ಯಕತೆಗಳ ದೃಷ್ಟಿಯಿಂದ ಉನ್ನತ ಸಿದ್ಧಾಂತವನ್ನು ಮರುರೂಪಿಸುವುದಿರಲಿ, ಜನಸಾಮಾನ್ಯರ ನಂಬಿಕೆಗಳನ್ನೂ ಪ್ರತಿಬಿಂಬಿಸಲಿಲ್ಲ. ಈ ಹಂತದಲ್ಲಿ ವಿಚಾರಗಳು ಕೆಳ ಹಂತದಿಂದ ಊರ್ಧ್ವಮುಖಿಯಾಗಿ ಚಲಿಸುವುದು ಸುಲಭವಾಗಿರಲಿಲ್ಲ.

ಲೋಕಪ್ರಿಯತೆಯ ಭಾರತೀಯ ರೂಪವು, ಸಮಾಜವಾದದ ಭಾಷೆಯ ಆಯ್ದ ಸ್ವಾಯತ್ತೀಕರಣವನ್ನು ಒಳಗೊಂಡಿತ್ತು. 1956ರಲ್ಲಿ ಕಾಂಗ್ರೆಸ್, "ಸಮಾಜವಾದಿ ಮಾದರಿಯ ಸಮಾಜ"ವನ್ನು ಅಧಿಕೃತವಾಗಿ ತನ್ನ ಗುರಿಯಾಗಿ ಅಳವಡಿಸಿಕೊಂಡ ನಂತರ ಇದನ್ನು ರಾಜಕೀಯ ಮುಖ್ಯವಾಹಿನಿಯಲ್ಲಿ ಸಮ್ಮಿಳಿತಗೊಳಿಸಲಾಯಿತು. ಸಮಾಜವಾದಿ ಸಂಕೇತಗಳು ಮತ್ತು ವಾಕ್ಚಾತುರ್ಯಗಳು ಪ್ರಮುಖ ನೀತಿಗಳನ್ನು ಒಟ್ಟುಗೂಡಿಸಲು ನೆರವಾದವು. ಈ ನೀತಿಗಳು ಶುದ್ಧ ಸಮಾಜವಾದಿ ಸಿದ್ಧಾಂತ ಅಥವಾ ಸಮಾನತಾವಾದಿ ಕಾರ್ಯಸೂಚಿಗಳೊಡನೆ ಯಾವುದೇ ಸಂಬಂಧವನ್ನು ಹೊಂದಿರಲಿಲ್ಲ. ಏನೇ ಆಗಲಿ, ಮುಖ್ಯವಾಹಿನಿ ರಾಜಕೀಯವು ಜನರ ನೈಜ ಅಗತ್ಯಗಳಿಗೆ, ಕನಿಷ್ಠಪಕ್ಷ ಯಾವುದು ಒಗ್ಗೂಡಲು ಸುಲಭವಾಗಿ ಒಪ್ಪಲಿಲ್ಲವೋ ಅವುಗಳಿಗೆ, ಸೂಕ್ತವಾಗಿ ಸ್ಪಂದಿಸಲಿಲ್ಲ. ಆದರೂ, ಕಾರ್ಯಭಾಗಿಗಳನ್ನು (actor) ವಾಕ್ಚಾತುರ್ಯವು ಕಟ್ಟಿಹಾಕುವ ಪ್ರವೃತ್ತಿಯನ್ನು ಹೊಂದಿದ್ದರೂ, ಸಮಾಜವಾದದ ಭಾಷೆಯು, ಏನನ್ನು ರಕ್ಷಿಸಬಹುದು ಮತ್ತು ರಾಜಕೀಯ ಕಾರ್ಯಕ್ಷೇತ್ರದಲ್ಲಿ

ಯಾವುದನ್ನು ಕುರಿತಂತೆ ನ್ಯಾಯಯುತವಾಗಿ ವಾದಿಸಬಹುದೆಂಬುದಕ್ಕೆ ಮಿತಿಗಳನ್ನು ವಿಧಿಸುತ್ತದೆ. 1971ರಲ್ಲಿ ಮೊಟ್ಟಮೊದಲಬಾರಿಗೆ ಚುನಾವಣಾ ಫಸಲನ್ನು ಕೊಯ್ಲು ಮಾಡಿದ ನಂತರ, 1980ರ ಅಂತ್ಯದವರೆಗೆ ಲೋಕಪ್ರಿಯತೆಯು, ಆಳ್ವಿಕೆಯನ್ನು ಕುರಿತ ಭಾರತದ ರಾಜಕೀಯದ ಸಿದ್ಧಾಂತವಾಗಿತ್ತು. ಸಮಾಜವಾದಿ ಗುರುತಿನಪಟ್ಟಿಯಡಿ ಪರಿಚಿತ ಅಂಶಗಳನ್ನು ಪುನರ್ಸಂಯೋಜಿಸುವ ಮೂಲಕ ವಿವಿಧ ರಾಜಕೀಯ ಪ್ರಕಾರಗಳನ್ನು ಸಿದ್ಧಪಡಿಸಲಾಯಿತು.

ಚುನಾವಣೆಗಳು, ರಾಷ್ಟ್ರವ್ಯಾಪಿ ಮತದಾರರ ಮೂಲಕ ಒಂದೇ ಬಗೆಯ ಕಾರ್ಯಸೂಚಿಯ ಪ್ರಸ್ತುತಿಯನ್ನು ಪ್ರತಿಪಾದಿಸುವವರ ಪೈಕಿ ಯಾರ ಕಾರ್ಯಸೂಚಿಯು ಹೆಚ್ಚು ವಿಶ್ವಾಸಾರ್ಹವಾದುದು ಎಂಬುದನ್ನು ನಿರ್ಧರಿಸುವುದಾಗಿದೆ. ಅದು ಚುನಾವಣೆಯ ಲಕ್ಷಣವನ್ನು ಬದಲಾಯಿಸಿತು. ಮೊದಲ ಹಂತದಲ್ಲಿ, ಚುನಾವಣೆಗಳು ಪ್ರತಿನಿಧಿಯೊಬ್ಬನನ್ನು ಆಯ್ಕೆಮಾಡುವುದಾಗಿದ್ದವು. ರಾಷ್ಟ್ರೀಯ ತೀರ್ಪು ಈ ಎಲ್ಲಾ ಸ್ಥಳೀಯ ತೀರ್ಪುಗಳ ಒಟ್ಟು ಮೊತ್ತವನ್ನು ಒಳಗೊಂಡಿತ್ತು. 1971ರಿಂದಲೂ ಚುನಾವಣೆಗಳು ಜನಾಭಿಪ್ರಾಯ ಸಂಗ್ರಹಣೆಗಳಾದವು. ಇಡೀ ದೇಶವನ್ನು ಒಂದು ಪ್ರೇಕ್ಷಕ ಗಣವೆಂಬಂತೆ ಪರಿಗಣಿಸಿ ಏಕೈಕ ವಿಷಯದ ಬಗ್ಗೆ ತನ್ನ ತೀರ್ಪನ್ನು ನೀಡುವಂತೆ ಕೇಳಲಾಯಿತು. ಇವರುಗಳು ತಮ್ಮ ಸಂಸತ್ ಸದಸ್ಯರಿಗೆ ಮತವನ್ನು ಚಲಾಯಿಸುವ ಮೂಲಕ ತಾವು ನೇರವಾಗಿ ಪ್ರಧಾನ ಮಂತ್ರಿಯವರನ್ನೇ ಆಯ್ಕೆಮಾಡುತ್ತಿದ್ದೇವೆಯೋ ಎಂಬಂತೆ ಅದೇ ಸ್ಫೂರ್ತಿಯಿಂದ ಪ್ರತಿಕ್ರಿಯಿಸಿದರು. ಪ್ರಾದೇಶಿಕವಾಗಿ ಛಿದ್ರಗೊಂಡ ಮತದಾರ ಸಮುದಾಯವು ರಾಷ್ಟ್ರೀಯ ಮತದಾರ ಸಮುದಾಯಕ್ಕೆ ದಾರಿಯಾಯಿತು. ಈ ಸಮುದಾಯದ ಡೋಲಾಯಮಾನ ಚಿತ್ತವೃತ್ತಿಗಳು ಹೆಚ್ಚು-ಕಡಿಮೆ ದೇಶಾದ್ಯಂತ ಒಂದೇ ರೀತಿಯ ಮತಗಳ ಪರಿವರ್ತನೆಯನ್ನುಂಟುಮಾಡುವ (ಅಥವಾ ಕನಿಷ್ಠಪಕ್ಷ ಹಿಂದಿಯ ಕೇಂದ್ರಭಾಗದಾದ್ಯಂತ) ಮೂಲಕ 1971ರಿಂದ 1984ರ ನಡುವೆ ಬೃಹತ್ ಪ್ರಮಾಣದ ಚುನಾವಣಾ ಅಲೆಗಳಿಗೆ ಕಾರಣವಾದವು. ಕಾಂಗ್ರೆಸ್‌ನ್ನು ಸೋಲಿಸುವುದು ಅಸಾಧ್ಯವೇನೂ ಆಗಿರಲಿಲ್ಲ. ಆದರೂ ಅದು ತನ್ನ ಸುತ್ತ ಪಕ್ಷದ ಸ್ಪರ್ಧೆಯು ಸಂರಚನೆಯಾಗಿರುವ ಒಂದು ನಿಲುಗಂಬದಂತೆ ಮುಂದುವರಿಯಿತು.

ರಾಜ್ಯಮಟ್ಟದಲ್ಲಿನ ಚಿತ್ರಣ ಸ್ವಲ್ಪ ಬದಲಾಗಿರುವಂತೆ ಕಂಡಿತು. 1967ರಲ್ಲಿ ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ಕಾಂಗ್ರೆಸ್‌ನ್ನು ಅಧಿಕಾರ ಸ್ಥಾನದಿಂದ ಪದಚ್ಯುತಗೊಳಿಸಲಾಯಿತು. ಕಾಂಗ್ರೆಸ್‌ನ್ನು ಬದಲಿಸಿದ ಪಕ್ಷ ಅಥವಾ ಬಹುತೇಕ ಸಂದರ್ಭಗಳಲ್ಲಿ ಇದನ್ನು ಬದಲಿಸಿದ ಪಕ್ಷಗಳ ಒಕ್ಕೂಟವು ಅವುಗಳ ಸಾಮಾಜಿಕ ತಳಹದಿ ಮತ್ತು ಸೈದ್ಧಾಂತಿಕ ನಂಬಿಕೆಗಳಲ್ಲಿ ವಿಭಿನ್ನವಾಗಿದ್ದವು. ಅವು ಕಾಂಗ್ರೆಸ್‌ನ್ನು ಪದಚ್ಯುತಗೊಳಿಸಬಹುದಾದ ಅವಧಿ ಸಹ ವಿಭಿನ್ನವಾಗಿತ್ತು. ಬಹುತೇಕ ರಾಜ್ಯಗಳಲ್ಲಿ 1972ರಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದಿತು ಮತ್ತು ಅದರ ಸ್ಥಳೀಯ ಭವಿಷ್ಯವು (fate) ಕಾಂಗ್ರೆಸ್‌ನ ರಾಷ್ಟ್ರೀಯ ಪರಿಸ್ಥಿತಿಗಳೊಡನೆ ಏರಿಳಿತಗಳನ್ನು ಕಂಡಿತು. ಆದರೆ ದಕ್ಷಿಣ ಭಾರತದ ರಾಜ್ಯವಾದ ತಮಿಳುನಾಡಿನಲ್ಲಿ, 1970ರ ದಶಕದಲ್ಲಿಯೇ ಕಾಂಗ್ರೆಸ್ ಮೂರನೇ ಶಕ್ತಿಯಾಗಿ ಕುಸಿದಿತ್ತು. ಅತ್ಯಂತ ಹೆಚ್ಚು ಹಿಂದಿ ಮಾತನಾಡುವವರನ್ನು ಹೊಂದಿರುವ ರಾಜ್ಯಗಳ ಪೈಕಿ ಎರಡನೇ ರಾಜ್ಯವಾದ ಬಿಹಾರದಲ್ಲಿ, ಕಾಂಗ್ರೆಸ್ ಅಧಿಕಾರಕ್ಕೆ ಹಿಂತಿರುಗಿತಾದರೂ, 1960ರ ದಶಕದ ಕೊನೆಯಲ್ಲಿ ಅದು ಕಳೆದುಕೊಂಡ ಸಾಮಾಜಿಕ ನೆಲೆಯನ್ನು ಮತ್ತೆಂದಿಗೂ ಮರಳಿ ಪಡೆಯಲಾಗಲೇ ಇಲ್ಲ. ಪಶ್ಚಿಮ ಬಂಗಾಳದಲ್ಲಿ 1977ರಲ್ಲಿ ಅದು ಕಮ್ಯುನಿಸ್ಟ್ ಪಕ್ಷಗಳಿಗೆ ತನ್ನ ಅಧಿಕಾರವನ್ನು ಬಿಟ್ಟುಕೊಟ್ಟಿತು. ಅದನ್ನು ಮತ್ತೆ ಮರಳಿ ಪಡೆಯಲಾಗಿಲ್ಲ. 1983ರ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ದಕ್ಷಿಣದಲ್ಲಿ ಉಳಿದಿದ್ದ ಕಾಂಗ್ರೆಸ್‌ನ ಎರಡು ಭದ್ರಕೋಟೆಗಳಾದ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿನ ಸೋಲು, ಈ ಸುತ್ತನ್ನು (circle) ಪೂರ್ಣಗೊಳಿಸಿತು. ಅಷ್ಟರಲ್ಲಿ ಕೇವಲ ಮಹಾರಾಷ್ಟ್ರವನ್ನು ಹೊರತುಪಡಿಸಿ ಕನಿಷ್ಠಪಕ್ಷ ಒಮ್ಮೆಯಾದರೂ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳದಂತಹ ಯಾವುದೇ ಪ್ರಮುಖ ರಾಜ್ಯ ಭಾರತದಲ್ಲಿ ಉಳಿದಿರಲಿಲ್ಲ. ಅಸ್ಸಾಂ ಗಣ ಪರಿಷತ್ ಮತ್ತು ತೆಲುಗುದೇಶಂನಂತಹ ಪ್ರಾದೇಶಿಕ ರಾಜಕೀಯ ಪಕ್ಷಗಳ ಉಗಮವು 1990ರ ದಶಕದ ರಾಜಕೀಯ ಬೆಳವಣಿಗೆಯ ಮುನ್ಸೂಚನೆಯಾಗಿತ್ತು.

ಮೊದಲ ಹಂತದಲ್ಲಿನ ಪಕ್ಷದ ಪದ್ಧತಿಯನ್ನು 'ಕಾಂಗ್ರೆಸ್ ಪದ್ಧತಿ' ಎಂದು ಕರೆಯಲಾಗುವುದಾದರೆ ಎರಡನೇ ಹಂತವನ್ನು 'ಕಾಂಗ್ರೆಸ್-ವಿರೋಧಿ ಪದ್ಧತಿ' ಎಂದು ವಿವರಿಸಬೇಕಾಗುತ್ತದೆ. ವಾಸ್ತವವಾಗಿ, ಕಾಂಗ್ರೆಸ್ ಈಗಲೂ ಅಖಿಲ-ಭಾರತ

ವ್ಯಾಪ್ತಿಯನ್ನು ಹೊಂದಿದ್ದ ಏಕೈಕ ರಾಜಕೀಯ ಪಕ್ಷವಾಗಿತ್ತು. ಆದರೂ ಚುನಾವಣಾ ಗೆಲುವುಗಳು ತನಗೇ ಸಿಗಲಿವೆಯೆಂದು ಅದು ಭಾವಿಸುವಂತಿರಲಿಲ್ಲ. ವಿಭಿನ್ನ ಸಿದ್ಧಾಂತಗಳು ಮತ್ತು ವಿಭಿನ್ನ ಮಟ್ಟದ ರಾಜಕೀಯ ಬೆಂಬಲವನ್ನು ಹೊಂದಿದ್ದ ಅನೇಕ ರಾಜಕೀಯ ಪಕ್ಷಗಳು ಅದಕ್ಕೆ ವಿರುದ್ಧವಾಗಿದ್ದವು: ಪ್ರಮುಖವಾಗಿ ಉತ್ತರದಲ್ಲಿ, ಸದಾ ವಿಭಜಿತಗೊಳ್ಳುತ್ತಲೇ ಮತ್ತೆ ಒಂದಾಗುವ ಜನತಾ ಪಕ್ಷಗಳ ಪರಿವಾರಗಳು; ತನ್ನ ಸಾಂಪ್ರದಾಯಿಕ ನೆಲೆಯಾದ ಉತ್ತರದಿಂದ ಪಶ್ಚಿಮಕ್ಕೆ ಚಲಿಸುತ್ತಿರುವ ಜನಸಂಘದ ಪುನರಾವತಾರವಾದ ಬಲಪಂಥೀಯ ಬಿಜೆಪಿ; ಇಷ್ಟರಲ್ಲಾಗಲೇ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ಈ ಮೂರು ರಾಜ್ಯಗಳನ್ನು ಪರಿಣಾಮಕಾರಿಯಾಗಿ ಒಳಗೊಂಡಿರುವ ಎರಡು ಕಮ್ಯೂನಿಸ್ಟ್ ಪಕ್ಷಗಳು; ಜೊತೆಗೆ ಪ್ರಾದೇಶಿಕ ಪಕ್ಷಗಳು. ರಾಜಕೀಯ ಸ್ಪರ್ಧೆಯನ್ನು ಕಾಂಗ್ರೆಸ್‌ನ ವಿರುದ್ಧ ಕಾಂಗ್ರೆಸ್ಸೇತರ (congress versus non-cogress) ಎಂಬಂತೆ ಆಯೋಜಿಸಲಾಗಿತ್ತು. ಅಧಿಕಾರದಲ್ಲಿರುವಾಗಲೂ ಸಾಮಾನ್ಯವಾಗಿ 'ವಿರೋಧ ಪಕ್ಷ'ವೆಂದು ಕರೆಯಲ್ಪಡುವ ಎಲ್ಲ ಕಾಂಗ್ರೆಸ್ಸೇತರ ಪಕ್ಷಗಳು ಕೆಲವೊಮ್ಮೆ 1977 ಮತ್ತು 1989ರ ವಿದ್ಯಮಾನದಂತೆ, ಕಾಂಗ್ರೆಸ್ಸನ್ನು ಸೋಲಿಸಲು ಒಟ್ಟಾಗುತ್ತಿದ್ದವು. ಇಷ್ಟರಲ್ಲಾಗಲೇ ಮೊದಲ ಹಂತದಲ್ಲಿನ ಏಕ ಪಕ್ಷ ಪ್ರಾಬಲ್ಯದ ವ್ಯವಸ್ಥೆಯು, ಏಕ ಪಕ್ಷ ಪ್ರಾಧಾನ್ಯದ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿತ್ತು.

ಕಾಂಗ್ರೆಸ್ ಪಕ್ಷದ ವಿಭಜನೆಯ ನಂತರ ಶ್ರೀಮತಿ. ಗಾಂಧಿಯವರು ಅದನ್ನು ಪುನರ್‌ಸೃಷ್ಟಿಸಿದರು. ಅದಕ್ಕೆ ಬೆಂಬಲದ ನೆಲೆಯನ್ನು ರೂಪಿಸಿದ ಸಾಮಾಜಿಕ ಶಕ್ತಿಗಳ ಒಕ್ಕೂಟವನ್ನು ಸಹ ಪುನರ್ ರಚಿಸಲಾಯಿತು. ಅದು ವ್ಯಾಪಕ ಪ್ರತಿನಿಧಿತ್ವವನ್ನು ಸಂಘಟಿಸುವ ಸಾಮರ್ಥ್ಯವನ್ನು ಉಳಿಸಿಕೊಂಡಿತು. ಆದರೆ ಅದರ ಬೆಂಬಲವು ಎಲ್ಲ ಸಾಮಾಜಿಕ ಗುಂಪುಗಳಾದ್ಯಂತ ಯಾದೃಚ್ಛಿಕವಾಗಿ ಚದುರಿರಲಿಲ್ಲ: ಸಾಮಾಜಿಕ, ಜನಾಂಗೀಯ ಮತ್ತು ಇತರೆ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಅನೇಕ ವಿಭಿನ್ನ ಗುಂಪುಗಳ ರಾಜಕೀಯ ಮೈತ್ರಿಯು ಇದರ ಮಹತ್ವಪೂರ್ಣ ಗುರಿಯಾಗಿತ್ತು. ಈ ವಿಭಿನ್ನತೆಯು ದಟ್ಟವಾದ ತೀಕ್ಷ್ಣತೆಯನ್ನೊಳಗೊಂಡಿತ್ತು: ಸಮಾಜದ ಅಂಚುಗಳಲ್ಲಿರುವ ಗುಂಪುಗಳು ಇತರರಿಗಿಂತ ಹೆಚ್ಚಾಗಿ ಕಾಂಗ್ರೆಸ್‌ಗೆ ಮತವನ್ನು ನೀಡುವ ಪ್ರವೃತ್ತಿಯನ್ನು ಹೊಂದಿದ್ದವು. ಈ ಗುಂಪುಗಳು, ಹಿಂದೂ ಸಾಮಾಜಿಕ ಶ್ರೇಣಿವ್ಯವಸ್ಥೆಯಲ್ಲಿ ಅತ್ಯಂತ ಕೆಳಗಿನ ಹಂತದಲ್ಲಿ ಶೇ. 15-16ರಷ್ಟಿರುವ ಮಾಜಿ ಅಸ್ಪೃಶ್ಯರಾದ ದಲಿತರು, ಹಿಂದೂ ಸಾಮಾಜಿಕ ವ್ಯವಸ್ಥೆಯ ಗಡಿಯಿಂದ ಹೊರಗೆ ಜೀವಿಸುತ್ತಿರುವ ಶೇ. 8ರಷ್ಟು ಬುಡಕಟ್ಟಿನ ಲಕ್ಷಣಗಳುಳ್ಳ ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರನ್ನು ಅದರಲ್ಲೂ ಮುಖ್ಯವಾಗಿ, ಶೇ.12ರಷ್ಟಿರುವ ಮುಸ್ಲಿಮರನ್ನು ಒಳಗೊಂಡಿದ್ದವು. ಕಾಂಗ್ರೆಸ್‌ನ ಪುನರ್‌ಸೃಷ್ಟಿ ಮತ್ತು ವಿರೋಧ ಪಕ್ಷಗಳು ಕೆಲವೊಮ್ಮೆ ಪಡೆದ ಚುನಾವಣಾ ಯಶಸ್ಸು, ಗಣ್ಯರ ಪ್ರಮಾಣ ತ್ವರಿತವಾಗಿ ಹೆಚ್ಚಲು ಮತ್ತು ರಾಜಕೀಯ ಗಣ್ಯರ ಸಾಮಾಜಿಕ ಸಂಯೋಜನೆಯಲ್ಲಿನ ಕೆಲವು ಚಿರಸ್ಥಾಯಿ ಬದಲಾವಣೆಗಳಿಗೆ ಕಾರಣವಾಯಿತು. ಪ್ರಮುಖವಾಗಿ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಮೇಲ್ಜಾತಿಯಲ್ಲದ ಹಿನ್ನೆಲೆಯಿಂದ ಬಂದ ನಾಯಕರುಗಳು ಮೊದಲ ಬಾರಿಗೆ ಅಧಿಕಾರದ ರುಚಿಯನ್ನು ಸವಿದರು. ರಾಜಕೀಯ ಶಕ್ತಿ ಕೇಂದ್ರಗಳಲ್ಲಿನ ಅವರ ಪ್ರವೇಶವು ಸಾರ್ವತ್ರಿಕ ವಯಸ್ಕ ಮತದಾನದ ಪರಿಚಯದಿಂದ ಚಾಲನೆಗೊಂಡ ಸಾಂಸ್ಕೃತಿಕ ಮುಖಾಮುಖಿಯ ಪ್ರಕ್ರಿಯೆಯನ್ನು ತ್ವರಿತಗೊಳಿಸಿತು.

ಜನಸಾಮಾನ್ಯರ ನಂಬಿಕೆಗಳೊಂದಿಗಿನ ಭಾರತದ ಪ್ರಜಾಪ್ರಭುತ್ವದ ಮೊದಲ ಮುಖಾಮುಖಿಯು, ಅದನ್ನು ಒಮ್ಮೆಗೆ ಆಳವಾಗಿ ಮತ್ತು ದುರ್ಬಲವಾಗಿ ಬಿಟ್ಟು ತೆರಳಿತು. ಇದು ಭಾರತದ ಪ್ರಜಾಪ್ರಭುತ್ವವು ಬೇರೂರಲು ಸಹಕಾರಿಯಾಯಿತು. ಹೆಚ್ಚಿನ ಭಾಗವಹಿಸುವಿಕೆ ಮತ್ತು ತೀವ್ರ ರಾಜನೀತೀಕರಣವು ಪ್ರಜಾಪ್ರಭುತ್ವೀಕರಣದ ಪ್ರಕ್ರಿಯೆಯು ಈಗಲೂ ಚಾಲ್ತಿಯಲ್ಲಿದೆ ಮತ್ತು ಪ್ರತಿನಿಧಿ ಆಧಾರಿತ ಪ್ರಜಾಪ್ರಭುತ್ವದ ವ್ಯವಸ್ಥೆಯು ಭಾರತದ ಪ್ರಜಾಸತ್ತಾತ್ಮಕ ಬದುಕಿನ ಪ್ರಾರಂಭದಲ್ಲಿ ಕಲ್ಪಿಸಿಕೊಂಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜನರ ಒಪ್ಪಿಗೆಯನ್ನು ಪಡೆದುಕೊಂಡಿತ್ತೆಂಬುದನ್ನು ಅಭಿವ್ಯಕ್ತಿಸುತ್ತದೆ. ಪುನರಾವರ್ತಿತ, ಬಹುತೇಕ ವಿಧಿವತ್ತಾದ, ಸರ್ಕಾರಗಳ ಬದಲಾವಣೆಯು ನಿಯಂತ್ರಣ ಮತ್ತು ರಾಜಕೀಯ ಪರಿಣಾಮಕಾರಿತ್ವದ ಬಗೆಗಿನ ಜನರ ವಿವೇಚನೆಗೆ ನೆರವಾಯಿತು. ದಕ್ಷಿಣದಲ್ಲಿ ರಾಜಕೀಯ ಅಧಿಕಾರವು ದ್ವಿಜರ (ಬ್ರಾಹ್ಮಣರ) ಕೈಯಿಂದ ಭೂಮಾಲೀಕರಿಗೆ ವರ್ಗಾವಣೆಯಾದಂತೆ, ರಾಜಕೀಯದ ಸಾಮಾಜಿಕ ಚುನಾವಣಾಕ್ಷೇತ್ರವು ಗಣನೀಯವಾಗಿ

ವಿಸ್ತೃತಗೊಂಡಿತು. ದಕ್ಷಿಣದಲ್ಲಿ ಪ್ರಬಲ ಇತರೆ ಹಿಂದುಳಿದ ವರ್ಗಗಳ (ಓಬಿಸಿ) ಉತ್ಕರ್ಷವು ಉತ್ತರದ ರಾಜ್ಯಗಳಾದ ಉತ್ತರಪ್ರದೇಶ ಮತ್ತು ಬಿಹಾರ್ ಹಾಗೂ ಪಶ್ಚಿಮದ ರಾಜ್ಯವಾದ ಗುಜರಾತ್‌ನಲ್ಲಿ ಸ್ವಲ್ಪಮಟ್ಟಿಗೆ ಪರಿಣಾಮವನ್ನು ಬೀರಿತು. ರಾಜ್ಯಗಳತ್ತ ಇನ್ನೂ ತನ್ನ ದಿಕ್ಕನ್ನು ಬದಲಿಸದ ಈ ಅಲೆಯು, ಕಠಿಣವೆನಿಸಿದ್ದು, ಅಧಿಕಾರದ ಕೆಳಮುಖ ಅಂತಃಸ್ರವಣದ (percolation) ನಿಷ್ಠುರ ಪ್ರಕ್ರಿಯೆಯು ಚಾಲಿತಗೊಂಡಿದೆ.

ತುರ್ತು ಪರಿಸ್ಥಿತಿಯಲ್ಲಿ ರಾಜಕೀಯ ಸಂಸ್ಥೆಗಳಲ್ಲಿ ಕಂಡುಬಂದ ದೌರ್ಬಲ್ಯವನ್ನು ಸಹ ಈ ಅವಧಿಯು ಅಭಿವ್ಯಕ್ತಿಸಿತು. ಒಂದು ರೀತಿಯಲ್ಲಿ ಇದು ರಾಜಕೀಯ ಸಂಸ್ಥೆಗಳ ಬೃಹತ್ ಪ್ರಮಾಣದ ಬಿಕ್ಕಟ್ಟಿನ ಒಂದು ಭಾಗವಾಗಿತ್ತು. ಈ ಹಂತದಲ್ಲಿ ಆಮದುಮಾಡಿಕೊಂಡ ಉದಾರವಾದಿ ಪ್ರಜಾಪ್ರಭುತ್ವ ಸಂಸ್ಥೆಗಳ ತರ್ಕ ಮತ್ತು ಭಾರತದ ಸಾರ್ವಜನಿಕ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಹಾಗೂ ಪ್ರತಿನಿತ್ಯ ಆಚರಿಸಲ್ಪಡುವ ಸಾಂಸ್ಕೃತಿಕ ಸಂಕೇತಗಳ ನಡುವೆ ಸಂಘರ್ಷವು ತಲೆದೋರಿತು. ಇದರ ಪರಿಣಾಮವಾಗಿ ರಾಜಕೀಯ ಸಂಸ್ಥೆಗಳ ಅದರಲ್ಲೂ ವಿಶೇಷವಾಗಿ ಕ್ರಿಯಾತ್ಮಕ ಸ್ವಾಯತ್ತತೆಯ ಅಗತ್ಯವಿರುವವುಗಳ ಅವನತಿಯ ಪ್ರಕ್ರಿಯೆ ಪ್ರಾರಂಭವಾಯಿತು. ತುರ್ತುಪರಿಸ್ಥಿತಿಯು ಈ ಅವನತಿಯಿಂದಲೇ ತಲೆದೋರಿತೆಂದು ಹೇಳಲಾಗುವುದಿಲ್ಲವಾದರೂ, ಈ ಅವನತಿಯ ಸಂಭವನೀಯ ಪರಿಣಾಮಗಳಲ್ಲಿ ಇದೂ ಒಂದಾಗಿತ್ತು.

ಅಂತರ್ನಿಹಿತವಾಗಿ (inherently) ಅಸುರಕ್ಷಿತ ವ್ಯಕ್ತಿಯಾಗಿದ್ದ ಅಂದಿನ ಪ್ರಧಾನಮಂತ್ರಿ ಶ್ರೀಮತಿ. ಗಾಂಧಿಯವರಿಗೆ ಜೂನ್ 1975, ರಾಜಕೀಯವಾಗಿ ಅತ್ಯಂತ ಅಸುರಕ್ಷಿತ ಕಾಲವಾಗಿತ್ತು. ಅವರು ಭಾರತ ಸಂವಿಧಾನದ ಆಂತರಿಕ ತುರ್ತುಪರಿಸ್ಥಿತಿಯ ಅವಕಾಶಗಳನ್ನು ಉಪಯೋಗಿಸಿಕೊಂಡು ತಮ್ಮ ವೈಯುಕ್ತಿಕ ಬಿಕ್ಕಟ್ಟನ್ನು ರಾಷ್ಟ್ರೀಯ ತುರ್ತುಪರಿಸ್ಥಿತಿಯಾಗಿ ಪರಿವರ್ತಿಸಿ, ನಾಗರಿಕರ ಮೂಲಭೂತ ಮಾನವ ಮತ್ತು ರಾಜಕೀಯ ಹಕ್ಕುಗಳನ್ನು ಅಮಾನತುಗೊಳಿಸಿದರು. ನಂತರದ ಹತ್ತೊಂಭತ್ತು ತಿಂಗಳು, ಸಾಂಸ್ಥಿಕ ರಚನೆ ಎಷ್ಟು ದುರ್ಬಲವಾಗಿದೆ ಎಂಬುದನ್ನು ತೋರಿಸಿಕೊಟ್ಟವು. ಶ್ರೀಮತಿ. ಗಾಂಧಿಯವರು ಭಾವಿಸಿದ್ದಕ್ಕಿಂತ ಸುಲಭವಾಗಿ ರಾಜಕೀಯ ವಿರೋಧವನ್ನು ಸ್ತಬ್ಧಗೊಳಿಸಲಾಯಿತು. ಬಡವರ ವಸತಿ ಪ್ರದೇಶಗಳನ್ನು ಕಾನೂನುಬಾಹಿರವಾಗಿ ಕೆಡವುವ ಮತ್ತು ಬಲವಂತದ ಸಂತಾನಹರಣಾ ಶಸ್ತ್ರಚಿಕಿತ್ಸೆಗಳ ಪ್ರಚಾರದ ಮುಂದಾಳತ್ವ ವಹಿಸಿಕೊಂಡ ಶ್ರೀಮತಿ. ಗಾಂಧಿಯವರ ಪುತ್ರನು ಅಸಾಂವಿಧಾನಿಕವಾಗಿ ಅಧಿಕಾರದ ಕೇಂದ್ರವೆನಿಸಿದ್ದು, ನಿಸ್ಸಂದೇಹವಾಗಿಯೂ ನಿರಂಕುಶಾಧಿಕಾರದ ಅಂಶಗಳನ್ನು ಅಲ್ಲಿ ಕಾಣಬಹುದಾಗಿತ್ತು. ಅಧಿಕಾರಿಶಾಹಿ ಮತ್ತು ನ್ಯಾಯಾಂಗದ 'ಬದ್ಧತೆ'ಯ ಬಗ್ಗೆ ಸಾಕಷ್ಟು ಕೇಳಿಬರುತ್ತಿದ್ದ ಮಾತುಗಳು, ನಾಗರಿಕ ಸೇವೆಗಳು ಮತ್ತು ನ್ಯಾಯಾಂಗವು ಇನ್ನೂ ಹೆಚ್ಚಿನ ಸ್ವ-ಸಮ್ಮತಿಯಿಂದಲೇ ತಲೆಬಾಗಿದವೆಂಬುದನ್ನು ಬಿಂಬಿಸುತ್ತವೆ. ನಂತರದ ದಿನಗಳಲ್ಲಿ ಕಂಡುಬಂದ ಪುನರ್ನಿರ್ಮಾಣದ ಹೊರತಾಗಿಯೂ, ಪತ್ರಿಕಾ ದಾಖಲಾತಿಗಳು ಮತ್ತು ಬುದ್ಧಿ ಜೀವಿಗಳ ವರ್ಗದ ನಿಲುವು ವಿರೋಚಿತವಾಗಿರಲಿಲ್ಲ. ಆದರೂ ಈ ಪ್ರತಿಯೊಂದು ವರ್ಗಗಳಿಗೆ ಸಂಬಂಧಿಸಿದಂತೆ ಕೆಲವು ಗೌರವಾರ್ಹ ಅಪವಾದಗಳಿದ್ದವು. ಆದರೂ, ವೀರತ್ವಕ್ಕೆ ಬದಲಾಗಿ ಪ್ರಜಾಪ್ರಭುತ್ವದ ಚೈತನ್ಯವು, ಭಾರತವನ್ನು ಆ ಹಂತದಿಂದ ಹೊರತಂದಿತೆಂಬುದಾಗಿ ವಿವರಿಸತಕ್ಕದ್ದು. ಈ ಚೈತನ್ಯವು, ಶ್ರೀಮತಿ. ಗಾಂಧಿಯವರಲ್ಲಿ ಕೆಟ್ಟ ಮನಃಸ್ಸಾಕ್ಷಿಯನ್ನು ಕುರಿತ ವಿವೇಕವನ್ನು ಮೂಡಿಸಿತಲ್ಲದೆ, ಅಂತಿಮವಾಗಿ ಅವರನ್ನು 1977ರಲ್ಲಿ ಸಾರ್ವತ್ರಿಕ ಚುನಾವಣೆಯನ್ನು ಘೋಷಿಸುವಂತೆ ಒತ್ತಾಯಪಡಿಸಿತು. ಇದೇ ಚೈತನ್ಯವು, ಸರ್ವಾಧಿಕಾರದ ಕೇಂದ್ರಸ್ಥಾನವೆನಿಸಿದ ಉತ್ತರ ಭಾರತದಲ್ಲಿ ಆಕೆಯ ಆಳ್ವಿಕೆಯು ಸಾರ್ವಜನಿಕ ಕಾನೂನುಸಮ್ಮತಿಯನ್ನು ಕಳೆದುಕೊಳ್ಳಲು ಕಾರಣವಾಯಿತು.

1977ರ ಮಾರ್ಚ್‌ನಲ್ಲಿ ನಡೆದ ಲೋಕಸಭಾ ಚುನಾವಣೆಯ ಫಲಿತಾಂಶಗಳು ಶ್ರೀಮತಿ. ಗಾಂಧಿಯವರ ಸೋಲಿನ ಬಗ್ಗೆ ವಿಶ್ವಾಸವಿಟ್ಟು ಕೆಲಸಮಾಡಿದವರಿಗೂ ಆಶ್ಚರ್ಯಕರವಾಗಿದ್ದವು. ಉತ್ತರ ಭಾರತದ ಹಿಂದಿ ಹೃದಯಭಾಗದ 226 ಕ್ಷೇತ್ರಗಳ ಪೈಕಿ, 2 ಕ್ಷೇತ್ರಗಳನ್ನು ಹೊರತುಪಡಿಸಿ, ಮಿಕ್ಕೆಲ್ಲಾ ಕ್ಷೇತ್ರಗಳಲ್ಲಿ ಅವರ ಪಕ್ಷವು ಸೋಲಿಸಲ್ಪಟ್ಟಿತು. ಆತುರಾತುರವಾಗಿ ಒಟ್ಟುಗೂಡಿಸಿದ ಎಲ್ಲ ಪ್ರಮುಖ ಕಾಂಗ್ರೆಸ್ಸೇತರ ಪಕ್ಷಗಳ ಸಂಯೋಜನೆಯಾದ ಜನತಾ ಪಕ್ಷದ ಮುಂದಾಳತ್ವದಲ್ಲಿ ಮೊಟ್ಟಮೊದಲ ಕಾಂಗ್ರೆಸ್ಸೇತರ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿತು. ಭಾರತದ

ಪ್ರಜಾಪ್ರಭುತ್ವವು ಸ್ವಯಂ-ಸುಧಾರಕ ವ್ಯವಸ್ಥೆಯನ್ನು ರೂಪಿಸಿದೆದೆಯೆಂಬುದನ್ನು ಹಾಗೂ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಹೊಸ ಆಸರೆಯನ್ನು ಅನ್ವೇಷಿಸಬಲ್ಲದೆಂಬುದನ್ನು ತುರ್ತುಪರಿಸ್ಥಿತಿಯು ಸ್ವಲ್ಪಮಟ್ಟಿಗೆ ತೋರಿಸಿಕೊಟ್ಟಿತು.

ಎರಡು ದಶಕಗಳ ಜನಾಭಿಪ್ರಾಯದ ರಾಜಕೀಯವು ಪ್ರಜಾಪ್ರಭುತ್ವದ ಸ್ಥಳೀಯ ಲಕ್ಷಣವನ್ನು ಸಾಕಷ್ಟು ದುರ್ಬಲಗೊಳಿಸಿತು. ಮುಖ್ಯವಾಹಿನಿ ರಾಜಕೀಯದಲ್ಲಿ ವ್ಯಕ್ತವಾಗದ ಹಾಗೂ ವ್ಯಕ್ತಪಡಿಸಲಾಗದ ಚರ್ಚಾವಿಷಯಗಳನ್ನು ಸ್ಪಷ್ಟಗೊಳಿಸಬೇಕಾದ ಅವಶ್ಯಕತೆಯನ್ನು ಇದು ತೋರಿಸಿಕೊಟ್ಟಿತು. ಒಬ್ಬ ಪ್ರಜಾಪ್ರತಿನಿಧಿಯ ಭವಿಷ್ಯವು ಅವನು ಏನು ಮಾಡಿದ ಅಥವಾ ಮಾಡಲಿಲ್ಲ ಎಂಬುದರ ಮೇಲೆ ಅವಲಂಬಿತವಾಗಿರದ ಕಾರಣದಿಂದಾಗಿ, ಕೇಂದ್ರದಲ್ಲಿ ಸ್ಥಳೀಯ ಬೇಡಿಕೆಗಳ ಬಗ್ಗೆ ಮಾತನಾಡುವ ನಿಟ್ಟಿನ ಪ್ರೇರಣೆಯು ಅತ್ಯಂತ ಕಡಿಮೆಯಿತ್ತು. ಶ್ರೀಮತಿ. ಗಾಂಧಿಯವರಂತಹ ನಾಯಕರು ಜನರೊಡನೆ ನೇರ ಸಂಪರ್ಕವನ್ನು ಏರ್ಪಡಿಸಿಕೊಂಡಿದ್ದರಿಂದಾಗಿ ರಾಜಕೀಯ ಪಕ್ಷಗಳ ಸಂಘಟನಾತ್ಮಕ ಸಾಮರ್ಥ್ಯವೂ ಕೂಡಾ ಕಡಿಮೆಯಾಯಿತು. ಈ ನಾಯಕರುಗಳು ಕೆಲವೊಮ್ಮೆ ತಮ್ಮದೇ ಪಕ್ಷವನ್ನು ದುರ್ಬಲಗೊಳಿಸುವ ಉದ್ದೇಶದಿಂದಲೇ ಹೀಗೆ ಮಾಡುತ್ತಿದ್ದರು. ಆಡಳಿತವು ಹಿಂದೆಂದಿಗಿಂತಲೂ ಹೆಚ್ಚು ದೂರವಾಯಿತು. ಸರ್ಕಾರಗಳು ಹಿಂದೆಂದೂ ಕಂಡಿಲ್ಲದ ಬಹುಮತದೊಡನೆ ಅಧಿಕಾರಕ್ಕೆ ಬಂದರೂ ಸಹ ಅವು ಬಹು ಬೇಗನೆ ಜನರ ವಿಶ್ವಾಸವನ್ನು ಕಳೆದುಕೊಂಡವು. ಸಮಾಜವಾದವನ್ನು ಕುರಿತಾದ ಒಣ ಮಾತುಗಳ ಏನನ್ನೂ ಸಾಧಿಸಲಾಗದ ವೈಫಲ್ಯವೂ ಸಹ ಜನರಲ್ಲಿ ತೀವ್ರ ತರಹದ ಹತಾಶೆಗೆ ಕಾರಣವಾಯಿತು. ಜನರು ಮತ್ತು ಅಧಿಕಾರದ ಕೇಂದ್ರಗಳ ನಡುವಿನ ಅಂತರವು ಮಾರ್ಕ್ಸಿಸ್ಟ್-ಲೆನಿನಿಸ್ಟ್ ನಕ್ಸಲವಾದಿ ಚಳುವಳಿ ಹಾಗೂ ಸ್ವಚ್ಛ ಸಾರ್ವಜನಿಕ ಜೀವನಕ್ಕಾಗಿ ಗುಜರಾತ್ ಮತ್ತು ಬಿಹಾರಗಳಲ್ಲಿ ನಡೆದ ವಿದ್ಯಾರ್ಥಿಗಳ ಆಂದೋಲನದಂತಹ ಪ್ರತಿರೋಧದ ಚಳುವಳಿಗಳಿಂದ ತುಂಬಿಹೋಯಿತು. ಅನೇಕ ಪಕ್ಷರಹಿತ ರಾಜಕೀಯ ರಚನೆಗಳು ಮತ್ತು 1977ರ ಜನತಾ ಪಕ್ಷ ಅಥವಾ 1989ರಲ್ಲಿನ ವಿ.ಪಿ.ಸಿಂಗ್ ಅವರ ಜನತಾದಳದ ಚಳುವಳಿಯ ಲಕ್ಷಣಗಳನ್ನು ಹೊಂದಿದ್ದಂತಹ ಕೆಲವು ಪಕ್ಷಗಳು ಜನರ ಬೇಡಿಕೆಗಳಿಗೆ ಸ್ಪಂದಿಸದ ಮುಖ್ಯವಾಹಿನಿ ರಾಜಕೀಯ ಕಾರ್ಯಸೂಚಿಯನ್ನು ಪ್ರಭಾವಿಸುವ ನಿಟ್ಟಿನಲ್ಲಿ ನಿರ್ಮಾಣವಾದ ಅತ್ಯಂತ ಮಹತ್ವದ ಅಂತರವನ್ನು ತುಂಬಿದವು.

ಈ ಹಂತವು ರಾಷ್ಟ್ರೀಯ ರಾಜಕೀಯ ಸಮುದಾಯದ ಸೃಷ್ಟಿಗೆ ನಾಂದಿಯಾಯಿತು. ಇದರ ಎಲ್ಲರನ್ನು ಹಿಡಿದಿಟ್ಟುಕೋ ಎಂಬ ಲಕ್ಷಣವು ಪ್ರಾದೇಶಿಕ ಮತ್ತು ಜನಾಂಗೀಯ ವೈವಿಧ್ಯತೆಗಳ ಆಧಾರಿತ ಅಧಿಕಾರದ ಕೆಲವು ಹಕ್ಕು ಪ್ರತಿಪಾದನೆಗಳನ್ನು ಇಲ್ಲವಾಗಿಸಿತು. ಅಸ್ಸಾಂ ಮತ್ತು ಪಂಜಾಬ್ ರಾಜ್ಯಗಳು ಈ ರೀತಿಯ ಎರಡು ಹಕ್ಕು ಪ್ರತಿಪಾದನೆಗಳನ್ನು ಸಂವೇದನಾರಹಿತವಾಗಿ ನಿರ್ವಹಿಸಿದ ಕಾರಣದಿಂದಾಗಿ, ಈ ರಾಜ್ಯಗಳಲ್ಲಿ ದೀರ್ಘಕಾಲೀನ ರಾಜಕೀಯ ಬಿಕ್ಕಟ್ಟುಗಳು ತಲೆದೋರಿದವು. ಅಸ್ಸಾಂನಲ್ಲಿ, ಅಲ್ಲಿನವರ ಸಂಸ್ಕೃತಿ ಮತ್ತು ಬದುಕಿಗೆ ಅಪಾಯವನ್ನು ತಂದೊಡ್ಡುವಂತಿದ್ದ ಬೃಹತ್ ಪ್ರಮಾಣದ ಅಕ್ರಮ ವಲಸೆಯ ವಿರುದ್ಧ ವಿದ್ಯಾರ್ಥಿ ಚಳುವಳಿಯು ಪ್ರತಿಭಟನೆಯನ್ನು ನಡೆಸಿತು. 1983ರಲ್ಲಿ ಸಿಖ್ಖರ ಅತ್ಯುನ್ನತ ಧಾರ್ಮಿಕ ಪವಿತ್ರ ಸ್ಥಳವಾದ ಸ್ವರ್ಣ ಮಂದಿರದ ಮೇಲೆ ರಕ್ಷಣಾ ಪಡೆಗಳು ನಡೆಸಿದ ಆಪರೇಷನ್ ಬ್ಲೂಸ್ಟಾರ್ ಕಾರ್ಯಚರಣೆಗೆ ಪ್ರತಿಕ್ರಿಯೆಯಾಗಿ ನಡೆದ ಭಾಗಶಃ ಪ್ರಾದೇಶಿಕ, ಭಾಗಶಃ ಧಾರ್ಮಿಕ ರೂಪದ ಬೇಡಿಕೆಗಳ ಚಳುವಳಿಯು ಹೆಚ್ಚೂ ಕಡಿಮೆ ಆಂತರಿಕ ಯುದ್ಧದ ಸ್ವರೂಪವನ್ನೇ ಪಡೆದುಕೊಂಡಿತು. ಇದಾದ ನಂತರ 1984ರಲ್ಲಿ ಅಲ್ಪಸಂಖ್ಯಾತ ಸಿಖ್ ಜನಾಂಗವು ಬೃಹತ್ ಪ್ರಮಾಣದ ಕಗ್ಗೊಲೆಗಳಿಗೆ ತುತ್ತಾಯಿತು. ಇದಕ್ಕೆ ಸಂಬಂಧಿಸಿದ ಪಾತಕಿಗಳನ್ನು ಕೇಂದ್ರ ಸರ್ಕಾರವು ರಕ್ಷಿಸಿತೆಂದು ನಂಬಲಾಯಿತು. ಪ್ರಾದೇಶಿಕ ಪಕ್ಷಗಳ ಉಗಮವು ವೈವಿಧ್ಯತೆಯ ಕೂಗನ್ನು ಮತ್ತೆ ಚಾಲ್ತಿಗೆ ತರುವುದರ ಜೊತೆಗೆ ಪ್ರಜಾಪ್ರಭುತ್ವದ ಸ್ವಯಂ-ಸುಧಾರಕ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಮೂಡಿಸಿತು.

80ರ ದಶಕದ ಮಧ್ಯ ಭಾಗದ ಹೊತ್ತಿಗೆ ರಾಜಕೀಯ ಪರಿವರ್ತನೆಗೆ ವೇದಿಕೆ ಸಿದ್ಧವಾಗಿತ್ತು. ಆದಾಗ್ಯೂ, 1984ರಲ್ಲಿ ನಡೆದ ಇಂದಿರಾಗಾಂಧಿಯವರ ಹತ್ಯೆ ಮತ್ತು ನಂತರದ ಸಾರ್ವತ್ರಿಕ ಚುನಾವಣೆಯು ರಾಜಕೀಯ ಘಟನೆಗಳ ಸ್ವಾಭಾವಿಕ ಹರಿವನ್ನು (flow) ತಡೆಯಿತಲ್ಲದೆ, ಮುಂದಿನ ಹಂತದ ಆಗಮನವನ್ನು ಐದು ವರ್ಷಗಳ ಕಾಲ ಮುಂದೂಡಿತು. ತನ್ನೆಲ್ಲಾ

ಸಮಸ್ಯೆಗಳು ಮತ್ತು ದೌರ್ಬಲ್ಯಗಳ ಹೊರತಾಗಿಯೂ ಜನರನ್ನು ಪ್ರಜಾಪಭುತ್ವದ ಪ್ರಕ್ರಿಯೆಯಿಂದ ಹೊರಗಿಡಲು ಸಾಧ್ಯವಿಲ್ಲವೆಂಬುದನ್ನು ಈ ಹಂತವು ನಿರೂಪಿಸಿತು.

## VI

ಮೂರನೆಯ ಮತ್ತು ಈಗ ನಡೆಯುತ್ತಿರುವ ಪ್ರಜಾಪ್ರಭುತ್ವದ ರಾಜಕೀಯವು, ದಶಕದ ಅಂತ್ಯದ ಸುಮಾರಿಗೆ, ದೇಶೀಯ ವ್ಯಾಪ್ತಿಯಲ್ಲಿ ಮೂರು 'ಎಂ'ಗಳ ಏಕಕಾಲದ ಆಗಮನ ಮತ್ತು ಭಾರತದ ರಾಜಕಾರಣದಲ್ಲಿ ಸಮಾಜವಾದದ ಭಾಷೆಯ ಪ್ರಾಬಲ್ಯದ ಅಂತ್ಯವನ್ನು ಸದ್ದಿಲ್ಲದೇ, ಆದರೆ ಪರಿಣಾಮಕಾರಿಯಾಗಿ ಸೂಚಿಸಿದ ಸೋವಿಯತ್ ರಷ್ಯಾದ ಅಧಃಪತನದೊಂದಿಗೆ ಪ್ರಾರಂಭವಾಯಿತು. ಆ ಮೂರು 'ಎಂ'ಗಳೆಂದರೆ ಮಂಡಲ್, ಮಂದಿರ ಮತ್ತು ಮಾರುಕಟ್ಟೆ. ಮಂಡಲ್‌ರವರ ಅಧ್ಯಕ್ಷತೆಯಲ್ಲಿ 1980ರಲ್ಲಿ ನೇಮಿಸಲ್ಪಟ್ಟ ಸರ್ಕಾರದ ಆಯೋಗವು ಇತರೆ ಹಿಂದುಳಿದ ವರ್ಗದವರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಸುಧಾರಿಸುವ ಸಲುವಾಗಿ ಸರ್ಕಾರಿ ಉದ್ಯೋಗಗಳಲ್ಲಿ ಅವರಿಗೆ ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿತು. 1990ರಲ್ಲಿ ಜನತಾದಳ ಸರ್ಕಾರವು ಇದ್ದಕ್ಕಿದ್ದಂತೆಯೇ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಿದಾಗ, ಇತರೆ ಹಿಂದುಳಿದ ವರ್ಗದವರ ಹಕ್ಕೊತ್ತಾಯ ಮತ್ತು ಸಬಲೀಕರಣದ ಅನ್ವೇಷಣೆಯ ಸಮಗ್ರ ವಿದ್ಯಮಾನವನ್ನು ಅದು ಸೂಚಿಸಿತು. ಮಂದಿರ ಅಥವಾ ದೇವಸ್ಥಾನ ಎಂಬುದು ಪವಿತ್ರ ನಗರವಾದ ಅಯೋಧ್ಯೆಯಲ್ಲಿನ ಬಾಬರಿ ಮಸೀದಿಯು ವಾಸ್ತವವಾಗಿ ಶ್ರೀರಾಮನ ದೇವಾಲಯವಾಗಿತ್ತೆಂಬ ಬಿಜೆಪಿ ಬೆಂಬಲಿತ ಹಿಂದೂ ಮೂಲಭೂತವಾದಿ ಚಳುವಳಿಯನ್ನು ಕುರಿತದ್ದಾಗಿದೆ. 1992ರ ಡಿಸೆಂಬರಿನಲ್ಲಿ ಹಿಂದೂ ಮೂಲಭೂತವಾದಿಗಳಿಂದ ನಡೆದ ಬಾಬರಿ ಮಸೀದಿಯ ಧ್ವಂಸದೊಂದಿಗೆ ಈ ಚಳುವಳಿಯು ಪರಾಕಾಷ್ಠೆಗೆ ತಲುಪಿತು. ಮಾರುಕಟ್ಟೆ ಎಂಬ ಮೂರನೇ 'ಎಂ', ಆರ್ಥಿಕ ಉದಾರೀಕರಣದ ನೀತಿ ಮತ್ತು ಈಗ ವಿಶ್ವ ವ್ಯಾಪಾರ ಸಂಘಟನೆಯಿಂದ ನಿಯಂತ್ರಿಸಲ್ಪಡುತ್ತಿರುವ ಜಾಗತಿಕ ಆರ್ಥಿಕ ಆಡಳಿತ ಕ್ರಮದೊಂದಿಗಿನ ಏಕತೆಯನ್ನು ಸೂಚಿಸುತ್ತದೆ. 1991ರಲ್ಲಿ ಅಲ್ಪಮತದ ಕಾಂಗ್ರೆಸ್ ಸರ್ಕಾರದ ಅಂದಿನ ಹಣಕಾಸು ಸಚಿವರಾಗಿದ್ದ ಡಾ. ಮನಮೋಹನ್‌ಸಿಂಗ್‌ರವರು ಇದನ್ನು ನಿರೀಕ್ಷಿಸದ ಭಾರತೀಯರಿಗೆ ಸಂಬಂಧಿಸಿದಂತೆ, ಹಠಾತ್ತಾಗಿ ಈ ಮೂರನೆ 'ಎಂ'ನ್ನು ಜಾರಿಗೊಳಿಸಿದರು. ನಾಲ್ಕು ದಶಕಗಳ ಕಾಲ 'ಸಮಾಜವಾದಿ' ಮಾರ್ಗವನ್ನು ಅನುಸರಿಸಿದ ನಂತರ ಆ ಮಾರ್ಗದ ಬಗೆಗಿನ ತ್ವರಿತವಾಗಿ ಕುಗ್ಗುತ್ತಿರುವ ಉತ್ಸಾಹ ಮತ್ತು ವಿಶ್ವಾಸವನ್ನು ಒಪ್ಪಿಕೊಳ್ಳಲಾಗಿ, ಈ ಪ್ರಶ್ನೆಯ ಕುರಿತಂತೆ ಜನಾಭಿಪ್ರಾಯ ಪಡೆಯುವುದಿರಲಿ, ಮತದಾರರಿಗೆ ಯಾವುದೇ ಮುನ್ನೆಚ್ಚರಿಕೆಯನ್ನೂ ನೀಡದೆ ನಮ್ಮ ನೀತಿ ನಿರೂಪಕರು ಅದನ್ನು ಹಿಂಪಡೆಯಲು ನಿರ್ಧರಿಸಿದರು.

ಈ ಎಲ್ಲಾ ಬದಲಾವಣೆಗಳು ಅವು ಕಾಣಿಸುವಷ್ಟು ಆಕಸ್ಮಿಕವಲ್ಲ ಎಂದು ವಾದಿಸಬಹುದು. ರಾಜೀವ್ ಗಾಂಧಿಯವರ ಮೊದಲ ಎರಡು ವರ್ಷಗಳ ಪ್ರಧಾನಮಂತ್ರಿತ್ವವು ಈ ಕೆಲವು ಬದಲಾವಣೆಗಳನ್ನು ಸೂಚಿಸಿತು. ಮೊದಲ ಎರಡು ಆಯವ್ಯಯಪತ್ರಗಳು (ವಿಪರ್ಯಾಸವೆಂದರೆ ವಿ.ಪಿ.ಸಿಂಗ್‌ರಿಂದ ಮಂಡಿಸಲ್ಪಟ್ಟವು) 90ರ ದಶಕದ ಆರ್ಥಿಕ ಸುಧಾರಣೆಗಳ ಮೊದಲ ಸೂಚನೆಗಳನ್ನು ನೀಡಿದವು. ಮೂರು 'ಎಂ'ಗಳ ಅಂಶಗಳು ಮೊದಲ ಹಂತದಿಂದಲೇ ಉಪಸ್ಥಿತವಿದ್ದವೆಂಬುದು ಸಹ ಸತ್ಯವಾದುದು. ದಕ್ಷಿಣದ ರಾಜ್ಯಗಳಲ್ಲಿ ಇತರೆ ಹಿಂದುಳಿದ ವರ್ಗಗಳ ಹಕ್ಕೊತ್ತಾಯವು '60ರ ದಶಕ'ದಲ್ಲಿ ಪ್ರಾರಂಭವಾಯಿತು'; ಹಿಂದೂ ಮೂಲಭೂತವಾದಿಗಳು ಗೋವು-ಹತ್ಯೆಯ ವಿರುದ್ಧವಾಗಿ 1966ರಲ್ಲಿ ಅಂದೋಳವನ್ನು ಕೈಗೊಂಡರು. 1974ರಲ್ಲಿ ಗೋಧಿಯ ಸಗಟು ವ್ಯಾಪಾರವನ್ನು ರಾಷ್ಟ್ರೀಕರಣಗೊಳಿಸುವ ನಿರ್ಧಾರವನ್ನು ಸರ್ಕಾರವು ಬದಲಾಯಿಸಬೇಕಾಯಿತು. ಆದರೂ ಈ ಪ್ರವೃತ್ತಿಗಳು ಭಾರತದಾದ್ಯಂತ ಕಂಡುಬರುವಂತಾದುದು ಮತ್ತು ರಾಜಕೀಯ ಕಾರ್ಯಸೂಚಿಯನ್ನು ಪ್ರಭಾವಿಸುವಂತಾದುದು 90ರ ದಶಕದಲ್ಲಿ ಮಾತ್ರ.

ಇದಾದ ನಂತರ ರಾಜಕೀಯ ಸಂವಾದದಲ್ಲಿ ಒಂದು ಮೂಲಭೂತ ಬದಲಾವಣೆ ಕಂಡುಬಂದಿತು. ಅತ್ಯಂತ ಉನ್ನತ ಮಟ್ಟದ ಸಿದ್ಧಾಂತದ ಶುದ್ಧ ಪ್ರತಿಪಾದಕರಾದ ಕಮ್ಯೂನಿಸ್ಟ್ ಪಕ್ಷಗಳ ಸಿದ್ಧಾಂತದಲ್ಲಿ ಕಂಡುಬರುವ ಕೆಲವು ಬದಲಾವಣೆಗಳು ಸಂವಾದದ ಶಬ್ದಾವಳಿಗಳು ಎಷ್ಟರಮಟ್ಟಿಗೆ ಬದಲಾಗಿವೆಯೆಂಬುದನ್ನು ಸ್ಪಷ್ಟಪಡಿಸುತ್ತವೆ. ಮಂಡಲ್ ಚಳುವಳಿಯ ನಂತರ

ದಶಕಗಳ ಕಾಲ ಜಾತಿವ್ಯವಸ್ಥೆಯ ಬಗ್ಗೆ ಶುಷ್ಕ ಸೈದ್ಧಾಂತಿಕ ನಂಬಿಕೆಯನ್ನು ಹೊಂದಿದ್ದ ಸಿಪಿಐ (ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ), ಭಾರತೀಯ ಸಮಾಜದಲ್ಲಿ ಜಾತಿ ಎಂಬುದು ಸಾಮಾಜಿಕ ಅಸಮಾನತೆಯ ದ್ಯೋತಕವೆಂಬ ಸತ್ಯವನ್ನು ಒಪ್ಪಿಕೊಂಡಿತು. ಬಿಜೆಪಿಯ ಮಂದಿರದ ವಿಷಯವನ್ನು ಕುರಿತ ನಿಲುವನ್ನು ಎದುರಿಸಬೇಕಾದರೆ ಹಿಂದೂ ಧರ್ಮದೊಳಗಿರುವ ಪ್ರಗತಿಪರ ಅಂಶಗಳ ಕಡೆಗೆ ತಮ್ಮ ಗಮನಹರಿಸುವ ಅಗತ್ಯವಿದೆಯೆಂದು ಎರಡೂ ಕಮ್ಯೂನಿಸ್ಟ್ ಪಕ್ಷಗಳು ಆಲೋಚಿಸಿದವು. ತಮ್ಮ ಘೋಷಿತ ಸಿದ್ಧಾಂತ ಏನೇ ಇದ್ದರೂ ಇತರೆ ಎಲ್ಲಾ ರಾಜ್ಯ ಸರ್ಕಾರಗಳು ಮಾಡಿದಂತೆಯೇ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸುವ ಸಲುವಾಗಿ ವಿದೇಶೀ ಹೂಡಿಕೆಯನ್ನು ಆಕರ್ಷಿಸುವ ನೀತಿಯನ್ನು ಸಕ್ರಿಯವಾಗಿ ಅನುಸರಿಸಿತು. ಇತರೆ ಪಕ್ಷಗಳು ಸಹ ತಮ್ಮ ಸೈದ್ಧಾಂತಿಕ ನಿಲುವಿನಲ್ಲಿ ಸದ್ದಿಲ್ಲದೇ ತ್ವರಿತವಾದ ತಿದ್ದುಪಡಿಗಳನ್ನು ರೂಪಿಸಿದವು. ರಾಷ್ಟ್ರೀಯವಾದಿ ಆರ್ಥಿಕ ನೀತಿಯ ಉಚ್ಚಸ್ವರದ ತನ್ನ ಘೋಷಣೆಗಳ ಹೊರತಾಗಿಯೂ ಬಿಜೆಪಿಯು ಕಾಂಗ್ರೆಸ್ಸಿನ ಆರ್ಥಿಕ ಕಾರ್ಯಸೂಚಿಗೆ ಬಹಳ ಶ್ರದ್ಧಾಪೂರ್ವಕವಾಗಿ ಅಂಟಿಕೊಂಡಿತ್ತು. ಮಂಡಲ್ ವರದಿಯ ವಿರುದ್ಧದ ಚಳುವಳಿಯನ್ನು ಉತ್ತೇಜಿಸಿದ್ದಾಗ್ಯೂ, ಬಿಜೆಪಿಯು ಮಂಡಲ್ ವರದಿಯನ್ನು ತನ್ನ ಆಚರಣೆಯಲ್ಲಿ, ಅಧಿಕೃತವಾಗಿ ಒಪ್ಪಿಕೊಂಡಿದೆಯಲ್ಲದೆ, ಇತರೆ ಹಿಂದುಳಿದ ವರ್ಗದವರ ಉನ್ನತಿಗೆ ತನ್ನ ಸಂಘಟನೆಯೊಳಗೆ ಅವಕಾಶ ನೀಡಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನೂ ಕೈಗೊಂಡಿದೆ. ಕಾಂಗ್ರೆಸ್ ಸಹ ತಡವಾಗಿ ಮಂಡಲ್ ವರದಿಯನ್ನು ಒಪ್ಪಿಕೊಂಡಿತು; ಅತ್ಯಂತ ಪ್ರಮುಖರಾದ ಸೋನಿಯಾ ಗಾಂಧಿಯವರನ್ನು ಸಹ ಮಹಿಳಾ ಮಿಸಲಾತಿ ವಿಧೇಯಕವನ್ನು ಕುರಿತ ಇತರೆ ಹಿಂದುಳಿದ ವರ್ಗಗಳ ಸಂಸದರ ಬೇಡಿಕೆಗಳನ್ನು ಒಪ್ಪುವಂತೆ ಒತ್ತಾಯಿಸಲಾಯಿತು. ಬಾಬರಿ ಮಸೀದಿ ಧ್ವಂಸದ ನಂತರದ ಕಾಂಗ್ರೆಸ್ ಸರ್ಕಾರದ ಮೌನ ಹಾಗೂ ನಿಷ್ಕ್ರಿಯತೆಯು, ಸ್ಥಾಪಿತ ಜಾತ್ಯತೀತ ನಿಲುವಿನಿಂದ ನುಣುಚಿಕೊಳ್ಳುವ ಪಕ್ಷದ ಪ್ರಯತ್ನವನ್ನು ತೋರಿಸಿಕೊಟ್ಟಿತು. ಒಂದು ದಶಕಕ್ಕಿಂತಲೂ ಕಡಿಮೆ ಅವಧಿಯಲ್ಲಿ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿನ ಸ್ವೀಕಾರಾರ್ಹ ನಡವಳಿಕೆಗಳಲ್ಲಿ ಮೂಲಭೂತ ಬದಲಾವಣೆಗಳು ಕಂಡುಬಂದವು.

ಅದೇನೆ ಇರಲಿ, ಈ ನಾಟಕೀಯ ಬದಲಾವಣೆಗಳು ಲೋಕಸಮ್ಮತ ಕಲ್ಪನೆಯೊಂದಿಗಿನ ಪ್ರಜಾಪ್ರಭುತ್ವದ ಭಾಷೆಯ ಹೋರಾಟದ ನಮ್ಮ ಕಥೆಯನ್ನು ಛಿದ್ರಗೊಳಿಸಲಾರವು. ಮೂರನೇ ಹಂತವು ಹೋರಾಟವನ್ನು ಒಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ಯುತ್ತದೆ. ಹಠಾತ್ತಾದ ಸೈದ್ಧಾಂತಿಕ ಅಸ್ಥಿರತೆಯು ಮೊದಲ ಬಾರಿಗೆ ಕೆಳಸ್ತರದಿಂದ ಬರುವ ವಿಚಾರಗಳು ಉನ್ನತ ಸಿದ್ಧಾಂತದ ಮೇಲೆ ಪ್ರಭಾವ ಬೀರಬಹುದೆಂಬ ಸಂದರ್ಭವನ್ನು ಸೃಷ್ಟಿಸಿತು. ಸಮಾಜವಾದದ ಸಾಂಕೇತಿಕ ಶ್ರೇಷ್ಠತೆಯನ್ನು ತೆಗೆದುಹಾಕಿದ್ದು, ಅರ್ಥಗಳ ಪ್ರಜಾಸತ್ತಾತ್ಮಕ ಸಂಘರ್ಷವನ್ನು ಮುಕ್ತ ಮತ್ತು ದುರ್ಬಲಗೊಳಿಸುವ ಎರಡೂ ಪರಿಣಾಮವನ್ನುಂಟುಮಾಡಿತು. ಈ ಹಂತದಲ್ಲಿ ಹೊರಬರುವ ಕೆಲವು ಹೊಸ ನಂಬಿಕೆಗಳ ಸಮುಚ್ಚಯವು, ಸಮಾಜದ ಕೆಳಸ್ತರದಿಂದ ಹಾಗೂ ಹಿಂದಿನ ಸೈದ್ಧಾಂತಿಕ ಆಧಿಪತ್ಯದಡಿಯಲ್ಲಿ ಸ್ಪಷ್ಟಪಡಿಸಲಾಗದ ಸುಸ್ಪಷ್ಟ ಆಸಕ್ತಿಗಳಿಂದ ಬಂದಂಥವು. ಈ ಬೆಳವಣಿಗೆಯು, ದಲಿತರನ್ನೇ ಹೆಚ್ಚಾಗಿ ಹೊಂದಿರುವ ಬಹುಜನ ಸಮಾಜ ಪಕ್ಷದ (BSP) ಪ್ರಮುಖ ವ್ಯಕ್ತಿಯೊಬ್ಬರಾದ ಕಾನ್ಷಿರಾಮ್‌ರನ್ನು ಅಥವಾ ಇತರೆ ಹಿಂದುಳಿದ ವರ್ಗದ ಆಕರ್ಷಕ ಮತ್ತು ವಿವಾದಾತ್ಮಕ ನಾಯಕರಾದ ಬಿಹಾರದ ಲಾಲೂ ಯಾದವರನ್ನು ತಮ್ಮ ವರ್ಗೀಯ ಬೇಡಿಕೆಗಳನ್ನು ಅದಕ್ಕೆ ವಿರುದ್ಧವಾಗಿ ಮೌಲ್ಯೀಕರಿಸಿದ ಉನ್ನತ ಸಿದ್ಧಾಂತದ ಭಾಷೆಯಲ್ಲಿ ಪ್ರತಿಪಾದಿಸಬೇಕಾದ ಅನಿವಾರ್ಯತೆಯಿಂದ ಮುಕ್ತಗೊಳಿಸಿತು. ಇದು ಮೂರನೇ ಶಕ್ತಿಯ ಪುನಾರಚನೆಯ ಮೂಲಕ ಪ್ರಾದೇಶಿಕ ಪಕ್ಷಗಳು ಎಡಪಕ್ಷಗಳೊಡನೆ ಸಮ್ಮಿಶ್ರಗೊಳ್ಳಲು ಅನುವುಮಾಡಿಕೊಟ್ಟಿತು. ಈ ಪಕ್ಷಗಳ ಮೂಲಭೂತ ಸೈದ್ಧಾಂತಿಕ ಭಿನ್ನತೆಗಳಿಂದಾಗಿ ಇಂತಹ ಒಂದುಗೂಡುವಿಕೆಗೆ ಈ ಹಿಂದೆ ಅವಕಾಶವಿರಲಿಲ್ಲ.

ಇದು ಸೈದ್ಧಾಂತಿಕ ಕ್ಷೇತ್ರದ ಎಲ್ಲಾ ಆಯಾಮಗಳಿಗೂ ಅನ್ವಯವಾಗುವುದಿಲ್ಲ. ನೂತನ ಆರ್ಥಿಕ ನೀತಿ ಹಾಗೂ ಖಾಸಗೀಕರಣ ಮತ್ತು ಮುಕ್ತ ವ್ಯಾಪಾರದ ನಿಟ್ಟಿನ ಅದರ ಸಿದ್ಧಾಂತವು ಖಂಡಿತವಾಗಿಯೂ ಕೆಳಸ್ತರದಿಂದ ಬಂದಂತಹ ಸೈದ್ಧಾಂತಿಕ ಪ್ರಭಾವವಲ್ಲ. ರಾಜಕೀಯ ಸಂವಾದದ ಮೇಲೆ ಕೆಳಸ್ತರವು ಬೀರಿದ ಪ್ರಭಾವಕ್ಕೆ ಕಾರ್ಯಸೂಚಿಯೇ ಕುಗ್ಗಿಹೋಗುವಂತಹ ಬೆಲೆಯನ್ನು ತೆರಬೇಕಾಯಿತು. ರಾಜಕೀಯ ಆಯ್ಕೆಗಳ ಪಟ್ಟಿಯಲ್ಲಿ ಆರ್ಥಿಕ ನೀತಿಗೆ

ಸ್ಥಾನವಿಲ್ಲದಂತಾಯಿತು. ಪ್ರಮುಖ ಆರ್ಥಿಕ ನೀತಿಗಳನ್ನು ಈಗ ತಾಂತ್ರಿಕ ಜ್ಞಾನಕ್ಷೇತ್ರದದಲ್ಲಿನ ಪರಿಣಿತರು ಕೈಗೊಳ್ಳಬೇಕಿದೆ. ಸ್ವಾತಂತ್ರ್ಯಾನಂತರದಲ್ಲಿ ರಾಜಕೀಯವು ಅನುಭವಿಸಿದ ಅಸಾಧಾರಣ ಸ್ವಾಯತ್ತತೆಯು ಪ್ರಚಲಿತ ಹಂತದಲ್ಲಿ ಈಗಾಗಲೇ ಸವೆದುಹೋಗಿದೆ.

ಎರಡನೇ ಹಂತವು ಸಾಧಾರಣ ಮತದಾರನನ್ನು ಒಬ್ಬ ಗ್ರಾಹಕನನ್ನಾಗಿ ಪರಿವರ್ತಿಸಿತು. ರಾಜಕೀಯ ಸಾಹಸೋದ್ಯಮಿಗಳು ಅವನ ಅಭಿರುಚಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಯಿತು. ಮೂರನೇ ಹಂತವು ಮತದಾರರನ್ನು ಹಕ್ಕು ಪ್ರತಿಪಾದಿಸುವ ಮತ್ತು ವಿವೇಚನಾಶೀಲ ಗ್ರಾಹಕರನ್ನಾಗಿ ಪರಿವರ್ತಿಸಿದೆ. ಈ ದೃಷ್ಟಿಯಿಂದ ನೋಡುವುದಾದರೆ ಮೊಟ್ಟಮೊದಲಬಾರಿಗೆ, ವಿಚಾರಗಳ ದ್ವಿಮುಖ ವಿನಿಮಯವಾಗುತ್ತಿದೆ. ಇದುವರೆಗೆ ಅಬಲರಾಗಿದ್ದ ವರ್ಗಗಳಲ್ಲಿ ಪ್ರಜಾಸತ್ತಾತ್ಮಕ ಉನ್ನತಿಯು ಈ ಅವಧಿಯಲ್ಲಿ ಸಂಭವಿಸುತ್ತಿರುವುದು ಆಶ್ಚರ್ಯಕರ ಸಂಗತಿಯೇನಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿಶೀಲ ಸಮಾಜಗಳ ಅಧ್ಯಯನ ಕೇಂದ್ರವು [Centre for the Study of Developing Societies (CSDS)] 1996 ಮತ್ತು 1998ರ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಕೈಗೊಂಡ ಭಾರತೀಯ ಮತದಾರರನ್ನು ಕುರಿತ ಎರಡು ವ್ಯಾಪಕವಾದ ಮತ್ತು ಪ್ರಾತಿನಿಧಿಕ ರಾಷ್ಟ್ರೀಯ ಸಮೀಕ್ಷೆಗಳ ಕೆಲವು ಫಲಿತಗಳು ಗಮನಾರ್ಹವಾಗಿವೆ. ಮತದಾನದಿಂದ ಆರಂಭಗೊಂಡು, ರಾಜಕೀಯ ಪಕ್ಷಗಳ ಸದಸ್ಯತ್ವದವರೆಗೆ ಎಲ್ಲಾ ರೀತಿಯ ರಾಜಕೀಯ ಭಾಗವಹಿಸುವಿಕೆಯಲ್ಲಿ ದಲಿತರಲ್ಲಿ ಕಂಡುಬಂದ ನಾಟಕೀಯ ಬೆಳವಣಿಗೆಯನ್ನು ಈ ಸಮೀಕ್ಷೆಗಳು ವರದಿದಮಾಡಿವೆ. ಆದಿವಾಸಿಗಳಲ್ಲಿಯೂ ಸಹ ಬದಲಾವಣೆಯ ಪ್ರಾರಂಭವು ಕಂಡುಬರುತ್ತದೆ. 1996ರ ಚುನಾವಣೆಯಲ್ಲಿ ಆದಿವಾಸಿಗಳ ಮತದಾನದ ಪ್ರಮಾಣ ಇದ್ದಕ್ಕಿದ್ದಂತೆ ಹೆಚ್ಚಾಗಿರುವುದೇ ಇದಕ್ಕೆ ಸಾಕ್ಷಿ. ಆದರೆ ಇಂತಹುದೇ ಬದಲಾವಣೆ ಇತರೆ ಚಟುವಟಿಕೆಗಳಲ್ಲಿ ಕಂಡುಬರುವುದಿಲ್ಲ. ಮಹಿಳೆಯರಿಗೆ ಸಂಬಂಧಿಸಿದಂತೆ, ಭಾಗವಹಿಸುವಿಕೆಯಲ್ಲಿನ ಹೆಚ್ಚಳವು, ಮತದಾನದ ಪ್ರಮಾಣವನ್ನು ಹೊರತುಪಡಿಸಿ ಉಳಿದೆಲ್ಲ ಹಂತಗಳ ಮೇಲೆ ಪರಿಣಾಮವನ್ನು ಬೀರಿತು. 1998ರಲ್ಲಿ ಮಹಿಳಾ ಮತದಾನದ ಪ್ರಮಾಣವು ಅತ್ಯಲ್ಪ ಸುಧಾರಣೆಯನ್ನು ದಾಖಲಿಸಿತು. ಇವು ಅರ್ಥಹೀನವಾದ ಅಂಕಿ ಸಂಖ್ಯೆಗಳಲ್ಲ, ಅಥವಾ ಮತದಾನ ಪ್ರಮಾಣ ಮತ್ತು ರಾಜಕೀಯ ಕ್ರಿಯಾಶೀಲತೆಯು ಉನ್ನತ ಮಧ್ಯಮ ವರ್ಗದವರಿಗಿಂತ ಕಡುಬಡವರಲ್ಲಿ ಹೆಚ್ಚಾಗಿರುವ ವಿದ್ಯಮಾನವು, ವಿಶ್ವದ ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳ ಪೈಕಿ ಭಾರತದಲ್ಲಿ ಮಾತ್ರ ಕಂಡುಬರುತ್ತದೆ ಎಂದರ್ಥವಲ್ಲ. ಇವುಗಳು ಪ್ರಜಾಪ್ರಭುತ್ವದ ಮನೋಭಾವದೊಂದಿಗೆ ಸಂಬಂಧಿತ ಭಾಗವಹಿಸುವಿಕೆಯ ಹೆಚ್ಚಳದ ಉದಾಹರಣೆಗಳಲ್ಲದೇ ಬೇರೇನೂ ಅಲ್ಲ.

ವಿಚಾರಗಳ ಸಂಘರ್ಷದ ಉಗ್ರ ಸುಧಾರವಾದೀಕರಣವು ತನ್ನಷ್ಟಕ್ಕೆ ತಾನೇ ರಾಜಕೀಯದ ಸುಧಾರವಾದಿ ಕಾರ್ಯಸೂಚಿಯನ್ನು ಸೃಷ್ಟಿಸುವುದಿಲ್ಲ. ಉನ್ನತ ಸಿದ್ಧಾಂತದ ಸ್ಥಾಪಿತ ಭಾಷೆಯ ಕ್ಷೀಣಿಸುವಿಕೆ ಮತ್ತು ಅದಕ್ಕೆ ಬದಲಾಗಿ ದೇಶೀಯವಾಗಿ ಸೃಷ್ಟಿಸಿದ ಪರ್ಯಾಯ ಭಾಷೆಯನ್ನು ಬಳಸಲಾಗದಿದ್ದುದು ತಳವರ್ಗದ ರಾಜಕೀಯ ಸಂಘಟನೆಗಳನ್ನು ಯಾವುದೇ ಸಮಗ್ರಗೊಳಿಸುವ ಅಥವಾ ಪರಿಶೋಧಿಸುವ ಸೈದ್ಧಾಂತಿಕ ತಂತ್ರದಿಂದ ವಂಚಿತಗೊಳಿಸಿದೆ. ತಳವರ್ಗದವರ (ಅದರಲ್ಲೂ ಮುಖ್ಯವಾಗಿ ದಲಿತರು ಮತ್ತು ಇತರೆ ಹಿಂದುಳಿದ ವರ್ಗದವರ) ಬೆಳವಣಿಗೆಯು ರಾಜಕೀಯದ ಕೇಂದ್ರ ಸ್ಥಾನಕ್ಕೆ ತಂದ ನಂಬಿಕೆಗಳು ಹಲವುಬಾರಿ ತುಣುಕುಗಳಂತೆ ಅಸಮಗ್ರ ಸ್ವರೂಪದಲ್ಲಿದ್ದು, ಒಂದು ವರ್ಗ ಮತ್ತು ಒಂದು ವಿಷಯಕ್ಕೆ ಮಾತ್ರವೇ ಸಂಬಂಧಿಸಿದವಾಗಿದ್ದವು. ಇತರೆ ಹಿಂದುಳಿದ ವರ್ಗಗಳ ಬೆಳವಣಿಗೆಯ ಎರಡು ರಾಜಕೀಯ ಅಭಿವ್ಯಕ್ತಿಗಳಾದ ಸಮಾಜವಾದಿ ಪಕ್ಷ (SP) ಮತ್ತು ರಾಷ್ಟ್ರೀಯ ಜನತಾದಳ (RJD) ಪಕ್ಷಗಳು ಎಲ್ಲ ಇತರೆ ಹಿಂದುಳಿದ ವರ್ಗದವರ ಪರವಾದ ಕಾರ್ಯಸೂಚಿ ಅಥವಾ ಅಸ್ಮಿತೆಯನ್ನು ರೂಪಿಸಲು ಸಾಧ್ಯವಾಗಿಲ್ಲ; ಅನೇಕ ಸಂದರ್ಭಗಳಲ್ಲಿ ಇವುಗಳು ಕೇವಲ ಯಾದವರ ಹಿತಾಸಕ್ತಿಗಳನ್ನು ಮಾತ್ರ ಕಾಪಾಡುವ ಪಕ್ಷಗಳಾಗಿ ಕಂಡುಬರುತ್ತವೆ. ಸಮಾಜವಾದಿ ಪಕ್ಷವು ತನ್ನ ಆಕ್ರೋಶವನ್ನು ಕಾಂಗ್ರೆಸ್ ಅಥವಾ ಯಾವುದೇ ಮೇಲ್ವರ್ಗದ ಜಾತಿಯ ಪಕ್ಷದ ವಿರುದ್ಧ ವ್ಯಕ್ತಪಡಿಸದೆ, ದಲಿತರ ಪರವಾದ ಬಿಎಸ್‌ಪಿ ವಿರುದ್ಧ ಆ ಆಕ್ರೋಶವನ್ನು ಮೀಸಲಿರಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಬಿಎಸ್‌ಪಿ (BSP) ಘೋಷವಾಕ್ಯ "ಮತ ನಮ್ಮದು ರಾಜ್ಯಭಾರ ನಿಮ್ಮದು, ನಡೆಯುವುದಿಲ್ಲ" ಎಂಬುದು ಈ ಸಿದ್ಧಾಂತಗಳ ಪ್ರಚೋದಕ ಶಕ್ತಿ ಮತ್ತು ಸಂಕುಚಿತ ದೃಷ್ಟಿಕೋನಗಳನ್ನು ಸೂಚಿಸುತ್ತದೆ. ಒಂದೆಡೆ, ಸ್ವಯಂ-ಆಡಳಿತದ ಪ್ರಜಾಸತ್ತಾತ್ಮಕ ಹಕ್ಕನ್ನು ಪ್ರತಿಪಾದಿಸುವ ಮೂಲಕ ವಿಮೋಚನೆಯ ಭರವಸೆಯನ್ನು ಇದು ನೀಡುತ್ತದೆ. ಅದೇ ಸಮಯದಲ್ಲಿ, ಈ ಸಮೀಕರಣದಲ್ಲಿನ 'ನಮ್ಮ' ಮತ್ತು 'ನಿಮ್ಮ' ಎಂಬ ಪದಗಳನ್ನು ನಿಶ್ಚಯವಾಗಿಯೂ ವರ್ಗೀಕರಿಸುವ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಸನ್ನಿವೇಶದಲ್ಲಿ ನನ್ನ ಆಡಳಿತ ಎಂಬುದರ ಅರ್ಥವು, ನನ್ನ ಸಮುದಾಯದಲ್ಲಿ ಹುಟ್ಟಿದವರ ಆಡಳಿತ ಎಂದಲ್ಲದೇ ಬೇರೇನೂ ಅಲ್ಲ. ಈ ವರ್ಗೀಕೃತ ಹಕ್ಕು ಪ್ರತಿಪಾದನೆಗಳನ್ನು ಉದಾರ ಪ್ರಜಾಪ್ರಭುತ್ವದ ಭಾಷೆಯಲ್ಲಿ ತೆಳುವಾಗಿ ಮುಚ್ಚಲಾಗಿದೆ. ಈ ಪ್ರತಿಪಾದನೆಗಳು ರಾಜ್ಯವ್ಯವಸ್ಥೆಯ ಒಂದು ಸಮಗ್ರ ದರ್ಶನವನ್ನು ಒದಗಿಸುವುದಿರಲಿ, ವಿವಿಧ ವರ್ಗಗಳ ಪೈಪೋಟಿಯುತ ಪ್ರತಿಪಾದನೆಗಳ ನಡುವೆ ಸೈದ್ಧಾಂತಿಕ ಸಂಧಾನವನ್ನು ನಡೆಸುವ ಪ್ರಯತ್ನವನ್ನೂ ಮಾಡುವುದಿಲ್ಲ. ಬಿಎಸ್‌ಪಿಯು ಬಹುಮತದ ಆಡಳಿತವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆಯಾದರೂ, ಜಾತಿ ವ್ಯವಸ್ಥೆಯ ಇತರೆ ಬಲಿಪಶುಗಳು, ಇತರೆ ಹಿಂದುಳಿದ ವರ್ಗದವರು ಅಥವಾ ಆದಿವಾಸಿಗಳಂತಹ ಇತರೆ ದಮನಿತರ ಪ್ರತಿಪಾದನೆಗಳೊಂದಿಗೆ ದಲಿತರ ಪ್ರತಿಪಾದನೆಯನ್ನು ಸಮನ್ವಯಗೊಳಿಸುವ ಪ್ರಯತ್ನವನ್ನು ಸಹ ಅದು ಮಾಡಿರುವುದಿಲ್ಲ. ಈ ಹಿಂದಿನ ಹಂತಗಳಲ್ಲಿ ವಿಭಿನ್ನ ಪಕ್ಷಗಳಲ್ಲಿನ ಸಂಧಾನ ಮತ್ತು ಹೊಂದಾಣಿಕೆಗಳ ಮೂಲಕ ಸಾಧಿಸಲಾಗಿರುವುದನ್ನು, ಪ್ರತಿಯೊಂದು ಪಕ್ಷವೂ ಪ್ರಕ್ರಿಯೆಗೊಳಪಡಿಸುವ ಸೈದ್ಧಾಂತಿಕ ತುಣುಕುಗಳನ್ನು ಒಟ್ಟಾಗಿ ಜೋಡಿಸುವ ನಿಟ್ಟಿನ ರಾಜಕೀಯ ಒಕ್ಕೂಟದ ಮೂಲಕ ಸಾಧಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಹೀಗಾಗಿ ಬಿಎಸ್‌ಪಿ ಮತ್ತು ಎಸ್‌ಪಿ (SP) ನಡುವಿನ ತಾತ್ಕಾಲಿಕ ಮತ್ತು ಅಂತರ್ಗತವಾಗಿ ದುರ್ಬಲವೆನಿಸಿದ ಮೈತ್ರಿಯ ಮೂಲಕ ದಲಿತರು ಮತ್ತು ಹಿಂದುಳಿದ ವರ್ಗದವರ ಹಕ್ಕು ಪ್ರತಿಪಾದನೆಗಳ ಸಂಧಾನವು ನಡೆಯುತ್ತದೆ.

ಸಾರ್ವತ್ರಿಕ ವಯಸ್ಕ ಮತದಾನದ ತರ್ಕದ ನಿಟ್ಟಿನ ಸಂಪೂರ್ಣ ಕಾರ್ಯಾಚರಣೆಯನ್ನು ಈ ಹಂತದ ರಾಜಕೀಯವು ಪ್ರತಿನಿಧಿಸುತ್ತದೆ. ಈಗ ಚುನಾವಣಾ ರಾಜಕೀಯವು ಪ್ರಜಾಪ್ರಭುತ್ವೀಕರಣದ ಕೇಂದ್ರೀಯ ಕಾರ್ಯಕ್ಷೇತ್ರವಾಗಿದೆ. ವಿಶೇಷವಾಗಿ ರಾಜ್ಯಮಟ್ಟದ ಮತ್ತು ಸ್ಥಳೀಯಮಟ್ಟದ ಚುನಾವಣೆಗಳಲ್ಲಿ ಸಮಾಜದ ಕೆಳಸ್ತರದ ಜನರ ಹೆಚ್ಚಿನ ಮಟ್ಟದ ಪಾಲ್ಗೊಳ್ಳುವಿಕೆಯನ್ನು ಮತ್ತು ಅವರನ್ನು ಅತ್ಯಧಿಕ ಮಟ್ಟದಲ್ಲಿ ರಾಜಕೀಯಗೊಳಿಸುವುದನ್ನು ಈ ಹಂತದಲ್ಲಿ ಗುರುತಿಸಬಹುದಾಗಿದೆ. ನಗರ ಪ್ರದೇಶದವರು, ಉನ್ನತ ಮೇಲ್ವರ್ಗದವರು ಪಾಲ್ಗೊಳ್ಳುವಿಕೆಯ ಉತ್ಸಾಹವನ್ನು ತೋರದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ರಾಜಕೀಯ ವ್ಯವಸ್ಥೆಯಲ್ಲಿ ಸಾಕಷ್ಟು ಹೆಚ್ಚಿನ ನ್ಯಾಯಸಮ್ಮತಿಯು ಕಂಡುಬರುತ್ತಿದೆಯಾದರೂ, ರಾಜಕೀಯ ಸಂಸ್ಥೆಗಳ ಮತ್ತು ರಾಜಕೀಯ ಪಾತ್ರದಾರಿಗಳ ಔಚಿತ್ಯವು ಕುಸಿತವನ್ನು ಕಂಡಿದೆ. ಎರಡನೆ ಹಂತವು ಪ್ರಥಮ ಪ್ರಜಾಸತ್ತಾತ್ಮಕ ಉನ್ನತಿಯನ್ನು ಒಳಗೊಂಡಿತ್ತಾದರೆ, ನಾವು ಕಳೆದ ಕೆಲವು ವರ್ಷಗಳಲ್ಲಿ ಕಂಡದ್ದನ್ನು ಎರಡನೆ ಪ್ರಜಾಸತ್ತಾತ್ಮಕ ಉನ್ನತಿಯೆಂದು ವರ್ಣಿಸಬಹುದು.

ಈ ಅವಧಿಯಲ್ಲಿನ ಗಮನಾರ್ಹವಾದ ರಾಜಕೀಯ ಬೆಳವಣಿಗೆಯೆಂದರೆ, ಬಿಜೆಪಿಯು ನಾಟಕೀಯವಾಗಿ ಅಧಿಕಾರಕ್ಕೆ ಬಂದುದು. ಅದರ ಮರುಹುಟ್ಟಿನ ನಂತರ ಪಕ್ಷವು ತಾನು ಎದುರಿಸಿದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆಗೆ 1984ರಲ್ಲಿ ಕೇವಲ ಇಬ್ಬರು ಸಂಸದರನ್ನು ಮಾತ್ರ ಕಳುಹಿಸಲು ಸಾಧ್ಯವಾಯಿತು. 1989ರ ಮುಂದಿನ ಚುನಾವಣೆಯಲ್ಲಿ ಹೊಸದಾಗಿ ರೂಪಿತವಾದ ಜನತಾದಳದ (JD) ಯಶಸ್ಸಿನ ಬೆನ್ನ ಮೇಲೆ ಸವಾರಿ ಮಾಡುವ ಮೂಲಕ ಬಿಜೆಪಿ ಸದಸ್ಯರ ಸಂಖ್ಯೆಯು 80ಕ್ಕೆ ಹೆಚ್ಚಿತು. ಜನತಾದಳದ ಜೊತೆಗಿನ ಮುರಿದುಬಿದ್ದ ಮೈತ್ರಿ ಬಿಜೆಪಿಗೆ ಸಹಕಾರಿಯಾಯಿತು. ಮಂಡಲ್ ಮತ್ತು ಮಂದಿರದ ಹಿನ್ನಲೆಯಲ್ಲಿ 1991ರ ಚುನಾವಣೆಯಲ್ಲಿ ಅದರ ಸಂಸದರ ಸಂಖ್ಯೆ 121ಕ್ಕೆ ಏರಿಕೆಯಾಯಿತು. 1996ರಲ್ಲಿ ನಡೆದ ಮುಂದಿನ ಚುನಾವಣೆಯಲ್ಲಿ ಲೋಕಸಭೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಸಿಗದೇ ಬಿಜೆಪಿಯು 160 ಸಂಸದರೊಂದಿಗೆ ಏಕೈಕ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸರ್ಕಾರ ರಚಿಸುವಂತೆ ರಾಷ್ಟ್ರಪತಿಯವರು ನೀಡಿದ ಆಹ್ವಾನವನ್ನು ಪಕ್ಷವು ಒಪ್ಪಿಕೊಂಡಿತಾದರೂ 13 ದಿನಗಳಿಗಿಂತ ಹೆಚ್ಚುಕಾಲ ಈ ಪ್ರಯೋಗವನ್ನು ಕಾಪಾಡಿಕೊಳ್ಳಲಾಗಲಿಲ್ಲ; ಯುನೈಟೆಡ್

ಫ್ರಂಟ್ (UF), ಕಾಂಗ್ರೆಸ್‌ನ ಬಾಹ್ಯ ಬೆಂಬಲದೊಂದಿಗೆ ಸರ್ಕಾರವನ್ನು ರಚಿಸಿ 18 ತಿಂಗಳ ಕಾಲ ಅಧಿಕಾರ ನಡೆಸಿತು. ಬಿಜೆಪಿಯ ದೀರ್ಘ ಕಾಯುವಿಕೆಯು 1998ರ ಮಧ್ಯಂತರ ಚುನಾವಣೆಯಲ್ಲಿ ಕೊನೆಗೊಂಡಿತು. ಅದರ ಬಲ 180ಕ್ಕೇರಿತಲ್ಲದೆ,, ತನ್ನೆಲ್ಲಾ ಪ್ರಾದೇಶಿಕ ಮಿತ್ರ ಪಕ್ಷಗಳೂ ಸೇರಿ ಆ ಸಂಖ್ಯೆಯು 250ನ್ನು ದಾಟಿತು.

ಬಿಜೆಪಿಯು ಅಧಿಕಾರಕ್ಕೆ ಬಂದಿತಾದರೂ, ಅದು ಈಗಲೂ ಜನಾದೇಶವನ್ನು ಜಯಿಸಲಾಗಲಿಲ್ಲ. ಅದು 1998ರ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತ ಸ್ವಲ್ಪ ಕಡಿಮೆ, ಶೇಕಡ 25ರಷ್ಟು ಜನರ ಮತಗಳನ್ನು ಪಡೆಯುವ ಮೂಲಕ ತಾಂತ್ರಿಕವಾಗಿ ಎರಡನೇ ಅತ್ಯಂತ ದೊಡ್ಡ ಪಕ್ಷವಾಗಿತ್ತು. ಬಹಳ ಮುಖ್ಯವಾಗಿ, ಬಿಜೆಪಿಯು ಅಧಿಕಾರಕ್ಕೇರುವ ಪ್ರಯತ್ನಕ್ಕೆ ಐತಿಹಾಸಿಕವಾಗಿ ತಡೆಯನ್ನುಂಟುಮಾಡುತ್ತಿದ್ದ ಮೂರು ಅಡೆತಡೆಗಳನ್ನು ಅದು ಸಂಪೂರ್ಣವಾಗಿ ಮೆಟ್ಟಿ ನಿಲ್ಲಬೇಕಾಗಿತ್ತು. ಉತ್ತರ ಮತ್ತು ಪಶ್ಚಿಮದ ದಿಕ್ಕುಗಳಿಂದಾಚೆಗೆ ಹೋಗಲಾಗದ ಭೌಗೋಳಿಕ ಅಡೆತಡೆಯ ನಿವಾರಣೆಯನ್ನು ಅದು ಪ್ರಾರಂಭಿಸಿದೆ. ಆದರೆ ಅದು ದಕ್ಷಿಣ ಮತ್ತು ಪೂರ್ವದಲ್ಲಿ ಹೊಸದಾಗಿ ಪಡೆದ ಮತಗಳು, ತನ್ನ ಮಿತ್ರ ಪಕ್ಷಗಳಾದ ತಮಿಳುನಾಡಿನ ಎಐಡಿಎಂಕೆ (AIADMK), ಒರಿಸ್ಸಾದ ಬಿಜು ಜನತಾದಳ (BJD) ಮತ್ತು ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್‌ನಿಂದ ಪಡೆದ ಸಾಲವೆನಿಸಿದೆ. ಮುಖ್ಯವಾಹಿನಿಯಿಂದ ಪ್ರತ್ಯೇಕವಾಗಿರುವ ಸೈದ್ಧಾಂತಿಕ ಅಡೆತಡೆಯನ್ನು ಸಹ ಭಾಗಶಃ ಗೆಲ್ಲಲು ಸಾಧ್ಯವಾಗಿದೆ. ಸಮತಾ ಪಕ್ಷದಂತಹ ಮಿತ್ರ ಪಕ್ಷಗಳಿಂದಾಗಿ ಹಾಗೂ ಕಳೆದ ದಶಕದಲ್ಲಿನ ಮಧ್ಯಮ ನಿಲುವು ಬಿಜೆಪಿಯ ಪರವಾಗಿ ಸ್ಥಾನಪಲ್ಲಟವಾದುದರಿಂದಾಗಿ ಇದು ಸಾಧ್ಯವಾಯಿತು. ಇನ್ನೂ ದಾಟಲಾಗದಿರುವ ಅತ್ಯಂತ ಪ್ರಮುಖ ಅಡೆತಡೆ ಎಂದರೆ ಅದು ಸಾಮಾಜಿಕ ಅಡೆತಡೆ. ಸಾಮಾಜಿಕವಾಗಿ ಸವಲುತ್ತುಳ್ಳವರ ಪಕ್ಷವೆಂಬ ಅದರ ಚಿತ್ರಣವನ್ನು ಬದಲಿಸಲು ಬಿಜೆಪಿಯಿಂದ ಸಾಧ್ಯವಾಗಿಲ್ಲ. 1998ರ ರಾಷ್ಟ್ರೀಯ ಚುನಾವಣಾ ಅಧ್ಯಯನದ ಫಲಿತಗಳ ಪ್ರಕಾರ ಬಿಜೆಪಿಗೆ ಸಿಗುತ್ತಿರುವ ಬೆಂಬಲ ಮೊದಲಿಗಿಂತ ವಿಸ್ತೃತಗೊಂಡಿದೆಯಾದರೂ, ಈ ಹಿಂದೆ ಕಾಂಗ್ರೆಸ್ ಹೊಂದಿದ್ದಂತಹ ವ್ಯಾಪಕ ಬೆಂಬಲವನ್ನು ಪಡೆಯಲು ಇನ್ನೂ ಸಾಕಷ್ಟು ದೂರ ಕ್ರಮಿಸಬೇಕಿದೆ. ಹಿಂದೂ ಮೇಲ್ಜಾತಿ ಮತ್ತು ನಗರ 'ಮಧ್ಯಮ ವರ್ಗ'ದವರ ಅಚ್ಚುಮೆಚ್ಚಿನ ಪಕ್ಷವಾಗಿ ಬಿಜೆಪಿ ಮುಂದುವರೆಯುತ್ತಿದೆ. ಇತರೆ ಹಿಂದುಳಿದ ವರ್ಗದವರಿಂದ ಅದು ಗಣನೀಯ ಮತಗಳನ್ನು ಪಡೆಯಲು ಸಹ ಸಾಧ್ಯವಾಗಿದೆಯಾದರೂ ದಲಿತರು ಮತ್ತು ಆದಿವಾಸಿಗಳ ಮತಗಳನ್ನು ಗಳಿಸುವಲ್ಲಿ ಅದು ಈಗಲೂ ಹಿಂದೆ ಉಳಿದಿದೆ. ಈ ವಿಷಯದಲ್ಲಿನ ಸ್ವಲ್ಪಮಟ್ಟಿಗಿನ ಸುಧಾರಣೆಯ ಹೊರತಾಗಿಯೂ, ಅದು ಮುಸ್ಲಿಮರ ಮನಸ್ಸನ್ನು ಗೆಲ್ಲುವ ಕೆಲಸವನ್ನು ಇನ್ನೂ ಪ್ರಾರಂಭಿಸಿಯೇ ಇಲ್ಲ.

ಬಿಜೆಪಿಯು ಭಾರತೀಯ ರಾಜಕೀಯ ಸ್ವರೂಪದಲ್ಲಿ ಬದಲಾವಣೆಯನ್ನುಂಟುಮಾಡಿದೆ. ಬಿಜೆಪಿಯ ಮೇಲೆ ಭಾರತದ ರಾಜಕೀಯದ ಪರಿಣಾಮವೇನೂ ಕಡಿಮೆಯಲ್ಲ. ಅಧಿಕಾರಕ್ಕಾಗಿ ಮುಂದುವರಿದ ಮತ್ತು ಹಿಂದುಳಿದ ಜಾತಿಗಳ ನಡುವಿನ ಪೈಪೋಟಿಯು ಇತರೆ ಯಾವುದೇ ಪಕ್ಷದಂತೆ ಬಿಜೆಪಿಯಲ್ಲಿಯೂ ಅಷ್ಟೇ ತೀವ್ರವಾಗಿದೆ. ಪರಮಾಣು ಪರೀಕ್ಷೆಗೆ ಸಂಬಂಧಿಸಿದಂತೆ ಆಕ್ರಮಣಕಾರಿ ಮಾರ್ಗವನ್ನು ಅನುಸರಿಸುವಲ್ಲಿ ಬಿಜೆಪಿ ಯಶಸ್ವಿಯಾಯಿತು. ಆದರೆ ಕಳೆದ ಎರಡು ದಶಕಗಳಲ್ಲಿ ಪ್ರತಿಯೊಂದು ಪ್ರಮುಖ ರಾಜಕೀಯ ಪಕ್ಷವು ಈ ನಿಲುವನ್ನು ಸಮರ್ಥಿಸಿದ್ದರಿಂದಾಗಿ ಬಿಜೆಪಿಗೆ ಸೈದ್ಧಾಂತಿಕ ಬೆಂಬಲವು ದೊರೆತಂತಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕು. ಆಡಳಿತಕ್ಕಾಗಿ ರಾಷ್ಟ್ರೀಯ ಕಾರ್ಯಸೂಚಿಯೊಂದನ್ನು ರೂಪಿಸುವಾಗ ಬಿಜೆಪಿಯು ಅದರ ಪ್ರಾದೇಶಿಕ ಮಿತ್ರ ಪಕ್ಷಗಳ ಇಚ್ಛೆಯನ್ನು ಮನ್ನಿಸಿ, ತನ್ನ ಸಾಂಸ್ಕೃತಿಕ ಏಕೀಕರಣದ ಆಕ್ರಮಣಕಾರಿ ಕಾರ್ಯಸೂಚಿಯ ವಿವಿಧ ಅಂಶಗಳನ್ನು ಬಿಟ್ಟುಕೊಡಬೇಕಾಯಿತೆಂಬ ವಾಸ್ತವದಿಂದ ನಮ್ಮ ಗಮನವನ್ನು ಈ ಬಾಂಬ್, ಬೇರೆಡೆಗೆ ಸೆಳೆಯಬಾರದು. ಅದು ಅಯೋಧ್ಯೆಯಲ್ಲಿ ರಾಮಮಂದಿರವನ್ನು ನಿರ್ಮಿಸುವ, ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿರುವುದನ್ನು ಹಿಂಪಡೆಯುವ ಮತ್ತು ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವ ತನ್ನ ಬೇಡಿಕೆಯನ್ನು ಬಿಟ್ಟುಕೊಡಬೇಕಾಯಿತು.

ಬಿಜೆಪಿಯ ಏಳಿಗೆಯನ್ನು ಪಕ್ಷ ರಾಜಕೀಯ ಕಾರ್ಯಕ್ಷೇತ್ರದ ವಿಸ್ತೃತ ಪುನಾರಚನೆಯ ಒಂದು ಭಾಗವೆಂಬಂತೆ ನೋಡಬೇಕಾಗುತ್ತದೆ. ಭಾರತದ ಸಂದರ್ಭದಲ್ಲಿ ಯಾವುದೇ ಸ್ಥಿರವಾದ ಚುನಾವಣಾ ಮರುಹೊಂದಾಣಿಕೆಯೆಂಬುದು

ಇರಲಿಲ್ಲವಾದರೂ 1989ರಿಂದ 1998ರವರೆಗಿನ ಚುನಾವಣೆಗಳು ತಂದ ಬದಲಾವಣೆಗಳು ಅನೇಕ ಒಂದೇ ರೀತಿಯ ಲಕ್ಷಣಗಳನ್ನು ಬಿಂಬಿಸುತ್ತವೆ. ಈ ಚುನಾವಣೆಗಳು ಹಂತಹಂತವಾಗಿ ಏಕಪಕ್ಷ ಪ್ರಾಧಾನ್ಯತೆಯನ್ನು ಕೊನೆಗಾಣಿಸಿದವು. ರಾಷ್ಟ್ರಮಟ್ಟದಲ್ಲಿ ಭಾರತವು ಬಹು-ಪಕ್ಷ ವ್ಯವಸ್ಥೆಯ ಕಡೆಗೆ ಚಲಿಸುತ್ತಿರುವಂತೆ ಕಾಣುತ್ತದೆ. 1984ರಿಂದೀಚೆಗಿನ ಪ್ರತಿ ಚುನಾವಣೆಯಲ್ಲಿ ಕಾಂಗ್ರೆಸ್ ಜನತೆಯ ಮತಗಳನ್ನು ಕಳೆದುಕೊಳ್ಳುತ್ತಿದ್ದು, ಅನೇಕ ಪಕ್ಷಗಳ ಪೈಕಿ ಈಗ ಅದೂ ಒಂದು ಪಕ್ಷವಾಗಿಯಷ್ಟೇ ಉಳಿದುಕೊಂಡಿದೆ. ಕಾಂಗ್ರೆಸ್‌ನ ಅವನತಿ ಅಥವಾ ಕಾಂಗ್ರೆಸ್ ನಂತರದ ರಾಜಕೀಯದೆಡೆಗಿನ ಚಲನೆಯು ರಾಜಕೀಯ ಒಡಕುಗಳು ಮತ್ತು ರಾಜಕೀಯ ನಿಷ್ಠೆಗಳ ನಡುವಿನ ಹೊಸದೊಂದು ಸಂಬಂಧಕ್ಕೆ ನಾಂದಿಯಾಗಿದೆ. ಮೊದಲ ಎರಡು ಹಂತಗಳಲ್ಲಿ ಕಾಂಗ್ರೆಸ್ ಪ್ರಾಬಲ್ಯವು ಸಾಮಾಜಿಕ ಸಮುದಾಯಗಳ ಕಾಮನಬಿಲ್ಲು ಒಕ್ಕೂಟದ [ಸೈದ್ಧಾಂತಿಕವಾಗಿ ವಿಭಿನ್ನವಾಗಿರುವ ರಾಜಕೀಯ ಪಕ್ಷಗಳ ಒಕ್ಕೂಟ (Rainbow Coalition)] ಲಕ್ಷಣಗಳನ್ನು ಒಳಗೊಂಡಿದ್ದರೆ, ಕಾಂಗ್ರೆಸ್‌ನ ಅವನತಿಯು ಈ ಕಾಮನಬಿಲ್ಲಿನಿಂದ ವಿವಿಧ ತುಣುಕುಗಳು ಹೊರಬರುತ್ತಿರುವ ಅರ್ಥವನ್ನು ಬಿಂಬಿಸುತ್ತಿತ್ತು. ಕಾಂಗ್ರೆಸ್, ಕುಗ್ಗುತ್ತಿರುವ ಆದರೆ ಹೆಚ್ಚು ಕಡಿಮೆ ಸಮನಾಗಿ ಹರಡಿರುವ ಕಾಮನಬಿಲ್ಲಿನಂತಿದ್ದರೆ ಅದರ ಎಲ್ಲಾ ಪ್ರಮುಖ ಸ್ಪರ್ಧಿಗಳ ಸಾಮಾಜಿಕ ಬೆಂಬಲವು ಓರೆಯಾಗಿರುವಂತಿದೆ. ಪ್ರತಿಯೊಬ್ಬರೂ ಹಳೆಯ ಕಾಮನಬಿಲ್ಲಿನ ಒಂದು ತುಣುಕಿನೊಂದಿಗೆ ಓಡಿಹೋಗುತ್ತಿರುವರೋ ಎಂಬಂತಿದೆ. ಕಾಂಗ್ರೆಸ್ ಸಹ ದೇಶದ ಎಲ್ಲಾ ಪ್ರದೇಶಗಳಲ್ಲಿ ಒಂದೇ ರೀತಿಯ ಸಾಮಾಜಿಕ ಲಕ್ಷಣವನ್ನು ಹೊಂದಿಲ್ಲ. ಎಲ್ಲೆಲ್ಲಿ ಕಾಂಗ್ರೆಸ್ ಬಿಜೆಪಿಯ ಪ್ರತಿಸ್ಪರ್ಧಿಯಾಗಿದೆಯೋ ಅಲ್ಲೆಲ್ಲಾ ಅದು ಸಮಾಜದ ಕೆಳವರ್ಗದವರ ಪಕ್ಷವಾಗಿದೆ. ಆದರೆ ಕಮ್ಯುನಿಸ್ಟ್ ಪಕ್ಷದವರ ಪ್ರತಿಸ್ಪರ್ಧಿಯಾಗಿರುವ ಪಶ್ಚಿಮ ಬಂಗಾಳ ಮತ್ತು ಕೇರಳದಂತಹ ರಾಜ್ಯಗಳಲ್ಲಿ ಅದು ಉಳ್ಳವರ ಪಕ್ಷವಾಗಿದೆ. ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ, ರಾಜಕೀಯ ಪಕ್ಷಗಳು ಸಮುದಾಯಗಳ ಜೊತೆ ಬೃಹತ್ ಪ್ರಮಾಣದ ಅಸ್ಮಿತೆಯನ್ನು ಬೆಳೆಸಿಕೊಳ್ಳುತ್ತಿವೆ. ರಾಜಕೀಯ ಗಣ್ಯರ ಸಾಮಾಜಿಕ ಆಧಾರದ ವಿಸ್ತರಣೆಯನ್ನು ಇದು ಒಳಗೊಂಡಿದೆ. ಹಿಂದುಳಿದ ವರ್ಗದವರಿಗೆ ರಾಜಕೀಯ ಅಧಿಕಾರದ ವರ್ಗಾವಣೆಯು ಸಾಕಷ್ಟು ವಿಳಂಬವಾಗಿದ್ದು, ಉತ್ತರ ಭಾರತದಲ್ಲಿ ಅದರ ಚಾಲನೆಯು ಪ್ರಾರಂಭವಾಗಿದೆ.

ಈ ರಾಷ್ಟ್ರೀಯ ಚಿತ್ರಣವು 1990ರ ದಶಕದಲ್ಲಿ ಹೊರಹೊಮ್ಮುತ್ತಿದ್ದ ರಾಜಕೀಯ ವಾಸ್ತವಿಕತೆಯ ಪ್ರಮುಖವೆನಿಸಬಹುದಾದ ಅಂಶದ ಬಗ್ಗೆ ಹೆಚ್ಚೇನೂ ಹೇಳುವುದಿಲ್ಲ. ರಾಜ್ಯ ರಾಜಕೀಯ ಕಣದಿಂದ ರಾಷ್ಟ್ರ ರಾಜಕೀಯ ಕಣದ ಬೇರ್ಪಡಿಸುವಿಕೆಯು ಈ ಪ್ರಮುಖವಾದ ಅಂಶವೆನಿಸಿದೆ. 1970 ಮತ್ತು 1980ರ ದಶಕದಾದ್ಯಂತ ರಾಜ್ಯ ರಾಜಕೀಯ ಕಣವು ಅನೇಕ ಸಂದರ್ಭಗಳಲ್ಲಿ ರಾಷ್ಟ್ರಮಟ್ಟದ ಬೆಳವಣಿಗೆಗಳ ಪ್ರತಿಫಲನವಾಗಿತ್ತಷ್ಟೆ. ತಮ್ಮ ಪ್ರಧಾನಮಂತ್ರಿಯನ್ನು ಆಯ್ಕೆಮಾಡುತ್ತಿದ್ದಾರೆಯೋ ಎನ್ನುವ ರೀತಿಯಲ್ಲಿ ನಾಗರಿಕರು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಮತವನ್ನು ಚಲಾಯಿಸಿದರು. ಈಗ ಈ ತರ್ಕ ಹೆಚ್ಚೂ ಕಡಿಮೆ ತಿರುಗುಮುರುಗಾಗಿದೆ. ರಾಜ್ಯ ರಾಜಕೀಯ ಕಣವು ರಾಷ್ಟ್ರೀಯ ಬೆಳವಣಿಗೆಗಳ ಪ್ರಭಾವದಿಂದ ಮುಕ್ತವಾಗಿರುವುದಷ್ಟೇ ಅಲ್ಲದೆ, ರಾಷ್ಟ್ರೀಯ ಚುನಾವಣೆಯಲ್ಲಿ ಜನರು ತಮ್ಮ ಮುಖ್ಯಮಂತ್ರಿಯನ್ನು ಆಯ್ಕೆಮಾಡಿಕೊಳ್ಳುತ್ತಿದ್ದಾರೆಯೋ ಎಂಬಂತೆ ಮತವನ್ನು ಚಲಾಯಿಸುತ್ತಿದ್ದಾರೆ. ರಾಜಕೀಯ ನಿರ್ಧಾರ ಕೈಗೊಳ್ಳುವಿಕೆಯ ಪರಿಣಾಮಕಾರಿ ಹಂತವಾಗಿ ರಾಜ್ಯ ಅಥವಾ ಪ್ರದೇಶದ ಉಗಮವು, ಪಕ್ಷ ವ್ಯವಸ್ಥೆಯನ್ನು ಮಾರ್ಪಾಡುಗೊಳಿಸಿದೆ. ರಾಷ್ಟ್ರೀಯ ಚಿತ್ರಣವು, ಬಹು-ಪಕ್ಷವು ಅಸ್ತಿತ್ವದಲ್ಲಿರುವಂತೆ ಕಂಡುಬರುತ್ತದೆಯಾದರೂ, ರಾಜ್ಯಗಳ ಹಂತವನ್ನು ಗಮನಿಸಿದಾಗ, ದ್ವಿ-ಪಕ್ಷ ವ್ಯವಸ್ಥೆಯ ಪರಿಣಾಮಕಾರಿ ಉಗಮವು ಗೋಚರಿಸುತ್ತದೆ. ಉಗಮಗೊಳ್ಳುತ್ತಿರುವ ಪಕ್ಷ ವ್ಯವಸ್ಥೆಗೆ, ಅನೇಕ ದ್ವಿ-ಧ್ರುವೀಯತೆಯ (by-polarity) ವ್ಯವಸ್ಥೆಯೆಂಬ ಉತ್ತಮ ವಿವರಣೆಯನ್ನು ನೀಡಲಾಗಿದೆ. ಪ್ರಾಯೋಗಿಕವಾಗಿ, ಪ್ರತಿ ರಾಷ್ಟ್ರವು ದ್ವಿ-ಧ್ರುವೀಯ ರಾಜಕೀಯ ಸ್ಪರ್ಧೆಯತ್ತ ಚಲಿಸುತ್ತಿದೆ. ಆದರೆ ಜೋಡಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದ್ದು, ಬಹು-ಪಕ್ಷ ವ್ಯವಸ್ಥೆಯ ಅನಿಸಿಕೆಯನ್ನು ಮೂಡಿಸುತ್ತಿವೆ.

ಪ್ರಜಾಪ್ರಭುತ್ವ ರಾಜಕೀಯದ ಈ ಇತ್ತೀಚಿನ ಹಂತವನ್ನು ಕುರಿತಂತೆ ಹೊರಹೊಮ್ಮುತ್ತಿರುವ ಚಿತ್ರಣವನ್ನು ಸುತ್ತುವರಿದಿರುವ ಮಂಜು ತಿಳಿಯಾಗುವುದಕ್ಕೆ ಸ್ವಲ್ಪ ಸಮಯವು ಅವಶ್ಯ. ಇನ್ನೊಂದು ಚುನಾವಣೆ ಅಥವಾ ಚುನಾವಣೆಗಳ (ಬಹುಶಃ) ನಂತರವಷ್ಟೇ ಒಂದು ಸ್ಪಷ್ಟ ಚಿತ್ರಣ ಸಿಗಬಹುದು. ಬಿಜೆಪಿಯ ಪ್ರಸ್ತುತ ಮೈತ್ರಿಯ ಸಮಸ್ಯೆಗಳೇನಾದರೂ

ಕಡಿಮೆಯಾಗದೆ ಮುಂದುವರಿದಲ್ಲಿ ಅದು ಬಹಳ ಬೇಗ ಬಲವಂತವಾಗಿ ಮುಂದಿನ ಚುನಾವಣೆಗೆ ತೆರಳಬೇಕಾಗಬಹುದು. ಆದರೆ ಒಂದು ಪ್ರವೃತ್ತಿಯು ಈಗಾಗಲೇ ಗಮನಾರ್ಹವಾಗಿ ಕಂಡುಬರುತ್ತದೆ. ಹಿಂತಿರುಗಿ ನೋಡಿದಾಗ ಈ ಹಂತದ ಒಂದು ವಿವರಣಾತ್ಮಕ ಲಕ್ಷಣವಾಗಿ ಇದು ನಮಗೆ ವೇದ್ಯವಾಗುತ್ತದೆ. ಆರ್ಥಿಕ ಜಾಗತೀಕರಣದ ನಿರ್ಬಂಧಗಳು ಮತ್ತು ಜನಾಂಗೀಯ ಬಿರುಕುಗಳ ಗತಿವೃದ್ಧಿಯು (sharpening) ಖಂಡಿತವಾಗಿಯೂ ರಾಜಕೀಯದ ಸ್ವಾಯತ್ತತೆಯನ್ನು ಶಿಥಿಲಗೊಳಿಸಿವೆ. ಈ ಪ್ರಕ್ರಿಯೆಯು ಆರ್ಥಿಕ ಉದಾರೀಕರಣಕ್ಕೆ ಸಂಬಂಧಿಸಿದ ವಿಷಯದಲ್ಲಿ ಸುಸ್ಪಷ್ಟವಾಗಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಅಥವಾ ಪ್ರಚಾರದಲ್ಲಿ ಆರ್ಥಿಕ ನೀತಿಯ ಬಗ್ಗೆ ಏನನ್ನೂ ಹೇಳದೇ ಅಥವಾ ಇದನ್ನು ಜಾರಿಗೊಳಿಸುವುದಕ್ಕಿಂತ ಮುಂಚೆ ಅಥವಾ ನಂತರದ ಯಾವುದೇ ಜನ ಬೆಂಬಲದ ಕುರುಹಿಲ್ಲದೆ ಆರ್ಥಿಕ ನೀತಿಗೆ ಬೆನ್ನು ತೋರಿಸಿ ಈಗ ಏಳು ವರ್ಷಗಳು ಸಂದಿವೆ. ಅಲ್ಲಿಂದೀಚೆಗೆ ಭಾರತವು ಎರಡು ಸಾರ್ವತ್ರಿಕ ಚುನಾವಣೆಗಳು ಮತ್ತು ಮೂರು ಪ್ರಧಾನ ಮಂತ್ರಿಗಳನ್ನು ಕಂಡಿದೆ. ಆದರೆ ಈ ಹೊಸ ನೀತಿಗಳ ಬಗ್ಗೆ ಯಾವುದೇ ಗಂಭೀರ ರಾಜಕೀಯ ಚರ್ಚೆಗಳು ನಡೆದಿಲ್ಲ. ವಿಶ್ವ ಬ್ಯಾಂಕಿನಿಂದ ತರಬೇತಿ ಪಡೆದಿರುವ ಅದೇ ಅಧಿಕಾರಿಗಳ ಗುಂಪು, ಬಾಹ್ಯದಲ್ಲಿ ಅದು ಉತ್ತಮವಾಗಿ ಕಾಣುವಂತೆ ಮಾಡುವ ಕೆಲವು ಬದಲಾವಣೆಗಳು ಅಥವಾ ಕೆಲವೊಮ್ಮೆ ರಾಜಕೀಯ ಆಡಳಿತಗಾರರ ಹಸ್ತಕ್ಷೇಪದೊಂದಿಗೆ ಎಲ್ಲಾ ಪ್ರಮುಖ ಅಧಿಕಾರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ದೀರ್ಘಾವಧಿಯಲ್ಲಿ ಇದು ಖಂಡಿತ ಪ್ರಜಾಪ್ರಭುತ್ವದ ಗುಣಮಟ್ಟದ ಮೇಲೆ ಪರಿಣಾಮ ಬೀರಲಿದೆ. ಎರಡನೆ ಪ್ರಜಾಸತ್ತಾತ್ಮಕ ಅಭ್ಯುತ್ಥಾನವು (upsurge) ಇಲ್ಲಿಯವರೆಗೆ ಅಧಿಕಾರ ವಂಚಿತರಾದವರನ್ನು ರಾಜ್ಯಾಧಿಕಾರದ ಸ್ಥಾನಗಳಿಗೆ ತಂದಿರುವ ಈ ಸಂದರ್ಭದಲ್ಲಿ, ರಾಜ್ಯಾಧಿಕಾರದಿಂದ ತಾವು ಹೆಚ್ಚಿನದೇನನ್ನೂ ಸಾಧಿಸಲಾಗದ ಕಾರಣ, ಇತಿಹಾಸವು ನಮ್ಮನ್ನು ಮತ್ತೊಮ್ಮೆ ವಂಚಿಸಿದೆಯೆಂಬುದನ್ನು ಬಹುಶಃ ಆ ಅಧಿಕಾರ ವಂಚಿತರು ಅರಿತುಕೊಳ್ಳಬಹುದು. ಪ್ರಜಾಪ್ರಭುತ್ವದ ಕಲ್ಪನೆಯ ಯಾತ್ರೆಯ ಕತೆಯಲ್ಲಿ ಇದು ಬಹುಶಃ ಅತ್ಯಂತ ಆಳವಾದ ವಿಪರ್ಯಾಸವಾಗಿದೆ.

## VII

ಈಗ ಈ ಕತೆಯನ್ನು ಇಲ್ಲಿಗೇ ಬಿಟ್ಟು, ಕಳೆದ ಐವತ್ತು ವರ್ಷಗಳ ಪ್ರಜಾಪ್ರಭುತ್ವ ರಾಜಕಾರಣದ ಕಾರ್ಯಶೀಲತೆಯನ್ನು ಪರಿಶೋಧಿಸುತ್ತೇನೆ. ಇಲ್ಲಿ ನಾವು ಎರಡು ವಿಭಿನ್ನ ಪ್ರಶ್ನೆಗಳ ನಡುವೆ ವ್ಯತ್ಯಾಸವನ್ನು ಗುರುತಿಸಬೇಕು: ಭಾರತವು ಪ್ರಜಾಪ್ರಭುತ್ವವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಿದೆಯೇ? ಮತ್ತು, ಭಾರತದ ಪ್ರಜಾಪ್ರಭುತ್ವವು ತನ್ನ ಗುರಿಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆಯೇ? ಮೊದಲನೆ ಪ್ರಶ್ನೆ ಪ್ರಜಾಪ್ರಭುತ್ವ ಎಂದರೇನು ಎಂಬುದನ್ನು ಕುರಿತಾದರೆ, ಎರಡನೆ ಪ್ರಶ್ನೆ ಪ್ರಜಾಪ್ರಭುತ್ವ ಏನು ಮಾಡುತ್ತದೆ ಅಥವಾ ಏನು ಮಾಡುತ್ತದೆಂಬುದನ್ನು ನಿರೀಕ್ಷಿಸಬಹುದು ಎಂಬುದಕ್ಕೆ ಸಂಬಂಧಿಸಿದೆ.

ಮೊದಲನೆ ಪ್ರಶ್ನೆಯು ಹೆಚ್ಚು ಹರ್ಷದಾಯಕವಾದ ಉತ್ತರಕ್ಕೆ ಅವಕಾಶವೀಯುತ್ತದೆ. ಏಕೆಂದರೆ ಈ ಪ್ರಶ್ನೆಯು ಬಹುತೇಕ ವಸಾಹತೋತ್ತರ ರಾಜ್ಯಾಡಳಿತ ವ್ಯವಸ್ಥೆಯ ದುಃಖಭರಿತ ದಾಖಲೆಗಳನ್ನು ನೆನಪಿಸುತ್ತದೆ. ಕಾರ್ಯವಿಧಾನ ಸಂಬಂಧಿತ (procedural) ಪ್ರಜಾಪ್ರಭುತ್ವದ ಆಧಾರ-ರೇಖೆಯ ವ್ಯಾಖ್ಯೆಗಳ ನಿಟ್ಟಿನಲ್ಲಿ ನಾವು ಗಮನಿಸಿದಾಗ, ಭಾರತವು ಈಗ ಮತ್ತು ಭವಿಷ್ಯತ್ತಿನಲ್ಲಿ ಪ್ರಜಾಪ್ರಭುತ್ವವಾಗಿ ಉಳಿಯುವ ಸಾಧ್ಯತೆಯಿದೆ. ಅಂದರೆ, ಪ್ರಜಾಪ್ರಭುತ್ವ ವ್ಯವಸ್ಥೆ ಮಾತ್ರವೇ ಭಾರತಕ್ಕೆ ಸರಿಹೊಂದುವಂತಿದೆ. ತುಲನಾತ್ಮಕ ಪ್ರಜಾಪ್ರಭುತ್ವೀಕರಣದ ವಿದ್ಯಾರ್ಥಿಗಳು, ಇದು ಅಲ್ಪ ಸಾಧನೆಯಲ್ಲವೆಂಬುದನ್ನು ನಮಗೆ ನೆನಪಿಸುವುದನ್ನೆಂದಿಗೂ ಮರೆಯುವುದಿಲ್ಲ. ಈ ವ್ಯವಸ್ಥೆಯ ಅತ್ಯಂತ ಕಟು ವಿಮರ್ಶಕರನ್ನೊಳಗೊಂಡಂತೆ, ಭಾರತದ ರಾಜಕೀಯ ವಿಸ್ತರಣದಾದ್ಯಂತ ಇದನ್ನು ಗುರುತಿಸಲಾಗಿದೆ. ಕೆಲವು ವರ್ಷಗಳ ಹಿಂದೆ, ಅನೇಕ ವರ್ಷಗಳ ತಮ್ಮ ಭೂಗತ ಹಾಗೂ ಹಿಂಸಾತ್ಮಕ ವ್ಯವಸ್ಥೆ-ವಿರೋಧಿ ರಾಜಕೀಯದ ನಂತರ ಹೊರಬಂದು ಚುನಾವಣೆಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದ ಭಾರತದ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್-ಲೆನಿನಿಸ್ಟ್) ಅದಕ್ಕೆ ಅರಿವಿಲ್ಲದಂತೆಯೇ ಭಾರತೀಯ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಅಭಿನಂದನೆಯನ್ನು ಸಲ್ಲಿಸಿದೆ.

ಭಾರತವೊಂದು ಪ್ರಜಾಪ್ರಭುತ್ವ ಎಂಬ ಹೇಳಿಕೆ, ಭಾರತವು ಉಳಿಸಿಕೊಂಡ ಪ್ರಜಾಸತ್ತಾತ್ಮಕ ಆಡಳಿತದ ವಿಧ್ಯುಕ್ತ ಸಂವಿಧಾನಿಕ ಸಂರಚನೆಗಳನ್ನು ಕುರಿತ ಒಂದು ಹೇಳಿಕೆಯಲ್ಲ ಮತ್ತು ಅದನ್ನು ಕೇವಲ ಹೆಸರಿಗೆ ಮಾತ್ರ ಹೇಳುವಂತಹುದಲ್ಲ. ಬಹಳ ಮುಖ್ಯವಾಗಿ ಇದು ಭಾರತದಲ್ಲಿ ಪ್ರಜಾಪ್ರಭುತ್ವದ ಭಾಷೆಯ ಉಪಸ್ಥಿತಿಯನ್ನು ಕುರಿತಾದ ಹೇಳಿಕೆಯಾಗಿದೆ. ಶಿವ್ ವಿಶ್ವನಾಥನ್‌ರವರ ಅವಿಸ್ಮರಣೀಯ ನುಡಿಗಟ್ಟಿನ ಪ್ರಕಾರ, ಭಾರತವು "ಕಂಠಪಾಠ ಮಾಡಿದ" ಪ್ರಜಾಪ್ರಭುತ್ವವನ್ನು ಹೊಂದಿದೆ: ಭಾರತೀಯ ವೈಶಿಷ್ಟ್ಯತೆಯನ್ನು ಒಳಗೊಂಡ ಈ ಇಂಗ್ಲಿಷ್ ಅಭಿವ್ಯಕ್ತಿಯು ಭಾರತೀಯರು ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಹೇಗೆ ತಮ್ಮ ಭಾಷೆಗೆ ಒಳಪಡಿಸಿಕೊಂಡಿದ್ದಾರೆಂಬುದನ್ನು ಸೂಕ್ತವಾಗಿ ಗ್ರಹಿಸುತ್ತದೆ. ಪಾಶ್ಚಿಮಾತ್ಯರ ಪ್ರಜಾಪ್ರಭುತ್ವ ಕಲ್ಪನೆಯನ್ನು ನಮ್ಮದೇ ಎಂಬಂತೆ ನಾವು ಒಪ್ಪಿಕೊಂಡಿದ್ದೇವೆ ಮತ್ತು ನಮ್ಮ ಸ್ವಂತ ವಸ್ತುಗಳ ಬಗ್ಗೆ ನಾವು ಪರಿಗ್ರಹಿಸುವ (take) ಸ್ವಾತಂತ್ರ್ಯವನ್ನು ಈ ಪಾಶ್ಚಿಮಾತ್ಯ ಕಲ್ಪನೆಯ ಬಗ್ಗೆಯೂ ಪರಿಗ್ರಹಿಸಿದ್ದೇವೆ. ಇದರ ಫಲಸ್ವರೂಪವಾಗಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ಸ್ಥಳೀಯವಾಗಿಸುವುದರ ಜೊತೆಗೆ ಅದನ್ನು ನಮ್ಮ ವಾಡಿಕೆಯಾಗಿಸಿದ್ದೇವೆ. ಉದಾಹರಣೆಗೆ, ಚುನಾವಣೆಯೇ ಅಗತ್ಯವಿಲ್ಲದಿರುವಂತಹ ಪರಿಸ್ಥಿತಿಗಳಲ್ಲಿಯೂ ಸಹ ನಾವು ವಸ್ತುತಃ ಮಿತಿಯಿಲ್ಲದಂತೆ ನಡೆಸುವ ಚುನಾವಣೆಗಳ ಆವರ್ತನ: ವಿಶ್ವವಿದ್ಯಾನಿಲಯಗಳ ಶಿಕ್ಷಣ ಮಂಡಳಿಗಳಿಂದ, ಕಾಲೇಜುಗಳ ಆಡಳಿತ ಮಂಡಳಿಗಳವರೆಗೆ, ಸಹಕಾರಿ ಬ್ಯಾಂಕುಗಳ ಅಧ್ಯಕ್ಷ ಗಾದಿಯವರೆಗೆ, ಕ್ರೀಡಾ ಆಯ್ಕೆ ಸಮಿತಿಯವರೆಗೆ ಚುನಾವಣೆಗಳು ನಡೆಯುತ್ತವೆ. ಚುನಾವಣೆಯು ಸಾರ್ವಜನಿಕ ವಲಯದಾದ್ಯಂತ ಅಧಿಕಾರಕ್ಕಾಗಿ ಏರ್ಪಡುವ ಸ್ಪರ್ಧಾತ್ಮಕ ಹಕ್ಕುಸಾಧನೆಗಳನ್ನು ಬಗೆಹರಿಸುವ ಒಂದು ಪ್ರಧಾನ ವಿಧಾನವಾಗಿಬಿಟ್ಟಿದೆ. ಅಥವಾ ಪ್ರಮುಖ ವಿಷಯಗಳಿಂದ, ನಗಣ್ಯ ವಿಷಯಗಳವರೆಗಿನ ಪ್ರತಿಭಟನಾ ಸಂಸ್ಕೃತಿಯ ಸರ್ವವ್ಯಾಪಕತೆಯನ್ನೇ ಗಮನಿಸಿ: ಸಾಮೂಹಿಕ ಸಾರ್ವಜನಿಕ ಪ್ರತಿಭಟನೆಯು ಪ್ರಜಾಸತ್ತಾತ್ಮಕ ಹಕ್ಕುಗಳ ಕುರಿತ ನಂಬಿಕೆಯನ್ನು ಸದಾ ನೆನಪಿಸುವುದಾಗಿದೆ. ಅದರ ಭಾರತೀಯ ರೂಪಾಂತರದಲ್ಲಿ ಈ ಕಲ್ಪನೆಯು ಸಾಮಾನ್ಯ ಭಾರತೀಯರ ಪೌರತ್ವದ ಬಗೆಗಿನ ನಂಬಿಕೆಗಳು, ಅವರ ರಾಜಕೀಯ ಹಕ್ಕುಗಳು ಮತ್ತು ರಾಜಕೀಯ ಭಾಗವಹಿಸುವಿಕೆಯ ಗುಣಗಳನ್ನು ರೂಪಿಸುತ್ತಿದೆ. ಇವೆಲ್ಲವಕ್ಕಿಂತ ಮಿಗಿಲಾಗಿ, ಇದು ನ್ಯಾಯಯುತ ಆಡಳಿತದ ಹಕ್ಕುಸಾಧನೆಗಳು, ಮತ್ತು ಅದಕ್ಕನುಗುಣವಾದ ರಾಜಕೀಯ ಬಾಧ್ಯತೆಯ ನೈತಿಕ ತಳಹದಿಯ ಏಕೈಕ ಮಾನ್ಯ ಮಾನದಂಡವನ್ನು ಒದಗಿಸುತ್ತಿದೆ.

ಈ ಕಲ್ಪನೆಯು ರಾಜಕೀಯ ಪ್ರಕ್ರಿಯೆಗಳಲ್ಲಿ ಅಡಕವಾಗಿದೆ. ಈ ಪ್ರಕ್ರಿಯೆಗಳು ಸಮತೋಲನದ ನಿಟ್ಟಿನಲ್ಲಿ, ಇಲ್ಲಿಯವರೆಗೆ ಸ್ವಲ್ಪಮಟ್ಟಿನ ಚೈತನ್ಯವನ್ನು ಉಳಿಸಿಕೊಂಡಿವೆ. ಅಧಿಕ ಪ್ರಮಾಣದ ಭಾಗವಹಿಸುವಿಕೆ ಮತ್ತು ಹೆಚ್ಚಿನ ತೀವ್ರತೆಯುಳ್ಳ ರಾಜಕೀಯಕರಣದ ಕುರಿತಾದ ಮೂಲಭೂತ ಪ್ರವೃತ್ತಿಯು ಪ್ರಜಾಪ್ರಭುತ್ವದ ಕಲ್ಪನೆಯನ್ನು ಲಂಬವಾಗಿ ಮತ್ತು ಅಡ್ಡವಾಗಿ ವ್ಯಾಪಿಸುವಂತೆ ಮಾಡುತ್ತಿದೆ (ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯ ರಾಜ್ಯದ ಕೆಲವು ಭಾಗಗಳನ್ನು ಹೊರತುಪಡಿಸಿ). ಸ್ಪರ್ಧಾತ್ಮಕ ರಾಜಕೀಯವು ಇಲ್ಲಿಯವರೆಗೆ ರಾಜಕೀಯೇತರವೆನಿಸಿದ್ದ ವಿಭಾಗಗಳನ್ನು ಸೆಳೆಯುವ, ಬಿರುಕುಗಳನ್ನು ಜೋಡಿಸುವ ಮತ್ತು ಸೇತುವೆಗಳನ್ನು ನಿರ್ಮಿಸುವ ಚೈತನ್ಯಪೂರ್ಣ ಸಾಮರ್ಥ್ಯವನ್ನು ಉಳಿಸಿಕೊಂಡಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ ಬಿರುಕುಗಳೊಂದಿಗೆ ಸಂಬಂಧವನ್ನು ಸ್ಥಾಪಿಸಿ, ಅವುಗಳನ್ನು ಪರಿವರ್ತಿಸುವ ಅದರ ಸಾಮರ್ಥ್ಯವು ಕೃತಜ್ಞತೆಗೆ ಅರ್ಹವಾದುದು. ಪ್ರಜಾಪ್ರಭುತ್ವವು ಭಾರತೀಯ ಸಮಾಜದಲ್ಲಿ ಬೇರೂರಿದೆ.

ಪ್ರಜಾಪ್ರಭುತ್ವದ ಕಲ್ಪನೆಯು ಈಗ ಪ್ರಬಲ ಮತ್ತು ನಂಬಲರ್ಹ ವಾಹಕಗಳನ್ನು ಸಹ ಹೊಂದಿದೆ. ಬಹುತೇಕ ವಸಾಹತೋತ್ತರ ರಾಜ್ಯವ್ಯವಸ್ಥೆಗಳಿಗೆ ಹೋಲಿಸಿದರೆ ಭಾರತವು ರಾಜಕೀಯ ಗಣ್ಯರನ್ನು ನೇಮಕಾತಿ ಮಾಡಿಕೊಳ್ಳಬಹುದಾದ ವಿಶಾಲ ಆಯಕಟ್ಟಿನ ಪ್ರದೇಶವನ್ನು ಹೊಂದಿದೆ. ಒಂದು ಸರಿ-ಸುಮಾರಾದ ಅಂದಾಜಿನ ಪ್ರಕಾರ, ರಾಷ್ಟ್ರಮಟ್ಟದಿಂದ ಗ್ರಾಮಮಟ್ಟದವರೆಗೆ ಒಂದಿಲ್ಲೊಂದು ಹಂತದಲ್ಲಿ ಚುನಾಯಿತರಾದ ರಾಜಕೀಯ ಪಾತ್ರಧಾರಿಗಳ ಸಂಖ್ಯೆ ಮೂರು ದಶಲಕ್ಷಕ್ಕಿಂತಲೂ ಕಡಿಮೆಯೇನಿಲ್ಲ. ಇದರ ಪರಿಣಾಮವಾಗಿ, ರಾಜಕೀಯ ಪಾತ್ರಧಾರಿಗಳ ಒಂದು ದೊಡ್ಡ ಪಡೆಯೇ ಅಸ್ತಿತ್ವದಲ್ಲಿದೆ (ಪ್ರತಿನಿಧಿಗಳು, ಪ್ರತಿಸ್ಪರ್ಧಿಗಳು, ಭರವಸೆಯುಳ್ಳವರು, ನಾವೂ ಸ್ಪರ್ಧಿಸಿದ್ದೇವೆಂಬುವವರು ಸೇರಿ ಕನಿಷ್ಠ ಹತ್ತು

ದಶಲಕ್ಷ ಮಂದಿ ಇರಬಹುದು). ಇವರ ಸ್ವಯಂ ರಕ್ಷಣೆಯ ಸ್ವಭಾವವು ಪ್ರಜಾಪ್ರಭುತ್ವವನ್ನು ರಕ್ಷಿಸಲಿದೆಯೆಂದು ನಂಬಬಹುದಾಗಿದೆ. ಸ್ಪರ್ಧಾತ್ಮಕ ರಾಜಕೀಯದ ತರ್ಕವು ಸಾಂಪ್ರದಾಯಿಕ ಗಣ್ಯ ಸಮಾಜದಿಂದ ಬಂದವರೇ ಹೆಚ್ಚಿನ ಪಾಲನ್ನು ಅನುಭವಿಸುತ್ತಾರೆಂಬ ವಾಸ್ತವದ ಹೊರತಾಗಿಯೂ ಅವರಷ್ಟೇ ಅಲ್ಲದೆ ಇತರರೂ ಸಕ್ರಿಯವಾಗಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳುತ್ತದೆ. ರಾಜಕೀಯ ಪಕ್ಷಗಳ  ಸಕ್ರಿಯ ಸಾಮರ್ಥ್ಯ ಮತ್ತು ಔರಸತೆ/ಔಚಿತ್ಯ (legitimacy), ಕಳೆದ ಎರಡು ದಶಕಗಳಲ್ಲಿ ಕಡಿಮೆಯಾಗಿದ್ದಾಗ್ಯೂ, ಅವುಗಳ ಸಂಖ್ಯೆ ಅಧಿಕವಾಗಿದೆ (1998ರ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಿದ ನೋಂದಾಯಿತ ರಾಜಕೀಯ ಪಕ್ಷಗಳ ಸಂಖ್ಯೆ 166). ಪಕ್ಷ ಎಂಬುದು ಪಾಶ್ಚಿಮಾತ್ಯ ಆಮದಾಗಿ ಈಗ ಉಳಿದಿಲ್ಲ; ಅದು ಪ್ರತಿಯೊಂದು ಗ್ರಾಮೀಣ ಪ್ರದೇಶದೊಳಗೆ ಮಿಳಿತವಾಗಿದೆಯಲ್ಲದೆ, ಪ್ರತಿಯೊಂದು ಭಾರತೀಯ ಭಾಷೆಯಲ್ಲಿ ಯಥಾರ್ಥವಾಗಿ ತನ್ನ ಮಾರ್ಗವನ್ನು ಕಂಡುಕೊಂಡಿದೆ. ಕೊನೆಯದಾಗಿ ಆದರೆ ಬಹಳ ಮುಖ್ಯವಾಗಿ, ಚಳುವಳಿ ಗುಂಪುಗಳು, ಪಕ್ಷೇತರ ರಾಜಕೀಯ ಸಂಘಟನೆಗಳು ಮತ್ತು ಅನೇಕ ಸರ್ಕಾರೇತರ ಸಂಸ್ಥೆಗಳನ್ನೊಳಗೊಂಡಂತೆ ನಾಗರಿಕ ಸಮಾಜದ ಇತರೆ ಸಂಸ್ಥೆಗಳು, ಭಾರತದಲ್ಲಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ಆಳವಾಗಿ ಮೂಡಿಸಲು ಸಾಕಷ್ಟು ಕೆಲಸ ಮಾಡಿವೆ. ಸುಗಮ ಏಕತ್ರೀಕರಣಕ್ಕೆ ಎಡೆಗೊಡದ ಪರಿಸ್ಥಿತಿಗಳು, ಚುನಾವಣೆಯ ನಿಟ್ಟಿನಲ್ಲಿ ಕಾರ್ಯಸಾಧ್ಯವಲ್ಲದ ಗುಂಪುಗಳ ಬೇಡಿಕೆಗಳು ಹಾಗೂ ರಾಷ್ಟ್ರೀಯ ರಾಜಕೀಯ ಕಾರ್ಯಸೂಚಿಯಲ್ಲಿ ತಮ್ಮ ಗುರುತನ್ನು ಇನ್ನೂ ಮೂಡಿಸಲಾಗದ ವಿಷಯಗಳನ್ನು ಅವು ಕೈಗೆತ್ತಿಕೊಂಡಿವೆ. ಸ್ಪರ್ಧಾತ್ಮಕ ರಾಜಕೀಯದ ಆಡಳಿತ ವ್ಯವಸ್ಥೆಯು ಪ್ರಜಾಪ್ರಭುತ್ವದ ಚೈತನ್ಯವನ್ನು ಪೋಷಿಸಲು ವಿಫಲವಾದಾಗ ಈ ಚೈತನ್ಯವನ್ನು ಇವುಗಳು ಜೀವಂತವಾಗಿಟ್ಟಿವೆ.

ಪ್ರಜಾಪ್ರಭುತ್ವದ ತಕ್ಷಣದ ಅಥವಾ ಸನ್ನಿಹಿತ ಕುಸಿತದ ಅಪಾಯವು ಈಗಿಲ್ಲವಾದರೂ, ಈ ವಿವರಣೆಯು ಪ್ರಜಾಪ್ರಭುತ್ವವು ಅದು ವಾಸ್ತವವಾಗಿ ಇರುವುದಕ್ಕಿಂತ ಹೆಚ್ಚು ಸುರಕ್ಷಿತವಾದ ಸ್ವತ್ತು ಎಂಬ ಭಾವನೆಯನ್ನು ಮೂಡಿಸದಿರಲಿ ಎಂಬ ಉದ್ದೇಶದಿಂದ ಅದರ ಕಾರ್ಯವಿಧಾನದ ಅರ್ಥದಲ್ಲಿ ಪ್ರಜಾಪ್ರಭುತ್ವದ ಭವಿಷ್ಯವನ್ನು ಕುರಿತು ಕಳವಳನ್ನುಂಟುಮಾಡುವ ಅಂಶಗಳನ್ನು ಸಹ ನಾನಿಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ. ಭಾರತದ ಪ್ರಜಾಪ್ರಭುತ್ವದ ಔಪಚಾರಿಕ ಸಾಂಸ್ಕೃತಿಕ ವ್ಯವಸ್ಥೆಗಳು ಈ ಹಿಂದೆ ಯಾವಾಗಲೂ ಇಷ್ಟು ಸದೃಢವಾಗಿರಲಿಲ್ಲ. ಉದಾರ ರಾಜಕೀಯದ ಸಂಸ್ಥೆಗಳು ಪ್ರಜಾಪ್ರಭುತ್ವದ ಕಲ್ಪನೆಯು ಒಳಗಾದಂತೆ ಮನನ ಕ್ರಿಯೆಗೆ ಒಳಗಾಗಲಿಲ್ಲ. ಇವುಗಳು ಇತರೆ ವಸಾಹತೋತ್ತರ ರಾಜ್ಯಾಡಳಿತ ವ್ಯವಸ್ಥೆಗಳ ತಮ್ಮ ಪ್ರತಿರೂಪಗಳಿಗಿಂತ ಹೆಚ್ಚು ಪ್ರಬಲವಾದವುಗಳೆಂಬುದು ಸತ್ಯ; ಆದರೆ ಅವುಗಳು ಪ್ರಜಾಪ್ರಭುತ್ವ ಸರಪಳಿಯ ಅತ್ಯಂತ ಪ್ರಮುಖವಾದ ಕೊಂಡಿಗಳೇನಲ್ಲ. ಪ್ರಜಾಸತ್ತಾತ್ಮಕ ಪ್ರಕ್ರಿಯೆಯೇ ಇವುಗಳನ್ನು ಮತ್ತಷ್ಟು ಬಲಹೀನಗೊಳಿಸುತ್ತಿದೆ. ಚುನಾವಣಾ ಕಣದಲ್ಲಿ ಪ್ರಕ್ರಿಯೆಗೊಳಿಸಲಾಗದ ಹಕ್ಕುಸಾಧನೆಗಳು ಸಾಕಷ್ಟು ಗಮನವನ್ನು ಸೆಳೆಯಲಾಗಿಲ್ಲ. ನ್ಯಾಯಾಂಗ ವ್ಯವಸ್ಥೆಯು ಅದರ ಮೇಲೆ ಹೊರಿಸಲಾಗಿರುವ ದಾವೆಗಳ ಭಾರವನ್ನು ತಡೆದುಕೊಳ್ಳಬಲ್ಲದೆಂದು ಕಂಡುಬಂದ ಸಂದರ್ಭವೇ ಇಲ್ಲ. ನ್ಯಾಯಾಂಗದ ಮೇಲಿನ ಸ್ತರದಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಸಕ್ರಿಯತೆಯ ಹೊರತಾಗಿಯೂ, ಹಲವಾರು ವರ್ಷಗಳಿಂದಲೂ, ಅದರ ಪರಿಣಾಮಕಾರಿತ್ವವು ಅದರಲ್ಲೂ ಮುಖ್ಯವಾಗಿ ಜನರಿಗೆ ಅಗತ್ಯವಿರುವ ಕೆಳಸ್ತರದಲ್ಲಿನ ಪರಿಣಾಮಕಾರಿತ್ವವು ತೀವ್ರವಾಗಿ ಕುಸಿದಿದೆ. ವಸಾಹತುಶಾಹಿ ಕಾಲದಿಂದಲೂ ನಾಗರಿಕ ಸೇವೆಯು ಸದಾ ರಾಜಕೀಯಕರಣಗೊಂಡಿತ್ತು. ಪ್ರಜಾಪ್ರಭುತ್ವೀಕರಣವು ಇದನ್ನು ಉತ್ತರದಾಯಿತ್ವಕ್ಕನುಗುಣವಾದ ಅನುಕೂಲಗಳಿಲ್ಲದಂತೆ ಮತ್ತಷ್ಟು ರಾಜಕೀಯಕರಣಗೊಳಿಸಿದೆ. ಏಕೆಂದರೆ ಅಧಿಕಾರಿಶಾಹಿಯು ತನ್ನ ವಸಾಹತುಶಾಹಿ ಪರಂಪರೆಯನ್ನು ಮೀರಿ ಬೆಳೆಯಬೇಕಾಗಿದೆ. ಈ ಎರಡು ವ್ಯಾಧಿಗಳ ಸಂಯುಕ್ತ ಪರಿಣಾಮದಿಂದಾಗಿ ಸಾಮಾನ್ಯ ನಾಗರಿಕರು ಪರಿಣಾಮಕಾರಿ ಕಾನೂನಾತ್ಮಕ ಆಡಳಿತದಿಂದ ವಂಚಿತರಾಗಿದ್ದಾರೆ.

ಪ್ರಜೆಗಳು ಮತ್ತು ಆಡಳಿತ ಕೇಂದ್ರಗಳ ನಡುವೆ ಕೊಂಡಿಯಂತೆ ಕಾರ್ಯನಿರ್ವಹಿಸಬೇಕಾಗಿದ್ದ ಮಧ್ಯಂತರ ರಾಜಕೀಯ ಸಂಸ್ಥೆಗಳು, ಗಣನೀಯವಾಗಿ ಅವನತಿಗೀಡಾಗಿವೆ. ರಾಜಕೀಯ ಪಕ್ಷಗಳೊಳಗಿನ ಪ್ರಜಾಸತ್ತಾತ್ಮಕ ಕಾರ್ಯವಿಧಾನಗಳ ಕುಸಿತವು ಒಂದು ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ. ಈ ಶೂನ್ಯವನ್ನು ಇತ್ತೀಚೆಗೆ ವ್ಯವಸ್ಥಾಪನ ಶೈಲಿಯ

ರಾಜಕೀಯ ಮತ್ತು ಅಪರಾಧೀಕರಣಗಳು ತುಂಬುತ್ತಿವೆ. ಪ್ರಬಲವಾದ ಆರ್ಥಿಕ ಹಿತಾಸಕ್ತಿಗಳೊಂದಿಗೆ ರಾಜಕೀಯ ಶಕ್ತಿಗೆ ಕಾರಣವೆನಿಸಿದ ಸಂಪರ್ಕ ಮತ್ತು ಇತ್ತೀಚಿನ ಜಾಗತೀಕರಣವು ಭಾರತದ ಆರ್ಥಿಕತೆಯ ಮೇಲೆ ಉಂಟುಮಾಡಿರುವ ಸಂರಚನಾತ್ಮಕ ಮಿತಿಗಳ ಫಲಸ್ವರೂಪವಾಗಿ ಭಾರತದ ಪ್ರಜಾಪ್ರಭುತ್ವೀಕರಣದ ಮಾರ್ಗದ ಹೃದಯ ಭಾಗವಾಗಿರುವ ರಾಜಕೀಯ ಪ್ರಕ್ರಿಯೆಯ ಸ್ವಾಯತ್ತತೆಯೇ ಇಂದು ಅತಿಕ್ರಮಣವನ್ನು ಎದುರಿಸುತ್ತಿದೆ. ಅನೇಕ ಮೂಲಸ್ವರೂಪದ ಪ್ರಜಾಪ್ರಭುತ್ವವಾದಿಗಳು ನಮ್ಮನ್ನು ನಂಬಿಸುತ್ತಿರುವಂತೆ, ಇವೆಲ್ಲವೂ ಪ್ರಜಾಪ್ರಭುತ್ವದ ಸನ್ನಿಹಿತವಾದ ಅಳಿವಿನ ಸೂಚನೆಗಳೇನಲ್ಲ. ಆದರೆ ರಾಜಕೀಯ ಪ್ರಕ್ರಿಯೆಯ ನಿಟ್ಟಿನಲ್ಲಿ ಸಾಕಷ್ಟು ವಿರೋಧವಿಲ್ಲದೆ, ಈ ಪ್ರವೃತ್ತಿಗಳು ಬೆಳೆಯುತ್ತಾ ಹೋದಲ್ಲಿ, ನಾವು ನಿಧಾನವಾಗಿ ಹೆಚ್ಚು ಗಾಢವಲ್ಲದ (intensity) ಪ್ರಜಾಪ್ರಭುತ್ವದ ಕಡೆಗೆ ಚಲಿಸುವಂತಾಗಬಹುದು.

## VIII

ಪ್ರಜಾಪ್ರಭುತ್ವದ ಕಾರ್ಯವಿಧಾನಾತ್ಮಕ ವ್ಯಾಖ್ಯೆಯಿಂದ ಹೆಚ್ಚು ವಾಸ್ತವಿಕ ವ್ಯಾಖ್ಯೆಯ ಕಡೆಗೆ ನಾವು ಮುಂದುವರಿದಂತೆ, ಅಂದರೆ ಸಾಂಸ್ಥಿಕ ಆದಾನಗಳ ಸಮುಚ್ಚಯವೊಂದರ ಕಡೆಗೆ ಕೇಂದ್ರೀಕೃತವಾದ ವ್ಯಾಖ್ಯೆಯಿಂದ ಅಪೇಕ್ಷಿತ ಫಲಿತಾಂಶಗಳ ಸಮುಚ್ಚಯವನ್ನು ಬೇಡುವ ವ್ಯಾಖ್ಯೆಯೆಡೆಗೆ ಸಾಗಿದಂತೆ, ಮೇಲೆ ಸೂಚಿಸಿದ ಎರಡು ಪ್ರಶ್ನೆಗಳಾದ ಪ್ರಜಾಪ್ರಭುತ್ವವೆಂದರೇನು ಮತ್ತು ಪ್ರಜಾಪ್ರಭುತ್ವ ಏನನ್ನು ನಿರ್ವಹಿಸುತ್ತದೆ ಎಂಬುದರ ನಡುವಿನ ವ್ಯತ್ಯಾಸವು ಮಾಯವಾಗುತ್ತದೆ. ಈ ಹಂತದಲ್ಲಿ ಸಾರ್ವತ್ರಿಕ ಶೋಧನ ಪಟ್ಟಿಯೊಂದರ (check-list) ವ್ಯಾಖ್ಯೆಯನ್ನು ಉಳಿಸಿಕೊಳ್ಳುವುದು ಸಹ ಕಷ್ಟವಾಗುತ್ತದೆ: ಪ್ರಜಾಪ್ರಭುತ್ವವೆಂಬ ಹೆಸರು ಪಟ್ಟಿಯ (label) ಮೂಲಕ ಸುಸ್ಪಷ್ಟಗೊಳಿಸಲಾದ ಐತಿಹಾಸಿಕವಾಗಿ ನಿರ್ದಿಷ್ಟವೆನಿಸಿದ ಕನಸುಗಳು ಮತ್ತು ಆದರ್ಶಗಳನ್ನು ಉಲ್ಲೇಖಿಸದೆ ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸುವುದು ಸಾಧ್ಯವಿಲ್ಲ. ಭಾರತೀಯ ಮಾದರಿಯಲ್ಲಿ ಅಂತರ್ಗತವಾಗಿರುವ ನಾಲ್ಕು ಗುರಿಗಳತ್ತ ಇದು ನಮ್ಮನ್ನು ಹಿಂತಿರುಗಿ ಕರೆತರುತ್ತದೆ. ಅವುಗಳನ್ನು ಉಲ್ಲೇಖಿಸುವ ಮೂಲಕ ಪ್ರಜಾಸತ್ತಾತ್ಮಕ ರಾಜ್ಯಾಡಳಿತ ವ್ಯವಸ್ಥೆಯ ಸಾಧನೆಗಳು ಮತ್ತು ವೈಫಲ್ಯಗಳನ್ನು ಚರ್ಚಿಸಬಹುದಾಗಿದೆ.

ಕಾರ್ಯವಿಧಾನಾತ್ಮಕ ಪ್ರಜಾಪ್ರಭುತ್ವದ ಸಾಧನೆ ಮತ್ತು ಪೋಷಣೆಯೇ ರಾಜಕೀಯ ಪ್ರಜಾಪ್ರಭುತ್ವದ ಮೊದಲ ಗುರಿಯನ್ನು ಭಾಗಶಃ ಮನಗಾಣುತ್ತದೆ. ಪ್ರಜಾಪ್ರಭುತ್ವವು ಕೇವಲ ತನ್ನ ಇರುವಿಕೆಯಿಂದಲೇ ಘನತೆ ಮತ್ತು ಸ್ವಾತಂತ್ರ್ಯವನ್ನು ಒದಗಿಸುತ್ತದೆ. ಭಾರತದ ಮಾದರಿಯಲ್ಲಿ, ಪ್ರಜಾಪ್ರಭುತ್ವವು ಇತರೆ ಎಲ್ಲಾ ಗುರಿಗಳ ಸಾಕ್ಷಾತ್ಕಾರಕ್ಕೆ ಒಂದು ಪ್ರಮುಖ ಸಾಧನ ಮತ್ತು ಅವಶ್ಯಕ ಸ್ಥಿತಿಯಾಗಿದೆ. ಈ ಅರ್ಥದಲ್ಲಿ ನೋಡುವುದಾದರೆ, ಮೇಲೆ ತಿಳಿಸಿದ ಮಿತಿಗಳ ಹೆಚ್ಚಳದ ನಡುವೆಯೂ ಭಾರತದ ರಾಜ್ಯವ್ಯವಸ್ಥೆಯು ಸಮರ್ಥನೆಗೆ ಅರ್ಹವಾದುದನ್ನು ಸಾಧಿಸಿದೆ. ತನ್ನ ಪರಿಧಿಯಲ್ಲಿನ ಕ್ಷೇತ್ರಗಳ ಬಹುತೇಕ ಭಾಗಗಳಲ್ಲಿ, ಇದುವರೆಗೆ ಯಾವುದೇ ಪ್ರಜಾಸತ್ತಾತ್ಮಕ ಅಥವಾ ಇತರೆ ಪ್ರಭುತ್ವದ ಮೌಲಿಕ ನಿರೀಕ್ಷೆಯನ್ನಾದರೂ ಅದು ಪೂರೈಸಿದೆ: ತನ್ನ ಸ್ವಂತ ಸ್ವರೂಪವನ್ನು ಮತ್ತು ತನ್ನ ನಾಗರಿಕರನ್ನು ಪೂರ್ಣ ಅರಾಜಕತೆಯಿಂದ ರಕ್ಷಿಸಿದೆ. ಭಾರತವು ಸೇನಾಸ್ವಾಧೀನದ ದೂರದ ಸಾಧ್ಯತೆಯನ್ನು ಇಲ್ಲವಾಗಿಸಿದೆ. ಪರಂಪರೆಯಿಂದ ತನಗೆ ಪ್ರಾಪ್ತವಾದ ಕ್ಷೇತ್ರೀಯ ಗಡಿಗಳನ್ನು ಯಶಸ್ವಿಯಾಗಿ ಕಾಪಾಡಿಕೊಂಡಿದೆ (ಈಶಾನ್ಯದ ನಾಗಾಲ್ಯಾಂಡ್ ಮತ್ತು ಮಿಜೋರಾಂ ರಾಜ್ಯಗಳಲ್ಲಿ, ಕೆಲವೊಮ್ಮೆ ನಿಷ್ಕಾರುಣ್ಯವಾದ ಮತ್ತು ಪ್ರಜಾಪ್ರಭುತ್ವವಿರೋಧಿಯೆನಿಸಿದ ವಿಧಾನದ ಮೂಲಕ). ಭಾರತದ ಬಹುತೇಕ ನಾಗರಿಕರು ಸಂಪೂರ್ಣ ಅರಾಜಕತೆಯ ಅನುಭವಕ್ಕೆ ಸಾಮಾನ್ಯವಾಗಿ ಒಳಗಾಗುವುದಿಲ್ಲವೆಂಬುದು ಒಬ್ಬ ಮೂಲಸ್ವರೂಪದ ಪ್ರಜಾಪ್ರಭುತ್ವವಾದಿಗೆ ಉತ್ಸಾಹವನ್ನು ತರುವುದಿಲ್ಲ. ಪ್ರಜಾಸತ್ತಾತ್ಮಕ ಪ್ರಭುತ್ವಗಳು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಉನ್ನತ ಆದರ್ಶಗಳನ್ನು ಸಾಕ್ಷಾತ್ಕಾರಗೊಳಿಸಲು ಸಾಧ್ಯವಾಗದೇ ವಿಫಲವಾಗುವುದಕ್ಕಿಂತ ಹೆಚ್ಚಾಗಿ, ಅವು ಅತ್ಯಂತ ಅಲ್ಪತಮ

ನಿರೀಕ್ಷೆಗಳನ್ನು ಪೂರೈಸುತ್ತವೆಂದು ನಂಬಲಾಗದ ಕಾರಣಕ್ಕೆ ಕುಸಿಯುತ್ತವೆಂಬುದನ್ನು ನೆನಪಿಟ್ಟುಕೊಳ್ಳುವುದು ಪ್ರಯೋಜನಕಾರಿ.

ಸಂಸ್ಥೆಗಳ ಒಂದು ಗುಂಪಾಗಿ ಅಥವಾ ಒಂದು ಪ್ರಭುತ್ವವಾಗಿ ಪ್ರಜಾಪ್ರಭುತ್ವದ ಸಾಧನೆಗಳು ಪ್ರಜಾಪ್ರಭುತ್ವದ ಕಲ್ಪನೆಯೊಂದಿಗೆ ಅಂತರ್ಗತವಾಗಿರುವ ಆಳವಾದ ನೈತಿಕ ಅಂತಃಪ್ರೇರಣೆಯನ್ನು ತೃಪ್ತಿಪಡಿಸಲಾರವು. ಒಂದು ರಾಜಕೀಯ ಆದರ್ಶವಾಗಿ ಪ್ರಜಾಪ್ರಭುತ್ವವು, ಸಾಮಾನ್ಯ ನಾಗರಿಕರು ನಿಜವಾದ ಸ್ವಾತಂತ್ರ್ಯವನ್ನು ಆನಂದಿಸುವ ಮತ್ತು ತಮ್ಮನ್ನು ತಾವೇ ಆಳಿಕೊಳ್ಳುವ, ಎಲ್ಲರೂ ಸಮಾನರಾದ ಸಮುದಾಯದ ಭರವಸೆಯನ್ನು ನೀಡುತ್ತದೆ. ಭಾರತದ ರಾಷ್ಟ್ರೀಯತಾ ಚಳುವಳಿಯು ಈ ಆದರ್ಶವನ್ನು ಸ್ವರಾಜ್ಯದ, ಅಂದರೆ ಆಳವಾದ ಅರ್ಥದಲ್ಲಿ ಸ್ವಯಂ ಆಡಳಿತದ ಗುರಿಯಾಗಿ ಮಾರ್ಪಡಿಸಿತ್ತು. ಭಾರತದ ಪ್ರಜಾಪ್ರಭುತ್ವವು ಈ ಆದರ್ಶವನ್ನು ನನಸಾಗಿಸುವ ಸಮೀಪಕ್ಕಾದರೂ ಬಂದಿದೆಯೆಂದು ಯಾರಾದರೂ ಭಾವಿಸಿದಲ್ಲಿ ಆ ವ್ಯಕ್ತಿಯ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಬೇಕಾಗುತ್ತದೆ. ಬಹುಶಃ ಯಾವುದೇ ಪ್ರಜಾಪ್ರಭುತ್ವದಿಂದ ಇದು ಸಾಧ್ಯವಾಗಿಲ್ಲ. ಈ ಆದರ್ಶವನ್ನು ಅದರ ನೈತಿಕ ಆಕರ್ಷಣೆಯ ಕಾರಣಕ್ಕಾಗಿ ಒಪ್ಪಿಕೊಂಡವರಿಗೆ ಇದೊಂದು ಕಳಪೆ ಸಮಾಧಾನವಷ್ಟೆ. 1998ರ ಆಗಸ್ಟ್ 14-15ರ ಮಧ್ಯರಾತ್ರಿಯ ಪ್ರಸಿದ್ಧ “ವಿಧಿಯೊಡನೆ ಒಪ್ಪಂದ” ಭಾಷಣ ಮಾಡಿದಾಗಿನಿಂದಲೂ ಸಮಾನತೆಯ ಭರವಸೆಯು ಪೊಳ್ಳು ಭರವಸೆಯಾಗಿಯೇ ಉಳಿದಿದೆ. ಪ್ರಜಾಪ್ರಭುತ್ವದ ಸಂಚಾಲನೆಯ ಫಲಸ್ವರೂಪವಾಗಿ ಲಭ್ಯವಾಗಿರುವುದು ಸಮುದಾಯವಾಗಲಿ, ಸಮಾನತೆಯಾಗಲೀ ಅಲ್ಲ. ಅದು ಅಸ್ತಿತ್ವಕ್ಕೆ ತಂದಿರುವ ರಾಜಕೀಯ ಸಮುದಾಯ ಅಥವಾ ರಾಜಕೀಯಕರಣಗೊಂಡ ಸಾಮಾಜಿಕ ಸಮುದಾಯಗಳು ಸಮುದಾಯಗಳೇ ಅಲ್ಲ. ಅವುಗಳು ಹಂಚುವ ಬದುಕನ್ನು ವಿಕೃತವೆಂದು ಹೇಳಲಾಗದಿದ್ದರೂ ಸಾರಹೀನವೆನ್ನಬಹುದು. ಅದು ಔಪಚಾರಿಕವಾಗಿಯಾದರೂ ನೀಡುವ ಸ್ವಾತಂತ್ರ್ಯವು ಅತ್ಯಂತ ಅಸಮಾನ ಪ್ರಮಾಣದಲ್ಲಿ ಹಂಚಲ್ಪಟ್ಟಿದೆ. ಅಮೂರ್ತರೂಪದಲ್ಲಿ ಅದು ಜನರಿಗೆ ತರುವ ಅಧಿಕಾರವನ್ನು ನಿಜವಾದ ವ್ಯಕ್ತಿಗಳು ಎಲ್ಲೋ ಅಪರೂಪಕ್ಕೊಮ್ಮೆ ಚಲಾಯಿಸುತ್ತಾರೆ. ಭಾರತ ಗಣರಾಜ್ಯದ ಪೂರ್ಣ ನಾಗರಿಕರಾದ ಅನೇಕ ಮಂದಿ ಬ್ರಿಟಿಷ್ ಆಡಳಿತದಡಿಯಲ್ಲಿ ತಮ್ಮನ್ನು ಸಾಮರ್ಥ್ಯಹೀನರೆಂದು ಭಾವಿಸಿದ್ದು, ಈ ಪ್ರಜಾಪ್ರಭುತ್ವದಡಿಯಲ್ಲಿಯೂ ಅದೇ ಭಾವನೆಯನ್ನು ಹೊಂದಿದ್ದಾರೆ.

ಭಾರತದ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯು ರಾಷ್ಟ್ರೀಯ ಏಕತೆಯನ್ನು ಸಾಧಿಸುವಲ್ಲಿ ವಿಫಲವಾಗಿದೆ. ಆದರೆ ಭಾರತದ ನೆರೆಹೊರೆಯವರ ಉದಾಹರಣೆಗಳು ವ್ಯಕ್ತಪಡಿಸುವಂತೆ ನಮ್ಮ ಸಾಧನೆ ಇನ್ನಷ್ಟು ಕಳಪೆಯಾಗುತ್ತಿತ್ತು. ಕೆಲವು ಪ್ರದೇಶಗಳು (ಕಾಶ್ಮೀರ ಮತ್ತು ಈಶಾನ್ಯ ಬೆಟ್ಟದ ರಾಜ್ಯಗಳು) ಮತ್ತು ಅವಧಿಗಳನ್ನು (ಉದಾಹರಣೆಗೆ, ಶ್ರೀಮತಿ. ಗಾಂಧಿಯವರ ಎರಡನೇ ಅಧಿಕಾರಾವಧಿ) ಹೊರತುಪಡಿಸಿದರೆ, ಭಾರತದ ಗಣ್ಯರು ವಿಭಿನ್ನತೆಗಳ ಐಕ್ಯತೆಗೆ ಸಂಬಂಧಿಸಿದಂತೆ ‘ಕರಗುವ ಮಡಿಕೆ’ [(melting pot) ಮಿಶ್ರರೂಪದ ಸಮಾಜವು ಏಕರೂಪವಾಗಿ ಬದಲಾಗುವಿಕೆ] ಮಾದರಿಗಿಂತ ಹೆಚ್ಚಾಗಿ ‘ಸಲಾಡ್ ಬಟ್ಟಲಿನ’ [(salad bowl) ಬಹುಸಾಂಸ್ಕೃತಿಕ ಸಮಾಜವು ತನ್ನ ಪ್ರತ್ಯೇಕ ಅಸ್ಮಿತೆಯನ್ನು ಉಳಿಸಿಕೊಳ್ಳುತ್ತಲೇ ವಿವಿಧ ಸಂಸ್ಕೃತಿಗಳನ್ನು ಒಳಗೊಳ್ಳುವಿಕೆ] ಮಾದರಿಗೆ ಹೆಚ್ಚಾಗಿ ಮೊರೆಹೋಗಿರುವುದನ್ನು ಕಾಣಬಹುದು. ಇದರ ಅರ್ಥವೇನೆಂದರೆ, ವಿವಿಧ ಸಮುದಾಯಗಳು ಮತ್ತು ಮಹತ್ವಾಕಾಂಕ್ಷಿ ರಾಷ್ಟ್ರೀಯತೆಗಳಿಗೆ, ಭಾರತೀಯ ಉದ್ಯಮಶೀಲತೆಯನ್ನು ಸೇರಲು ತಮ್ಮ ಅಸ್ಮಿತೆಯನ್ನು ಬಿಟ್ಟುಕೊಡಬೇಕಾದ ಪೂರ್ವಷರತ್ತನ್ನು ವಿಧಿಸಿರುವುದಿಲ್ಲ. ಭಾರತೀಯ ಬಹು ಸಂಸ್ಕೃತಿಯ ಮಿಶ್ರಣದಲ್ಲಿ ಅವರನ್ನು ಪ್ರತ್ಯೇಕವಾದ ಮತ್ತು ವಿಭಿನ್ನವಾದ ಅಂಶಗಳಾಗಿ ಸ್ವೀಕರಿಸಲಾಗಿದೆ. ಮತ್ತೆ ಸಮತೋಲನದಲ್ಲಿ ಇದು ಕೆಲಸವನ್ನು ನಿರ್ವಹಿಸಿದೆ. ಇತರೆ ಸಮಾಜಗಳಲ್ಲಿ ವಿವಿಧ ಸಾಮಾಜಿಕ ಗುಂಪುಗಳ ನಡುವಿನ ಅಧಿಕಾರದ ಹಂಚಿಕೆಯ ನಿಟ್ಟಿನಲ್ಲಿ, ನಿಕಟ ಸಹಭಾಗಿತ್ವದ ವ್ಯವಸ್ಥೆಗಳು ನಿರ್ವಹಿಸಿರುವುದನ್ನು, ಸಾಮಾಜಿಕ ಮತ್ತು ಪ್ರಾದೇಶಿಕ ವೈವಿಧ್ಯತೆಗಳ ನ್ಯಾಯಯುತ ರಾಜಕೀಯ ಸ್ಪಷ್ಟೋಕ್ತಿ ಮತ್ತು ರಾಜಕೀಯ ಹೊಂದಾಣಿಕೆಯ ವ್ಯವಸ್ಥೆಯ ಮೂಲಕ ನಿರ್ವಹಿಸಲಾಗುವ ಸ್ಪರ್ಧಾತ್ಮಕ ಹಕ್ಕುಸಾಧನೆಗಳ ಸಂಧಾನವು ಉಪಲಬ್ಧಗೊಳಿಸಿದೆ. ಬಹುಮತದ ಅತಿರೇಕದ ಒಂದಕ್ಕಿಂತ ಹೆಚ್ಚು ಉದಾಹರಣೆಗಳನ್ನು ನಾವು ಕಾಣಬಹುದು (ಇತ್ತೀಚಿನ ಇತಿಹಾಸದಿಂದ ಎರಡು ಉದಾಹರಣೆಗಳನ್ನು

ತೆಗೆದುಕೊಳ್ಳುವುದಾದರೆ, 1984ರ ಸಿಖ್ ವಿರೋಧಿ ಗಲಭೆಗಳು ಮತ್ತು 1992ರಲ್ಲಿ ನಡೆದ ಬಾಬರಿ ಮಸೀದಿ ಧ್ವಂಸ ಪ್ರಕರಣ). ಆದರೆ ಪ್ರಜಾಸತ್ತಾತ್ಮಕ ರಾಜಕೀಯವು ಇದಕ್ಕೆ ಸಂಬಂಧಿಸಿದಂತೆ ಸ್ವಯಂ ಸರಿಪಡಿಕೆಯ ವ್ಯವಸ್ಥೆಯನ್ನು ರೂಪಿಸಿರುವಂತೆ ಕಾಣುತ್ತದೆ (1997ರ ಪಂಜಾಬ್ ಚುನಾವಣೆ ಮತ್ತು 1992ರಿಂದೀಚೆಗಿನ ಉತ್ತರ ಪ್ರದೇಶದ ರಾಜಕೀಯವು ಇದನ್ನು ಸ್ಪಷ್ಟಪಡಿಸುತ್ತದೆ). ಹಿಂತಿರುಗಿ ನೋಡಿದಾಗ ಕಳೆದ ಐವತ್ತು ವರ್ಷಗಳಲ್ಲಿ, ಗೋಚರಿತ ವೈವಿಧ್ಯತೆಗಳ ಪರಿಣಾಮಕಾರಿ ರಾಜಕೀಯ ಹೊಂದಾಣಿಕೆಯು ಭಾರತದ ಪ್ರಜಾಪ್ರಭುತ್ವದ ಅತ್ಯುತ್ತಮ ಸಾಧನೆಗಳಲ್ಲಿ ಒಂದೆಂಬುದಾಗಿ ಕಂಡುಬರುತ್ತದೆ.

ಆದರೆ ಸ್ವಭಾವತಃ ಇದು ಅಂತರ್ಗತವಾಗಿ ನಾಜೂಕಾದ ಕಾರ್ಯನಿರ್ಧಿಯೆನಿಸಿದ್ದು, ಅಧಿಕಾರ ಹಂಚಿಕೆಯು ವ್ಯವಸ್ಥೆಯನ್ನು ಲೆಕ್ಕಾಚಾರ ಮಾಡುವಲ್ಲಿ ಅಥವಾ ಸ್ವಯಂ ಸರಿಪಡಿಕೆಯ ವ್ಯವಸ್ಥೆಯು ತನ್ನಷ್ಟಕ್ಕೆ ತಾನೇ ಕೆಲಸ ಮಾಡಲು ಅವಕಾಶ ನೀಡುಲ್ಲಿ ರಾಜಕೀಯ ನಿರ್ವಾಹಕರ ಕೌಶಲದ ಅನಿಶ್ಚಿತತೆ ಸದಾ ಕಂಡಬರುತ್ತದೆ. ಭಾರತವು ಕೇಂದ್ರದ ಬಿಜೆಪಿ ಸರ್ಕಾರದ ರೂಪದಲ್ಲಿ ವೈವಿಧ್ಯಮಯ ರಾಜಕೀಯಕ್ಕಿರುವ ಅತ್ಯಂತ ಸಂಘಟನಾತ್ಮಕವಾದ ಸವಾಲನ್ನು ಎದುರಿಸಬೇಕಾಗಿರುವ ಈ ಸಂದರ್ಭದಲ್ಲಿ ಈ ಪಾಠವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಿದೆ. ಅಲ್ಪ ಮಟ್ಟದ ಸಂಘನೆಯನ್ನುಳ್ಳ, ಹೆಚ್ಚು ಗೋಚರಿತವಲ್ಲದ ಹಾಗೂ ಸಾಮಾನ್ಯ ಗ್ರಹಿಕೆಯಲ್ಲಿ ರಾಜಕೀಯವೆಂದು ಪರಿಗಣಿಸಲೂ ಆಗದ ಶಕ್ತಿಗಳಿಂದ, ವೈವಿಧ್ಯತೆಗಳ ಉಳಿವಿಗೆ ಅತ್ಯಂತ ಗಂಭೀರವಾದ ಸವಾಲು ಎದುರಾಗುತ್ತಿದೆ: ಸಾಂಸ್ಕೃತಿಕ ಏಕೀಕರಣ, ಆಧುನಿಕತೆಯ ಏಕ ಸಂಸ್ಕೃತಿ ಮತ್ತು ರಾಷ್ಟ್ರ-ರಾಜ್ಯ ಸಿದ್ಧಾಂತದ ಶಕ್ತಿಗಳು. ಸುವ್ಯಕ್ತವಾದ ಮತ್ತು ವೈವಿಧ್ಯತೆಯ ವಿರುದ್ಧದ ರಾಜಕೀಯ ಸವಾಲುಗಳನ್ನು ವ್ಯವಹರಿಸುವ ಪ್ರಜಾಸತ್ತಾತ್ಮಕ ರಾಜಕೀಯ ಸಾಮರ್ಥ್ಯದ ಬಗ್ಗೆ ಸ್ವಲ್ಪ ಹೇಳಬಹುದಾದರೂ ಆಂತರಿಕವಾಗಿಯೇ ಕಾಣಿಸಿಕೊಳ್ಳುವ ಈ ಆಳವಾದ ಬೆದರಿಕೆಗಳ ವಿರುದ್ಧದ ಹೋರಾಟದಲ್ಲಿ ಇದು ಬಹಳ ದುರ್ಬಲವಾದ ಮೈತ್ರಿಯೆಂಬುದು ಸಾಬೀತಾಗಿದೆ.

ಪ್ರಜಾಸತ್ತಾತ್ಮಕ ಆಹ್ವಾನವು ಸದಾ ಒಳಗೊಂಡಿದ್ದ ಸಾಮಾಜಿಕ ಕ್ರಾಂತಿಯ ಭರವಸೆಯು ಆಂಶಿಕವಾಗಿ ಮತ್ತು ಅಪೂರ್ಣವಾಗಿ ಪೂರೈಸಲ್ಪಟ್ಟಿದೆ. ಪ್ರಜಾಸತ್ತಾತ್ಮಕ ರಾಜಕೀಯವು ಸಮಾಜದ ಮೇಲೆ ಪರಿಣಾಮ ಬೀರಿಲ್ಲವೆಂದೇನೂ ಹೇಳಲಾಗದು. ವಾಸ್ತವವಾಗಿ, ಈ ಐವತ್ತು ವರ್ಷಗಳನ್ನು ಇತರೆ ಎಲ್ಲದಕ್ಕಿಂತಲೂ ಸ್ಪರ್ಧಾತ್ಮಕ ರಾಜಕೀಯ ವ್ಯವಸ್ಥೆಯಿಂದ ಪ್ರಚೋದಿಸಲ್ಪಟ್ಟಿರುವ ಮೂಲಭೂತ ರೂಪಾಂತರದ ವರ್ಷಗಳೆಂದು ಭಾರತೀಯ ಸಮಾಜದ ಇತಿಹಾಸದಲ್ಲಿ ದಾಖಲಿಸಬಹುದು. ಕನಿಷ್ಠಪಕ್ಷ ವಿಷಯವೊಂದಕ್ಕೆ ಸಂಬಂಧಿಸಿದಂತೆ ಇದು ಒಂದು ರೀತಿಯ ಕ್ರಾಂತಿಯನ್ನುಂಟುಮಾಡಿದೆ. ಈ ಐವತ್ತು ವರ್ಷಗಳಲ್ಲಿ ಜಾತ್ಯತೀತ ಶಕ್ತಿಯ ಭವಿಷ್ಯವಾಣಿಯಾಗಿ ಹಿಂದೂಗಳಲ್ಲಿನ ವಾಡಿಕೆಯಾಗಿ ಕಂಡುಬರುವ ಶ್ರೇಣಿಯ ಪಾತ್ರವು ಇದ್ದಕ್ಕಿದ್ದಂತೆ ಕಡಿಮೆಯಾಯಿತು. ಇದು ಒಂದು ಮೂಲಭೂತವಾದ ಬದಲಾವಣೆಯಾದರೂ, ತನ್ನಷ್ಟಕ್ಕೇ ತಾನೇ ಸಮಾನತೆಯ ಭರವಸೆಯನ್ನು ನೀಡುವುದಿಲ್ಲ. ಇದಕ್ಕೆ ಪ್ರತಿಯಾಗಿ, ಯಾವುದೇ ಆಶ್ಚರ್ಯವಿಲ್ಲದಂತೆ, ಪ್ರಜಾಸತ್ತಾತ್ಮಕ ರಾಜಕೀಯ ಕಾರ್ಯನಿರ್ವಹಣೆಯು ಸಾಮಾಜಿಕ ಸಮಾನತೆಯನ್ನು ಸ್ಥಾಪಿಸುವುದಕ್ಕೆ ಬದಲಾಗಿ, ಗಣ್ಯರ ಸಶಕ್ತ ಪರಿಚಲನೆ ಮತ್ತು ಸಮುದಾಯದ ವಿಸ್ತರಣೆಗೇ ಹೆಚ್ಚಿನ ಕೊಡುಗೆಯನ್ನು ನೀಡಿತು. ಜಾತಿಗಳು ಮತ್ತು ಸಮುದಾಯಗಳನ್ನು ರಾಜಕೀಯಕರಣಗೊಳಿಸುವ ನಿಟ್ಟಿನಲ್ಲಿ ಸಾಮಾಜಿಕ ಸಮಾನತೆಗೆ ಪ್ರಮುಖವಾಗಿ ಇದು ಕೊಡುಗೆಯನ್ನು ನೀಡಿದೆ. ನಂತರದಲ್ಲಿ ಇದು, ಜಾತ್ಯತೀತ ವಲಯದಲ್ಲಿ ಆತ್ಮಗೌರವದ ಸಮಾನತೆಗಾಗಿ ಹೋರಾಡುತ್ತದೆ.

ಲಿಂಗ ವಿಭಜನೆಯನ್ನು ಪಕ್ಷ ರಾಜಕಾರಣದ ಮಾರ್ಗಗಳಲ್ಲಿ ಒಗ್ಗೂಡಿಸುವುದು ಸುಲಭವಲ್ಲದ ಕಾರಣ, ಸ್ಪರ್ಧಾತ್ಮಕ ರಾಜಕೀಯವು ಜಾತಿ ಅಸಮಾನತೆಯಲ್ಲಿ ತಂದಂತಹ ಬದಲಾವಣೆಯನ್ನು ಲಿಂಗ ವಿಭಜನೆಯ ವಿಷಯದಲ್ಲಿ ತರಲು ವಿಫಲವಾಯಿತು. ಕಳೆದ ಐವತ್ತು ವರ್ಷಗಳಲ್ಲಿ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಅನುಕ್ರಮವಾಗಿ ಶೇಕಡ 8 ಮತ್ತು 4ರ ಅತ್ಯಂತ ಕಡಿಮೆ ಮಟ್ಟದಲ್ಲಿ ಸ್ಥಗಿತಗೊಂಡಿದೆ. ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಹೆಚ್ಚಿನ ಪ್ರಮಾಣದಲ್ಲಿಲ್ಲದಾಗ್ಯೂ, ಸಾರ್ವಜನಿಕ ಬದುಕಿನಲ್ಲಿ ಮಹಿಳೆಯರ ಧ್ವನಿ ಪ್ರಬಲವಾಗಿರುವಂತೆ ಅದು ಖಾತರಿಪಡಿಸಿದೆ. ಶಾಸನ ಸಭೆಗಳಲ್ಲಿ ಅವರ ಉಪಸ್ಥಿತಿ ಅಥವಾ ರಾಜಕೀಯ ಪಕ್ಷಗಳಲ್ಲಿನ ಅವರ

ಧ್ವನಿಗಿಂತ ಹೆಚ್ಚಾಗಿ ಮಹಿಳೆಯರ ಪ್ರಶ್ನೆಗಳು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆಯೆಂದರೆ ಅದಕ್ಕೆ ಪ್ರಮುಖ ಕಾರಣ, ವರ್ಧಿಸುತ್ತಿರುವ ಮಹಿಳಾ ಚಳುವಳಿಯು ವಿಚಾರಗಳ ರಾಜಕಾರಣಕ್ಕೆ ನೀಡಿರುವ ಮಹತ್ತರ ಕೊಡುಗೆ. ಇದರ ಪರಿಣಾಮವಾಗಿ, ಭಾರತವು ಲೈಂಗಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪ್ರಗತಿಪರವಾದ ಶಾಸನವನ್ನು ರೂಪಿಸಿದೆ. ಸ್ಥಳೀಯ ಪ್ರಜಾಸತ್ತಾತ್ಮಕ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ ಮೂರನೆ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಾಗಿರಿಸುವ ಅವಕಾಶವೂ ಇದರಲ್ಲಿ ಸೇರಿದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಸಂಬಂಧಿಸಿದಂತೆ ಇದೇ ರೀತಿಯ ವಿಧೇಯಕದ ವಿರುದ್ಧ ಕಂಡುಬಂದ ದೃಢವಾದ ವಿರೋಧವು ರಾಜಕೀಯ ಇಚ್ಛಾಶಕ್ತಿಯ ಕೊರತೆಯನ್ನು ಬಿಂಬಿಸುವುದರ ಜೊತೆಗೆ ಮಹಿಳೆಯರ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಸಾಂಕೇತಿಕ ಪ್ರಗತಿಪರವಾದದತ್ತ ನಮ್ಮ ಗಮನವನ್ನು ಸೆಳೆಯುತ್ತದೆ.

ಪ್ರಜಾಪ್ರಭುತ್ವ ರಾಜಕೀಯದ ಏಕೈಕ ಅತ್ಯಂತ ದೊಡ್ಡ ವೈಫಲ್ಯವೆಂದರೆ, ಭೌತಿಕ ಯೋಗಕ್ಷೇಮದ ಭರವಸೆಯನ್ನು ಈಡೇರಿಸದಿರುವುದು. ಪ್ರತಿಯೊಬ್ಬರಿಗೂ ಸಮಾನ ಮತ್ತು ಯುಕ್ತ ಸೌಕರ್ಯಗಳನ್ನು ಒದಗಿಸುವ ಭರವಸೆಯಿರಲಿ, ಜನರ ಕನಿಷ್ಠ ಅಗತ್ಯಗಳನ್ನು ಒದಗಿಸುವಲ್ಲಿ ಅಥವಾ ಅದರ ನಾಗರಿಕರು ಅನುಭವಿಸುವ ಜೀವನದ ಭೌತಿಕ ಸ್ಥಿತಿಗತಿಗಳಲ್ಲಿನ ಅತ್ಯಂತ ಕೆಟ್ಟ ಅನಾದರಗಳನ್ನು ಅಥವಾ ಅಸಮಾನತೆಗಳನ್ನು ನಿವಾರಿಸುವಲ್ಲಿಯೂ ಇದು ಯಶಸ್ವಿಯಾಗಿಲ್ಲ. ಬಹುತೇಕ ಜನರ ಜೀವನದ ಸ್ಥಿತಿಗತಿಗಳು ಹೆಚ್ಚು ಅಧೋಗತಿಗಿಳಿದಿಲ್ಲ, ಜನಸಂಖ್ಯೆಯಲ್ಲಿ ಬಡವರ ಪ್ರಮಾಣವನ್ನು ಸ್ವಲ್ಪಮಟ್ಟಿಗೆ ಕಡಿಮೆಮಾಡುವಲ್ಲಿ ಭಾರತವು ಸಾಧನೆಯನ್ನು ತೋರಿದೆ. ಭಾರತದ ಆರ್ಥಿಕತೆಯು ಅಸಾಧ್ಯವಾದ ಹಣದುಬ್ಬರ ಅಥವಾ ಸಾಲದ ಸುಳಿಯಲ್ಲಿ ಸಿಲುಕಿಲ್ಲವೆಂಬುದು ಸತ್ಯವೂ ಹೌದು. ಕನಿಷ್ಠಪಕ್ಷ ತುಲನಾತ್ಮಕ ದೃಷ್ಟಿಕೋನದಲ್ಲಿ ಇದು ಬಹುಶಃ ಒಂದು ಸಾಧನೆಯೇ ಸರಿ. ಇತ್ತೀಚಿನ ವರ್ಷಗಳಲ್ಲಿ ತಮ್ಮ ಆರ್ಥಿಕ ಸ್ಥಿತಿಗತಿಗಳು ಸುಧಾರಿಸಿವೆಯೆಂದು ಹೆಚ್ಚಿನ ಜನರು ಭಾವಿಸುತ್ತಿರುವುದು, ಇನ್ನೂ ಹೆಚ್ಚಿನ ಜನರು ತಮಗಿಂತಲೂ ತಮ್ಮ ಮಕ್ಕಳಿಗೆ ಜೀವನದಲ್ಲಿ ಉತ್ತಮ ಅವಕಾಶಗಳಿವೆ ಎಂಬ ಭಾವನೆಯನ್ನು ಹೊಂದಿರುವುದು ಸಹ ಸತ್ಯವೇ ಆಗಿದೆ. ಆದರೆ ಮುಖ್ಯವಾಗಿ ಕುಶಲಕರ್ಮಿಗಳ ಸಮುದಾಯಗಳು ಮತ್ತು ಪರಿಶಿಷ್ಠ ಪಂಗಡದವರನ್ನೊಳಗೊಂಡ ಒಂದು ಗಣನೀಯ ಅಲ್ಪಸಂಖ್ಯಾತ ವರ್ಗವು ಇದನ್ನು ಒಪ್ಪುವುದಿಲ್ಲ ಮತ್ತು ಈ ವರ್ಗವು ತಮ್ಮ ಜೀವನದ ಗುಣಮಟ್ಟದಲ್ಲಿ ಸರ್ವಾಂಗೀಣ ಅವನತಿಯನ್ನು ಅನುಭವಿಸಿದೆ. ಮಹತ್ವದ ಸಾಧನ ಸಂಪತ್ತುಗಳೆನಿಸಿದ ಸಾರ್ವಜನಿಕ ಆರೋಗ್ಯದ ಲಭ್ಯತೆ ಮತ್ತು ಸಾರ್ವಜನಿಕ ಶಿಕ್ಷಣದ ಗುಣಮಟ್ಟದಲ್ಲಿ ಇತರರಿಗೂ ಸಹ ಸ್ಪಷ್ಟವಾದ ಕುಸಿತವು ಕಂಡುಬರುತ್ತದೆ.

ಪ್ರಜಾಸತ್ತಾತ್ಮಕ ರಾಜಕೀಯವು ಬಡವರ ಸಂಭಾವ್ಯ ಬಹುಮತವನ್ನು ರಾಜಕೀಯ ಬಹುಮತವಾಗಿ ಪರಿವರ್ತಿಸಲು ಒಂದು ಔಪಚಾರಿಕ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿತು. ಈ ಬಹುಮತವು ನಂತರದಲ್ಲಿ, ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿರುವವರ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಭೌತಿಕ ಸಂಪನ್ಮೂಲಗಳ ಮರುಹಂಚಿಕೆ ಮತ್ತು ಅವುಗಳ ಸಂವರ್ಧನೆಯ ಕಾರ್ಯವನ್ನು ಕೈಗೊಳ್ಳಲು ರಾಜ್ಯಾಧಿಕಾರವನ್ನು ವಹಿಸಿಕೊಳ್ಳುತ್ತದೆ. ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯು ಈ ವ್ಯವಸ್ಥೆಯು ವಸ್ತುತಃ ಇದೇ ಕಾರ್ಯಕ್ಕೆ ಬಳಕೆಯಾಗುವುದನ್ನು ಖಾತರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ತನ್ನಷ್ಟಕ್ಕೆ ತಾನೇ ಏನನ್ನೂ ಮಾಡುವುದಿಲ್ಲ. ಇತರೆ ಪರಿಸ್ಥಿತಿಗಳು ಅಂದರೆ ಸಂಭಾವ್ಯ ಬಹುಮತವನ್ನು ಅವರ ವಿಶ್ವಾಸವನ್ನು ಗಳಿಸುವ ಮೂಲಕ ರಾಜಕೀಯ ಬಹುಮತವಾಗಿ (ತನ್ನದೇ ವರ್ಗದಿಂದ, ತನಗಾಗಿ ವರ್ಗ ಎಂಬ ನಿಟ್ಟಿನಲ್ಲಿ) ರೂಪಾಂತರಿಸಲು ಅಗತ್ಯವಿರುವ ರಾಜಕೀಯ ಸಂಸ್ಥೆಯ ಲಭ್ಯತೆಯ ಸ್ಥಿತಿಗತಿಗಳು ಅತ್ಯಂತ ಅನಿಶ್ಚಿತವೆಂಬುದು ಸಾಬೀತಾಗಿದೆ. ಆ ಕಾಲದಲ್ಲಿ ಆರ್ಥಿಕಾಭಿವೃದ್ಧಿ ಎಂದು ಕರೆಯಲಾಗುತ್ತಿದ್ದುದಕ್ಕೆ ರಾಜಕೀಯವು ಮೂರು ನಿರ್ಣಾಯಕ ಅಂಶಗಳನ್ನು ಒದಗಿಸಬೇಕೆಂಬುದು ಭಾರತೀಯ ಮಾದರಿಯ ನಿರೀಕ್ಷೆಯಾಗಿತ್ತು: ರಾಜಕೀಯವು ಆರ್ಥಿಕಾಭಿವೃದ್ಧಿಗೆ ಒಂದು ನೀಲಿನಕ್ಷೆಯನ್ನು ಒದಗಿಸಿ, ಆರ್ಥಿಕ ಹಿತಾಸಕ್ತಿಗಳ ಸಂರಚನೆಗಳ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜಕೀಯ ಇಚ್ಛಾಶಕ್ತಿಯನ್ನು ನೀಡಬೇಕಿತ್ತಲ್ಲದೆ, ಸಮಾನತಾವಾದಿ ರಾಜಕೀಯಕ್ಕೆ ಜನರ ಬೆಂಬಲವನ್ನು ಸೃಷ್ಟಿಸಬೇಕಿತ್ತು. ಆಚರಣೆಯಲ್ಲಿ ಇದು ಕೇವಲ ಮೂರನೆ ಅಂಶವನ್ನು,

ಭಾಗಶಃವಾಗಿ ಒದಗಿಸಲಷ್ಟೇ ಯಶಸ್ವಿಯಾಯಿತು. ಜಾಗತೀಕರಣ ಮತ್ತು ಉದಾರೀಕರಣದ ಅತ್ಯಂತ ಇತ್ತೀಚಿನ ಹಂತವು ಸಮಾನತಾವಾದಿ ರಾಜಕೀಯದಲ್ಲಿನ ಅವಶೇಷದಿಂದ ನಿರ್ಣಾಯಕವಾದ ಹಿಮ್ಮೆಟ್ಟುವಿಕೆಯನ್ನು ಗುರುತಿಸುತ್ತದೆ. ಏನನ್ನಾದರೂ ಮಾಡಬೇಕೆಂಬ ಪರಿಣಾಮಕಾರಿ ರಾಜಕೀಯ ಇಚ್ಛಾಶಕ್ತಿಯಿಲ್ಲವಾಗಿದೆಯಾದರೂ, ವಾಸ್ತವವಾಗಿ, ಸಮಂಜಸವಾದ ಬೌದ್ಧಿಕ ಯೋಜನೆಯ ಮೂಲಕ ನಿರ್ವಹಿಸಬಹುದಾದುದು ಬಹಳ ಕಡಿಮೆಯೆಂದೇ ಹೇಳಬಹುದು. ರಾಜಕೀಯ ವಿಸ್ಮರಣೆ ಮತ್ತು ಅರಿವಿನ ಸ್ತಂಭನದ ಈ ಸಂಯೋಜನೆಯು ಭಾರತೀಯ ಪ್ರಯತ್ನಶೀಲತೆಗೆ ಆಧಾರವಾಗಿರುವ ನೈತಿಕ ಅಂತಃಪ್ರೇರಣೆಗೆ ಇಂದು ಅತ್ಯಂತ ಮಹತ್ವದ ಸವಾಲನ್ನೊಡ್ಡುತ್ತಿದೆ.

## IX

ಈ ಕತೆಯೊಂದಿಗೆ ಅವ್ಯಕ್ತವಾಗಿರುವ ಸಾಮಾನ್ಯ ಪ್ರಶ್ನೆಯೊಂದನ್ನು ಕೇಳುವ ಮೂಲಕ ಈ ಕತೆಗೆ ಅಂತ್ಯ ಹಾಡುತ್ತೇನೆ. ಪ್ರಜಾಪ್ರಭುತ್ವದ ಕಲ್ಪನೆಯು ಕೆಳಮುಖವಾಗಿ ಚಲಿಸಿದಾಗ ಏನಾಗುತ್ತದೆ? ಐವತ್ತು ವರ್ಷಗಳ ಹಿಂದೆ ಈ ಪ್ರಶ್ನೆಯನ್ನು ಕೇಳುವ ಅವಶ್ಯಕತೆಯಿದೆ ಎಂದು ಯಾರಿಗೂ ಅನಿಸಲೇ ಇಲ್ಲ. ಪುನರಾವಲೋಕಿಸಿದಾಗ, ಐವತ್ತು ವರ್ಷಗಳ ಹಿಂದೆ ಪ್ರಜಾಪ್ರಭುತ್ವವನ್ನು ಒಂದು ಬಡ, ಅಸಮಾನ, ವಸಾಹತೋತ್ತರ ಸಮಾಜದಲ್ಲಿ ಸ್ಥಾಪಿಸುವ ನಿರ್ಧಾರವು ಈಗಿನಷ್ಟು ಸಾಹಸಮಯವಾಗಿ ಕಂಡುಬರಲಿಲ್ಲ. ಆ ಸಮಯದಲ್ಲಿನ ಉತ್ಸಾಹವು ಬೇರೆ ಯಾವುದೇ ಸಮಾಜವು ಈ ಮಾರ್ಗವನ್ನು ಯಶಸ್ವಿಯಾಗಿ ಕ್ರಮಿಸಿಲ್ಲವೆಂಬ ವಾಸ್ತವವನ್ನು ಪ್ರತಿಯೊಬ್ಬರೂ ನಿರ್ಲಕ್ಷಿಸಲು ಸಹಕಾರಿಯಾಯಿತು ಅಥವಾ ಆಗಿನಿಂದ ಬೇರೆ ಯಾರೂ ಇದನ್ನು ಕೈಗೊಂಡಿರುವುದಿಲ್ಲ. ಭಾರತವು ಬಡತನ ಅಥವಾ ಅಸಮಾನತೆಯನ್ನು ನಿವಾರಿಸುವಲ್ಲಿ ಅಥವಾ ವಸಾಹತುಶಾಹಿಯ ಸಾಂಸ್ಕೃತಿಕ ಹೊರೆಯನ್ನು ಇಳಿಸುವಲ್ಲಿ ವಿಫಲವಾಯಿತಾದರೂ, ಪ್ರಜಾಪ್ರಭುತ್ವವಾಗಿ ಉಳಿಯುವಲ್ಲಿ ಯಶಸ್ವಿಯಾಯಿತು. ನಾವು ಪ್ರಾರಂಭಿಸಿದ ಆದರ್ಶಗಳ ಗುಂಪಿನಲ್ಲಿ ಪ್ರಜಾಪ್ರಭುತ್ವವು ಮಾತ್ರ ಉಳಿದುಕೊಳ್ಳುತ್ತದೆಂಬ ಸಾಧ್ಯತೆಯ ಬಗ್ಗೆ ಐವತ್ತು ವರ್ಷಗಳ ಹಿಂದೆ ಯಾರೂ ಯೋಚಿಸಿರಲಿಲ್ಲ. ಇತಿಹಾಸಕಾರಾಗಲಿ, ಪ್ರಜಾಪ್ರಭುತ್ವದ ರಾಜಕೀಯ ಸಿದ್ಧಾಂತಕಾರರಾಗಲಿ ಈ ಸಾಧ್ಯತೆಗೆ ನಮ್ಮನ್ನು ಸಿದ್ಧಪಡಿಸಿರಲಿಲ್ಲ ಅಥವಾ ಅನಂತರವೂ ಅವರು ಅದನ್ನು ನಿರ್ವಹಿಸಿರುವುದಿಲ್ಲ.

ಈ ಪ್ರಶ್ನೆಯ ಬಗ್ಗೆ ಯೋಚಿಸದಿರಲು ಇನ್ನೊಂದು ಕಾರಣವಿದೆ. ಈ ಆಟದ ಮೂಲ ಆತಿಥೇಯರಾದ ನಮ್ಮ ಪ್ರಜಾಪ್ರಭುತ್ವದ ನಿರ್ಮಾತೃಗಳು ಪ್ರಜಾಸತ್ತಾತ್ಮಕ ಕಲ್ಪನೆಯು ಅದು ಕೆಳಮುಖವಾಗಿ ಚಲಿಸುತ್ತಿರುವಾಗ ಅವಿಕಲವಾಗಿಯೇ (intact) ಇರುತ್ತದೆಂಬ ಭ್ರಮೆಯನ್ನು ಪೋಷಿಸಿದರು. ಭಾರತದ ಮಾದರಿಯು, ವಿಚಾರಗಳ ಶುದ್ಧ ಪ್ರಸರಣವಿರುತ್ತದೆಂದು ಭಾವಿಸಿತು; ಪಾಶ್ಚಿಮಾತ್ಯ ಪ್ರಜಾಪ್ರಭುತ್ವದ ಸಂಯೋಜಿತ ಸಂಸ್ಥೆಗಳು ಮತ್ತು ವಿಚಾರಗಳು ಅವುಗಳ ಶುದ್ಧರೂಪದಲ್ಲಿ ಜನಸಾಮಾನ್ಯರವರೆಗೆ ಪ್ರಸಾರಿತಗೊಳ್ಳುತ್ತವೆಂದು ಭಾವಿಸಲಾಗಿತ್ತು. ಈ ವಿಚಾರವನ್ನು ಸ್ವೀಕರಿಸುವವರು ಸ್ವತಃ ತಾವೇ ಚಿಂತನಶೀಲ ಮನೋಭಾವದವರಾಗಿದ್ದು, ಸ್ವೀಕರಿಸಿದ ವಿಚಾರಗಳನ್ನು, ಉದಾರವಾದಿ ಸಿದ್ಧಾಂತಗಳನ್ನು ಗಣ್ಯರು ನಿರ್ವಹಿಸಿದಂತೆಯೇ ರೂಪಾಂತರಿಸಬಲ್ಲರೆಂಬ ಸಂದೇಹದಿಂದ ಈ ಮಾದರಿಯು ಹಾಳಾಗದೇ ಉಳಿದಿತ್ತು. ಸಮಾಜ ವಿಜ್ಞಾನದ ಇತ್ತೀಚಿನ ಪದಕೋಶವನ್ನು ಉಪಯೋಗಿಸಿಕೊಂಡು ಹೇಳುವುದಾದರೆ ಈ ಮಾದರಿಯಲ್ಲಿ ಸ್ವೀಕೃತಿಯ ಸಿದ್ಧಾಂತವು ಇಲ್ಲವಾಗಿದ್ದು, ಇದು ನಿರ್ಣಾಯಕ ಲೋಪವೆನಿಸಿತ್ತು. ಏಕೆಂದರೆ ಪ್ರಜಾಪ್ರಭುತ್ವದ ಯಶಸ್ಸು ಬಹುವಾಗಿ ಪ್ರಜಾಸತ್ತಾತ್ಮಕ ಕನಸನ್ನು ಜನರ ಕಲ್ಪನೆಯಲ್ಲಿ ಪುನರ್ಸೃಷ್ಟಿ ಮಾಡುವುದರಲ್ಲಿ, ಸಾರ್ವತ್ರಿಕ ಆದರ್ಶವನ್ನು ಭಾರತದ ಸಂದರ್ಭಕ್ಕೆ ನಿರ್ದಿಷ್ಟವಾಗಿ ನಿರೂಪಿಸುವುದರಲ್ಲಿದೆ. ಕೆಲವು ನಿರ್ಮಾತೃಗಳು ಬೇರೊಂದು ರೀತಿಯ ಭ್ರಾಂತಿಯನ್ನು ಪೋಷಿಸಿರಬಹುದು: ಪ್ರಜಾಪ್ರಭುತ್ವದ ಕಲ್ಪನೆಯು ಕೆಳಮುಖವಾಗಿ ಚಲಿಸುವಾಗ ಜನರು ಅದನ್ನು ತಮ್ಮಷ್ಟಕ್ಕೇ ತಾವೇ ರೂಪಾಂತರಿಸುತ್ತಾರೆ. ಈ ಕಾಲ್ಪನಿಕ ರೂಪಾಂತರದಲ್ಲಿ ಜನರು ಪ್ರಜಾಪ್ರಭುತ್ವವು ತಮ್ಮ ಭಾಷೆಯನ್ನು ನುಡಿಯುವಂತೆ ಮಾಡುತ್ತಾರಲ್ಲದೆ, ಅವರ ಅಗತ್ಯಗಳಿಗೆ ಉತ್ತಮವಾಗಿ ಹೊಂದುವಂತಹ ವ್ಯವಸ್ಥೆಯನ್ನು ರೂಪಿಸಿಕೊಳ್ಳುತ್ತಾರೆ.

ಕಳೆದ ಐದು ದಶಕಗಳ ಅನುಭವವು ಈ ಯಾವ ರೂಪಾಂತರವನ್ನೂ ದೃಢಪಡಿಸುವುದಿಲ್ಲ. ಭಾರತದಲ್ಲಿ ಪ್ರಜಾಪ್ರಭುತ್ವದ ಕಲ್ಪನೆಯ ಪ್ರಯಾಣವು ಅದು ಸ್ಪರ್ಶಸಿದ ಲಕ್ಷಾಂತರ ಜನರ ಜೀವನವನ್ನು ಬದಲಾಯಿಸಿದೆ. ಅಷ್ಟೇ ಅಲ್ಲ ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಅದು ಪ್ರಜಾಪ್ರಭುತ್ವದ ವಿಚಾರವನ್ನೂ ಸಹ ಬದಲಾಯಿಸಿದೆ: ಇದನ್ನು ಪ್ರಜಾಪ್ರಭುತ್ವದ ಸಂಕರ (creolization) ಅಥವಾ ದೇಶೀಕರಣವೆಂದು ಕರೆಯಬಹುದು. ಈ ರೂಪಾಂತರವು ಪ್ರಜಾಪ್ರಭುತ್ವವು ಭಾರತದಲ್ಲಿ ಸಾಧಿಸಿದ ಯಾವುದೇ ಯಶಸ್ಸಿನ ಕೇಂದ್ರ ಭಾಗದಲ್ಲಿದೆ. ಪ್ರಜಾಸತ್ತಾತ್ಮಕ ವಿಚಾರವನ್ನು ಜನರ ನಂಬಿಕೆಗಳೊಂದಿಗೆ ಮಿಳಿತಗೊಳಿಸುವ ಗಂಭೀರವಾದ ಪ್ರಯತ್ನ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಜನರ ಭಾಷೆಯೊಡನೆ ಸಹಭಾಜಿತ (shared) ಕ್ರಮಾಚಾರಗಳ ವಿಕಸನವು, ಭಾರತವನ್ನು ಪ್ರಜಾಸತ್ತಾತ್ಮಕ ಉಪಕ್ರಮವು ಉಡಾವಣೆಯೇ ಆಗದ ಇತರೆ ದೇಶಗಳಿಗಿಂತ ಭಿನ್ನವಾಗಿಸಿದೆ. ಭವಿಷ್ಯದಲ್ಲಿಯೂ ಈ ಭಿನ್ನತೆಯನ್ನು ಇದು ನಿರ್ವಹಿಸಬಲ್ಲದು.

ಕ್ರಿಯೋಲಿಕರಣವು (ಸಂಕರ) ತನ್ನಷ್ಟಕ್ಕೆ ತಾನೇ ಮಾಂತ್ರಿಕ ಪರಿಹಾರವಲ್ಲ. ಪ್ರಜಾಪ್ರಭುತ್ವದ ಸ್ವದೇಶೀಕರಣವು ಈ ಕಲ್ಪನೆಯ ಕಾರ್ಯನಿರ್ವಹಣೆಗೆ ಅವಶ್ಯವಿರುವ ಒಂದು ಸ್ಥಿತಿಯಾಗಿದೆ. ಆದರೆ ಇದಷ್ಟೇ ಪರ್ಯಾಪ್ತ ಸ್ಥಿತಿಯಲ್ಲ. ಈ ತರಹದ ಒಂದು ಬೃಹತ್ ಐತಿಹಾಸಿಕ ಪ್ರಕ್ರಿಯೆಯು ಯಾರದೇ ಕಥಾನಕವನ್ನು ಪಾಲಿಸುವುದಿಲ್ಲ. ಆ ಕಾರಣದಿಂದಲೇ ಇದು ಶುದ್ಧವಾದ ಫಲಿತಾಂಶಗಳನ್ನು ಉಂಟುಮಾಡುವುದಿಲ್ಲ. ಇದು ಖಾಲಿ ಸ್ಥಳಗಳನ್ನು ಬಿಟ್ಟುಬಿಡುತ್ತದೆ. ವಿರೋಧಾಭಾಸಗಳನ್ನು ಸೃಷ್ಟಿಸುತ್ತದೆ. ಪ್ರತಿಯೊಂದು ಅಸಮತೆಯನ್ನು ನೇರಮಾಡುವಂತಹ ಯಾವುದೇ ಕಾಣದ ಕೈ ಇಲ್ಲಿ ಕೆಲಸಮಾಡುವುದಿಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ, ಪ್ರತಿಯೊಂದು ಎಳೆಯನ್ನು ಅಂತರ್ಗತಗೊಳಿಸುವ ಹಾಗೂ ಪ್ರತಿಯೊಂದು ಕ್ರಮವನ್ನು ಅನುಬಂಧಿಸುವುದರ ಹೊರತಾಗಿ, ಮೂಲಭೂತವಾದ ಪ್ರಜಾಪ್ರಭುತ್ವದ ಭಾಷೆಯನ್ನು ಸೃಷ್ಟಿಸುವ ಮತ್ತು ಉಳಿಸಿಕೊಳ್ಳುವ ಯಾವುದೇ ಹತ್ತಿರದ ದಾರಿಗಳಿಲ್ಲ.